ಅಪರಂಜಿ

ನವೆಂಬರ್ 2005

ರಾ. ಶಿ. ಸಂಸ್ಮರಣಾ ವಿಶೇಷಾಂಕ



ದರ: ರೂ. 20

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ .....



ಸಂಪುಟ 23 ಸಂಚಿಕೆ - 2
ನವೆಂಬರ್ - 2005

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080 - 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068.

ನಮ್ಮ ನಿಮ್ಮಲ್ಲಿ

ಎರಡೂವರೆ ತಿಂಗಳು ಹೊರದೇಶದಲ್ಲಿದ್ದು ತಾಯ್ನಾಡಿಗೆ ಹಿಂತಿರುಗುವಾಗ, ಬೆಂಗಳೂರು ವಿಮಾನ ನಿಲ್ದಾಣದಲ್ಲಿ ವಿಮಾನ ಮೊದಲ ಬಾರಿ ಭೂಸ್ಪರ್ಶ ಮಾಡಿದಾಗ ಆಗುವ ಅನುಭವ ನಿಜಕ್ಕೂ ವರ್ಣನಾತೀತ. ಆಗ ಮೂಡುವ ಭಾವನೆಗಳಲ್ಲಿ, ಆನಂದ, ಸಂತೋಷಗಳ ಜೊತೆ ಒಂದು ವಿಧವಾದ Sence of security ಎನ್ನಬಹುದಾದ ಇಮೋಷನ್ ನನ್ನನ್ನು ಆವರಿಸಿತು. ಊರು ಬಿಟ್ಟು ದೂರ ಹೋದಾಗ ಮಾತ್ರಾ ನಮ್ಮ ಊರಿನ ಹಿರಿಮೆಯ ಅರಿವು ನಮಗಾಗುವುದು. ಇದಕ್ಕೆ ಮುಖ್ಯ ಕಾರಣ ನಮ್ಮ Social connectedness. ಸೂಟ್‌ಕೇಸಿಗಾಗಿ ಕರುಸಾಲ್ ಹತ್ತಿರ ಕಾಯುತ್ತಿರುವಾಗಲೂ ಪಕ್ಕದವರ ಹತ್ತಿರ ಯಾವ ಸಂಕೋಚವೂ ಇಲ್ಲದೇ ಲೋಕಾಭಿರಾಮವಾಗಿ ಹರಟಬಹುದು, ನಮ್ಮ ಸಮಾಜದಲ್ಲಿ. ಈ ಒಂದು ಸರಳ ಸವಲತ್ತು ಪಶ್ಚಿಮ ದೇಶಗಳಲ್ಲಿ ದುರ್ಲಭ. ಅಲ್ಲಿ ಅವರವರ ಕೆಲಸ ಅವರವರಿಗೆ. ಆದರೂ ಒಟ್ಟಿನಲ್ಲಿ ಹೇಳುವುದಾದರೆ ನನ್ನ ವಿದೇಶ ಪ್ರವಾಸ ಚೆನ್ನಾಗಿಯೇ ಇತ್ತು ಎನ್ನಬಹುದು. ಊರಿಗೆ ಬಂದ ತಕ್ಷಣ ನಮ್ಮ ಉಪಸಂಪಾದಕರ ಕಾಲ್. ಒಂದೆರಡು ದಿನ ವಿರಾಮ ಮಾಡಿ. ಏನೂ ತುರ್ತಿನ ಕೆಲಸ ಇಲ್ಲ. ಭಾನುವಾರ ಕೂತು, ನವೆಂಬರ್ ವಿಶೇಷಾಂಕದ ತಯಾರಿ, ರಾ.ಶಿ.ಯವರ ಜನ್ಮ ಶತಮಾನೋತ್ಸವದ ಸ್ಮರಣ ಸಂಚಿಕೆ ಕರಡು ತಿದ್ದುವಿಕೆ ಎಲ್ಲಾ ಮಾಡಿದರಾಯಿತು. ಮಂಗಳವಾರ ಇದಕ್ಕೆಲ್ಲಾ ಡೆಡ್‌ಲೈನ್ ಅಂತ ಬಹಳ ಆದರದಿಂದ ಹೇಳಿದರು. ನನ್ನ ವಿರಾಮದ ಬಗ್ಗೆ ಅವರ ಕಾಳಜಿ, ಸಹಾನುಭೂತಿ ಇವುಗಳನ್ನೆಲ್ಲಾ ನೋಡಿ ಹೃದಯ ತುಂಬಿ ಬಂತು.

ರಾ.ಶಿ.ಯವರ ಜನ್ಮ ಶತಮಾನೋತ್ಸವದ ಈ ಸಂದರ್ಭದಲ್ಲಿ ಅಪರಂಜಿಯ ನವೆಂಬರ್ ಸಂಚಿಕೆಯನ್ನು ಒಂದು ವಿಶೇಷಾಂಕವಾಗಿ ಹೊರತರುತ್ತಿದ್ದೇವೆ. ಈ ಸಂಚಿಕೆಯಲ್ಲಿ ಎಂದಿನ ಶೀರ್ಷಿಕೆಗಳೇ ಅಲ್ಲದೇ, ರಾ.ಶಿಯವರ ಬಹುಮುಖ ಪ್ರತಿಭೆಯನ್ನು ನೆನೆಯುವ ಅನೇಕ ಲೇಖನಗಳಿವೆ. ಈ ಕಾರ್ಯದಲ್ಲಿ ಸಹಕಾರ ನೀಡಿದ ಎಲ್ಲ ಲೇಖಕ ಲೇಖಕಿಯರಿಗೂ ನಮ್ಮ ಕೃತಜ್ಞತೆಗಳು. ಜಾಹಿರಾತಿಗಳನ್ನು ತರುವ ಯತ್ನದಲ್ಲಿ ಶ್ರಮಿಸಿದ ಮಿತ್ರರಾದ ಎ.ಆರ್.ರಾಜಗೋಪಾಲ್, ವಿ.ಆರ್.ನಾಥ್, ರವೀಂದ್ರ ರಾವ್ ಇವರಿಗೆಲ್ಲಾ ಅಪರಂಜಿ ಆಭಾರಿ.

ವಿವಿಧ ಲೇಖನಗಳ ರಸದೂಟ ನಿಮ್ಮ ಮುಂದಿದೆ. ಆಸ್ವಾದಿಸಿರೆಂದು ನಮ್ಮ ಸಲಹೆ.

✧ ಶಿವಕುಮಾರ್



ೲ ಪ್ರಕಾಶ್

ಐ.ಟಿ. ಕಂಪೆನಿಗಳ ಆಯ್ಕೆ ಸಮಿತಿಗೆ ಕನ್ನಡ ಪ್ರತಿನಿಧಿ ಇರಲಿ

- ಹೇಳಿಕೆ

Will it solve the problem?!

★★★

ಪಕ್ಷಕ್ಕೆ ಹಣ ನೀಡೋ ಶಕ್ತಿ ಹೇಗೆ ಬಂತು?

- ಮಾಜೀ ಪ್ರಧಾನಿ

ಈ ಹೇಳಿಕೆ ಮಾತ್ರ Profoundly Secular!!

★★★

ಟೆನಿಸ್ ಆಡದೇ ಇರುವ ಗಂಗೂಲಿಗೆ Tennis Elbow ಹೇಗೆ ಬಂತು ಎಂದು ಸಾನಿಯಾ ಆಶ್ಚರ್ಯ ಪಟ್ಟಳಂತೆ

★★★

ದೇವರು ನನಗೆ ಇರಾಕ್ ಮೇಲೆ ಯುದ್ಧ ಮಾಡು ಎಂದರು

- ಬುಷ್

ಜಗನ್ನಿಯಾಮಕ ಚಕಿತನಾದನಂತೆ!!

★★★

ಭಾರತ ತಂಡದ ಒಗ್ಗಟ್ಟು ಹಾಗೇ ಇದೆ

- ಸಚಿನ್

ಹಾಗೇ ಅಂದರೆ ಹೇಗೆ?

★★★

ಶಿಕ್ಷಣ ವ್ಯಾಪಾರೀಕರಣದ ತಡೆಗೆ ಸಿ.ಎನ್.ಆರ್. ರಾವ್ ಆಗ್ರಹ

- ಪತ್ರಿಕೆ

ಶಿಕ್ಷಣಕ್ಕಂತೂ VAT ಹಾಕೋಹಾಗಿಲ್ಲವಲ್ಲ?!

★★★


''ಅಡಕತ್ತರಿಯಲ್ಲಿ ಅಡಿಕೆ ಬೆಳೆಗಾರ''

ವ್ಹಾ! ಶೀರ್ಷಿಕೆ ಅಂದರೆ ಹೀಗಿರಬೇಕು!!

★★★



ಬೆಂಗಳೂರಿನ ಮಳೆಗೆ ನಮ್ಮ ಮಿಟಕಲಾಡಿ ಮೀನಾಕ್ಷಿ ಕಂಡುಕೊಂಡ ಉಪಾಯ



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

– ಬಾಗೂರು ಚಂದ್ರು

ರಾಶಿ (ಡಾ. ಎಂ. ಶಿವರಾಂ; ರಾ.ಶಿ.) ಒಂದು ಇಡೀ ತಲೆಮಾರಿನ ಕನ್ನಡ ಓದುಗರಿಗೆ ಸದಭಿರುಚಿಯ ಹಾಸ್ಯಸಾಹಿತ್ಯವನ್ನು ಪರಿಚಯ ಮಾಡಿಕೊಟವರು, ಸಾಹಿತ್ಯದಲ್ಲಿ ಹಾಸ್ಯದ ಅಪಾರ ಸಾಧ್ಯತೆಗಳನ್ನು ತೆರೆದಿಟ್ಟವರು. ಕೊರವಂಜಿಯ ಮೂಲಕ ಇವರು ಹಾಸ್ಯಸಾಹಿತ್ಯಕ್ಕೆ ಓದುಗರನ್ನು ಆಕರ್ಷಿಸಿದಂತೆಯೇ ಹಾಸ್ಯ ಲೇಖಕರ ಒಂದು ದೊಡ್ಡ ಗುಂಪನ್ನೂ ಕಟ್ಟಿ ಬೆಳೆಸಿದರು. ಪೌಗಂಡ ವಯಸ್ಸಿನವರಿಗೆ ಈಗಲೂ ಕಚಗುಳಿಕೊಡುವ, ಹಾಸ್ಯದ ಜೊತೆಗೆ ಶೃಂಗಾರ ಸೇರಿರುವ ನಗೆಸರಸಿ ಅಪ್ಸರೆಯರು, ನಾವೆಲ್ಲಾ ಬಾಲ್ಯದಲ್ಲಿ ಕೇಳಿದ್ದ ಮಾತನಾಡುವ ಪ್ರಾಣಿ ಪಕ್ಷಿಗಳ ಕತೆಗಳನ್ನು ಇಂದಿನ ಸಮಯಕ್ಕೆ ಪ್ರಸ್ತುತವೆನಿಸುವಂತೆ ಮಾಡಿ ಬರೆದ ಇಂದಾನೊಂದು ಕಾಲದಲ್ಲಿ ರಾಶಿಯವರ ಹಾಸ್ಯವೈವಿಧ್ಯಕ್ಕೆ ಉದಾಹರಣೆಗಳು. ಕೊರವಂಜಿಯಲ್ಲಿ ಅವರು ಬರೆದ ಹಲವಾರು ಚಿಕ್ಕಚಿಕ್ಕ ಹಾಸ್ಯ ಕತೆಗಳೇ ಇಂದಿನ ಹಾಸ್ಯೋತ್ಸವ ಭಾಷಣಕಾರರ ಮೂಲ ಬಂಡವಾಳ.

ರಾಶಿ ಮೂಲತಃ ಕತೆಗಾರರು. ಅವರು ಹಾಸ್ಯ ಕತೆಗಳನ್ನು ಬರೆದಿರುವಂತೆಯೇ ಹಾಸ್ಯವೇ ಮೂಲದ್ರವ್ಯವಲ್ಲದ ಹಲವಾರು ಉತ್ತಮ ಕತೆಗಳನ್ನೂ ಬರೆದಿದ್ದಾರೆ. ಇವುಗಳಲ್ಲಿ ಅವರ ಕಳ್ಳರ ಕತೆಗಳ ಎರಡು ಸಂಕಲನಗಳಿಗೆ ಕನ್ನಡ ಸಾಹಿತ್ಯದಲ್ಲಿಯೇ ಒಂದು ವಿಶಿಷ್ಟ ಸ್ಥಾನವಿದೆ. ಇವುಗಳಲ್ಲಿ ಒಂದು ಜಗ್ಗೋಜಿ- ಅನುಭವಿ ಕಳ್ಳನ ಅನುಭಾವಿ ಕತೆಗಳು. ಜಗ್ಗೋಜಿ ಕಳ್ಳತನವನ್ನು ಒಂದು ಕಲೆಯಾಗಿ ಸ್ವೀಕರಿಸಿ ಈ ಕಲೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸಿದ್ದವನು. ಜಗ್ಗೋಜಿಯ ಪೂಜಾರಪ್ಪನಿಗೆ ಕಾಣಿಕೆ ಸಲ್ಲಿಸುವ ನಿಷ್ಠೆಯಲ್ಲಿ ರಾಬಿನ್‌ಹುಡ್‌ನ ಸಾಮಾಜಿಕ ನ್ಯಾಯವಿದೆ, ಅವನು ಕಳ್ಳತನದಲ್ಲಿ ತೋರಿಸುವ ಜಾಣ್ಮೆ, ಧೈರ್ಯ, ಸಾಹಸಗಳಲ್ಲಿ ಟಾರ್ಜಾನ್-ಸೂಪರ್‌ಮ್ಯಾನ್‌ಗಳ ರಮ್ಯಾದ್ಭುತವಿದೆ. ರಾಜ-ದರೋಗರ ಕಾಲದಲ್ಲಿನ ಜಗ್ಗೋಜಿಯಂತಹ ಕಳ್ಳರನ್ನು ಮೆಚ್ಚುತ್ತಿದ್ದ ರಾಶಿಗೆ ತಮ್ಮ ಕಾಲದಲ್ಲಿ ಸಮಾಜದಲ್ಲಿ ಗೌರವ ಸ್ಥಾನಗಳಲ್ಲಿದ್ದುಕೊಂಡು ಹಗಲುದರೋಡೆ ಮಾಡುತ್ತಿದ್ದ ಪುಡಾರಿ/ಅಧಿಕಾರಿಗಳ ಬಗೆಗೆ ಕೋಪ ತಿರಸ್ಕಾರವಿತ್ತು. ಜಗ್ಗೋಜಿಯ ಮರಿಮೊಮ್ಮಗ ಬುದ್ಧೋಜಿಯ ಕತೆಗಳ ಮೂಲಕ ಪ್ರಜಾಪ್ರಭುತ್ವ ಭಾರತದಲ್ಲಿನ ಭ್ರಷ್ಟಾಚಾರದ ಹಲವು ಆಯಾಮಗಳನ್ನು ರಾಶಿ ತೆರೆದಿಟ್ಟಿದ್ದಾರೆ.

ಇಲ್ಲಿ ಬುದ್ಧೋಜಿಯ ಒಂದು ಕತೆಯಿದೆ. ಇಲ್ಲಿ ಬರುವ ಹಸು-ಕರುಗಳಿಂದ ಕತೆಯ ಕಾಲ ಮೂರುದಶಕಗಳಷ್ಟು ಹಿಂದಿನದು ಎನಿಸಬಹುದು. ಆದರೆ ಕಳ್ಳಭಟ್ಟಿ ಸಾರಾಯಿ ಕುಡಿದ ಆನೆ ವಿಜಯಮಾಲೆಯನ್ನು ತುಂಡುತುಂಡು ಮಾಡಿದ ಪ್ರಸಂಗ ಅಂದಿಗಿಂತ ಇಂದಿನ ಸಮ್ಮಿಶ್ರ ಸರ್ಕಾರಗಳ ಕಾಲಕ್ಕೆ ಹೆಚ್ಚು ಅನ್ವಯವಾಗುವಂತಹುದು. ಚುನಾವಣೆಗಳಲ್ಲಿ ದುಡ್ಡು ಹಾಗೂ ಶ್ರೀಮಠಗಳ ಮಹತ್ವವನ್ನು ಅತ್ಯಂತ ಸ್ವಾರಸ್ಯವಾಗಿ ವಿಡಂಬನೆ ಮಾಡಿರುವ ಈ ಕತೆಯಲ್ಲಿ ರಾಶಿಯವರ ಬಹುಮುಖ ಪ್ರತಿಭೆಯ ಇನ್ನೊಂದು ಮುಖದ, ಅವರ ರಾಜಕೀಯ ಪ್ರಜ್ಞೆಯ ದರ್ಶನವಾಗುತ್ತದೆ.

ಕರಿಯ ಸೊಂಡಿಲಿನಲ್ಲಿ ಪ್ರೋಟುಮಾಲೆ

✧ ರಾ.ಶಿ.

ಹೊಟೇಲ್ ಮಜೇಂದರ್ ಇಂಟರ್ ಕಾಂಟಿನೆಂಟಲ್‌ನ ಪೋರ್ಟಿಕೋದಲ್ಲಿ ಭಾರೀ ಮೋಟಾರು ಬಂದು ನಿಂತಿತು. ಹಳೆಯ ಕಾಲದ ಮಹಾರಾಜರಂತೆ ಉಡುಪನ್ನು ಧರಿಸಿದ್ದವ ಓಡಿಬಂದು ಕಾರಿನ ಬಾಗಿಲನ್ನು ತೆಗೆದ. ಅರಬ್ಬೀ ಶ್ರೀಮಂತನು ಕಾರಿನಿಂದಿಳಿದು ಒಳಕ್ಕೆ ಹೋದ. ಅಕ್ಕಪಕ್ಕ ಟೂರಿಸ್ಟ್ ಇಲಾಖೆಯವರು ಬೆಂಗಾವಲಿನವರಂತೆ ಅವನೊಡನೆ ನಡೆದರು. ಕೌಂಟರಿನಲ್ಲಿ ಇದ್ದವರು ಶ್ರೀಮಂತನಿಗೆ ದಾರಿ ಮಾಡಿಕೊಟ್ಟರು. ಬಲಗಡೆಯಿಂದ, ಪಂಕ್ತಿ ತುಂಬ ಎಡತುದಿಯವರೆಗೂ ಅವ ತನ್ನ ಸಹಿಯನ್ನು ಲಿಖಿಸಿದ. ಬೆಂಗಾವಲಿಗರೊಡನೆ 4567 ನಂಬರಿದ್ದ ರಾಯಲ್ ಸೂಟ್‌ಗೆ ಲಿಫ್ಟಿನಲ್ಲಿ ಏರಿದ. ಕೊಠಡಿಗೆ ಹೋದ ಮೇಲೆ, 'ಒಂದು ಗಂಟೆ ಬಿಟ್ಟು ಬನ್ನಿ, ಅನಂತರ ಸರ್ಕಾರೀ ಭೋಜನ ಕೂಟಕ್ಕೆ ಹೋಗುವ' ಎಂದು ಇಂಗ್ಲಿಷಿನಲ್ಲಿ ಹೇಳಿದ. ನಮ್ಮ ರಾಜ್ಯದಲ್ಲಿ ನೂರಾರು ಕೋಟಿ ಬಂಡವಾಳವನ್ನು ಹೂಡಿ ಭಾರೀ ಕೈಗಾರಿಕೆಯೊಂದನ್ನು ಸ್ಥಾಪಿಸಲು, ಕೇಂದ್ರದಿಂದ ವಿಶೇಷ ಸವಲತ್ತುಗಳನ್ನು ಪಡೆದು ಬಂದಿದ್ದ. ಆದ ಕಾರಣ ರಾಜ್ಯ ಸರಕಾರದವರು, ಕೇಂದ್ರದ ಟೂರಿಸ್ಟ್ ಸಂಸ್ಥೆಯವರು, ಆತನನ್ನು ಬಲು ಗೌರವದಿಂದ ಉಪಚರಿಸುತ್ತಿದ್ದರು. ಹೇಗಾದರೂ ಮಾಡಿ ಅವನನ್ನು ಬುಟ್ಟಿಗೆ ಹಾಕಿಕೊಂಡರೆ, ಅವ ತನ್ನ ರಾಷ್ಟ್ರಕ್ಕೆ ಹಿಂತಿರುಗಿದ ಮೇಲೆ, ರಾಷ್ಟ್ರದ ಷೇಖ್‌ನ ಮೇಲೆ ಪ್ರಭಾವವನ್ನು ಬೀರಿ, ನಮ್ಮಲ್ಲಿ ಬಂಡವಾಳವನ್ನು ಹೂಡುವಂತೆ ಪುಸಲಾಯಿಸಬಹುದು ಎಂದು ನಮ್ಮವರ ಸಹಜವಾದ ನಂಬಿಕೆ ಮತ್ತು ಆಸೆ.

ರಾಜ್ಯದ ಪ್ರೇಕ್ಷಣೀಯ ಸ್ಥಳಗಳಿಗೆಲ್ಲಾ ಆತನನ್ನು ಕರೆದೊಯ್ದರು. ಷಟ್ತಾರಾ ಹೊಟೇಲಿನ ಬಿಲ್ಲನ್ನೆಲ್ಲಾ ಸರಕಾರವೇ ವಹಿಸಿಕೊಂಡಿತ್ತು. ಸಚಿವರು, ಸಂಬಂಧಪಟ್ಟ ಅಧಿಕಾರಿಗಳು, ಇವರುಗಳೊಡನೆ ಎರಡು ದಿನ ಮಾತುಕತೆಗಳನ್ನಾಡಿದ. ಇನ್ನೊಂದೆರಡು ದಿನ ಖಾಸಗಿಯಾಗಿದ್ದು, ನಂತರ ದಿಳ್ಳಿಗೆ ಹೋಗುತ್ತೇನೆ ಎಂದು ಸೂಚಿಸಿದ. ಅದರಂತೆಯೇ ಏರ್ಪಾಡು ಮಾಡಿದರು.

ಅವತ್ತು ಶುಕ್ರವಾರ. ಖಾಸಗಿಯಾಗಿ ಮಸೀದಿಗೆ ಹೋಗಿ ನಮಾಜ್ ಮಾಡಿ ಬಂದ. ಹತ್ತು-ಹನ್ನೊಂದು ಗಂಟೆಯಾಗಿರಬೇಕು. ರಿಸೆಪ್ಷನ್ ತರುಣಿ ಅವನ ಕೊಠಡಿಗೆ ಫೋನ್

ಮಾಡಿ, ''ಘೋಷಾ ಹೆಂಗಸೊಬ್ಬಳು, ಜತೆಯಲ್ಲಿ ಮಿಸ್ಟರ್ ಮೋಹನ್ ಎಂಬುವರೂ ತಮ್ಮನ್ನು ತುರ್ತಾಗಿ ಕಾಣಬೇಕಂತೆ. ಕಳಿಸಲಾ?'' ಎಂದು ಕೇಳಿದಳು. ಅವ ಫ್ಲೋ ಆಂದಿರಬೇಕು. ಆದ್ದರಿಂದ ಅವರಿಬ್ಬರನ್ನೂ 4567ಕ್ಕೆ ಕಳಿಸಿಕೊಟ್ಟಳು. ರೂಂ ಸರ್ವಿಸ್ಸಿಗೆ ರಿಂಗ್ ಮಾಡಿ ಇಂತಿಂತಹ ಪಾನೀಯಗಳನ್ನು ಕಳಿಸಿ ಎಂದ ಶ್ರೀಮಂತ ಹೇಳಿದ.

ಹೊಟೇಲಿನ ಅಸಿಸ್ಟೆಂಟ್ ಮ್ಯಾನೇಜರು, ಪಾನೀಯಗಳನ್ನು ಸರಬರಾಜು ಮಾಡಲು ಸರ್ವರ್ ಒಂದಿಗೆ ತಾನೇ ಖುದ್ದು ಹೋದ. ಶ್ರೀಮಂತನಿಗೆ, ಮಿಸ್ಟರ್ ಮೋಹನ್ ಅವರಿಗೆ ಡಬ್ಬಲ್ ಜಿಮ್ಲೆಟ್ಟನ್ನು ಕೊಟ್ಟ. ಘೋಷಾ ಆಕೆಗೆ? ಎಂದು ಅನುಮಾನಿಸುತ್ತಿರುವಾಗ, ಶ್ರೀಮಂತನೇ ಬಿಯರ್ ಎಂದ. ಥಂಡಿ ಬಿಯರನ್ನು ದೊಡ್ಡ ಮಗ್ಗಿನಲ್ಲಿ ಹಾಕಿ ಆಕೆಯೆದುರಿಗೆ ಇರಿಸಿದ. ಕ್ಷಣಾರ್ಧದಲ್ಲಿ ಆಕೆ ಅವಕುಂಠನವನ್ನೆತ್ತಿ, ಮಗ್ಗನ್ನು ಬಾಯತ್ತ ಹಿಡಿದು ಗಳಗಳ ಗಳಗಳ ಎಂದು ಒಂದೇ ಗುಟುಕಿನಲ್ಲಿ ಖಾಲಿ ಮಾಡಿದಳು. ಅಸಿಸ್ಟೆಂಟ್ ಮ್ಯಾನೇಜರ್ ಅರೆ! ಯಾಸ್ಮಿನ್! ಎಂದುಕೊಂಡ.

★★★

ಮಲೆನಾಡಿನ ಹೆಬ್ಬಿ ಗುಬ್ಬಾಲೆಯ ಸಂತೆಯು ಜಗತ್ಪ್ರಸಿದ್ಧ. ದೂರ ದೂರದ ದೊಡ್ಡ ಷಹರುಗಳಿಂದಲೂ ಭಾರೀ ವ್ಯಾಪಾರಿಗಳು ತಿಂಗಳು ಪೂರ್ತಿ ನಡೆಯುವ ಸಂತೆಗೆ ಬರುತ್ತಿದ್ದರು. ಸಂತೆಯ ಮಾಳವು ಸುಮಾರು ಎರಡು ಮೂರು ಮೈಲಿಗಳಷ್ಟು ವಿಶಾಲವಾಗಿತ್ತು. ಪಕ್ಕದಲ್ಲೇ ಹೊನ್ನು ಹೊಳೆಯು ಹರಿಯುತ್ತಿತ್ತು. ಆ ನದಿಯಲ್ಲಿಯೇ ಬೋರ್‌ವೆಲ್‌ಗಳನ್ನು ಹಾಕಿಸಿ ಪಂಪುಗಳ ಮೂಲಕ ನೀರನ್ನು ಸಂತೆಯ ಎಲ್ಲಾ ಕಡೆಗಳಿಗೂ ಸರಬರಾಜು ಮಾಡಲಾಗುತ್ತಿತ್ತು. ಈ ಉಪಕಾರವನ್ನು ಅರವತ್ತು ಎಪ್ಪತ್ತು ವರ್ಷಗಳ ಹಿಂದೆ ಹೆಬ್ಬಿ ಗ್ರಾಮದ ಸಾಹುಕಾರರೊಬ್ಬರು, ಸ್ವಂತ ಖರ್ಚಿನಲ್ಲಿ ಮಾಡಿದ್ದರು. ಅವರ ಮೆಚ್ಚಿನ ವಾರಾಂಗನೆಯ ಸಲಹೆಯ ಮೇಲೆ ಈ ಧರ್ಮಕಾರ್ಯವನ್ನು ಮಾಡಿಸಿದ್ದರು. ''ಪುಟ್ಟಿ ಹೊನ್ನಿ ನೀರಿನ ಧರ್ಮಾರ್ಥ'' ಎಂದು ಆಕೆಯ ಹೆಸರನ್ನು ಚಿರಸ್ಮರಣೀಯವಾಗಿ ಸ್ಥಾಪಿಸಿದ್ದರು.

ಪುಟ್ಟಹೊನ್ನಿಯ ಬಾಳು ಅಚ್ಚರಿ ತರಿಸುವಂತಹುದು. ಆಕೆಯು ಹುಟ್ಟಿದ ಕೂಡಲೆ ರಾತ್ರೋರಾತ್ರಿ ಅವಳ ತಾಯಿ ''ಶ್ರೀಮಜ್ಜಗದಾಂಬಾ ಸಂಸ್ಥಾನದ'' ಪ್ರಾಕಾರದಲ್ಲಿ ಅವಳನ್ನು ಎಲೆಗಳಿಂದ ಮುಚ್ಚಿಟ್ಟು ಕಣ್ಮರೆಯಾಗಿದ್ದಳು. ಬೆಳಿಗ್ಗೆ ಜಗದಾಂಬಾ ಮಾತೆಯು ಮಗುವಿನ ಕಿರು ಅಳುವನ್ನು ಕೇಳಿ ಪತ್ತೆ ಹಚ್ಚಿದರು. ಮಠದ ಮಗುವಾಗಿ ಅದನ್ನು ಬೆಳೆಸಿದ್ದರು. ಪುಟ್ಟಹೊನ್ನಿಯು ಬೆಳೆದು ನಿಂತಾಗ ಜಗದಾಂಬಾ ಮಾತೆಯಿಂದ, ಹೆಬ್ಬಿ ಸಾಹುಕಾರರು ಅವಳನ್ನು ಪಡೆದಿದ್ದರು. ಅವಳ ಸಂಗವಾದ ಮೇಲೆ ಸಾಹುಕಾರರು ಅತ್ಯಂತ ಹಿರಿಯ ಶ್ರೀಮಂತರಾದರು. ಪುಟ್ಟಹೊನ್ನಿಯ ಪುಣ್ಯದಿಂದಲೇ ತಮ್ಮ ಐಶ್ವರ್ಯವು ಅಭಿವೃದ್ಧಿ ಆಯಿತು ಎಂದು ಸಾಹುಕಾರರು ತುಂಬು ನಂಬಿದರು.

ಸಂತೆಮಾಳದಿಂದ ಹೆಬ್ಬಿ ಗ್ರಾಮವು ಸುಮಾರು ನಾಲ್ಕು ಮೈಲು ದೂರದಲ್ಲಿತ್ತು. ಆ ಗ್ರಾಮದ ಈಶಾನ್ಯಕ್ಕೆ ಹೂ, ಹಣ್ಣು ತೋಟಗಳ ಮಧ್ಯೆ ಎರಡು ಮೈಲು ನಡೆದರೆ

ಶ್ರೀಮಜ್ಜಗದಾಂಬಾ ಸಂಸ್ಥಾನವು ಸಿಗುತ್ತಿತ್ತು. ವಿಶಾಲವಾದ ಹಳೆಯ ಕಾಲದ ಕಟ್ಟಡ ಆ ಮಠಕ್ಕೆ ಹೆಬ್ಬಿಯ ಸುತ್ತುಮುತ್ತಲಿನ ಗ್ರಾಮಸ್ಥರೆಲ್ಲರಿಗೂ ಶಿಷ್ಯರು. ಅಲ್ಲದೆ ವಾಯವ್ಯದಲ್ಲಿದ್ದ ಗುಬ್ಬಾಲೆ ಗ್ರಾಮದ ಆಜೂಬಾಜಿನ ಗ್ರಾಮಸ್ಥರೆಲ್ಲರೂ ಶಿಷ್ಯರು.

ಗುಬ್ಬಾಲೆ ಗ್ರಾಮದವರಂತೂ ಹಣವಂತರೇ. ಮಾರಾನಾಯಕನು ಆ ಗ್ರಾಮದ ಮುಖಂಡ. ಶ್ರೀಮಜ್ಜಗದಾಂಬಾ ಸಂಸ್ಥಾನಕ್ಕೆ ಅವನೂ ಮೆಚ್ಚಿನ ಶಿಷ್ಯ. ಗುಬ್ಬಾಲೆಯಲ್ಲಿ ಕುರಿ ಕಾಯುತ್ತಿದ್ದ ಆ ಹುಡುಗ ಜಗದಾಂಬಾ ಮಾತೆಯ ಸಲಹೆಯಂತೆ ಉಣ್ಣೆ ವ್ಯಾಪಾರ ಮಾಡಲು ಆರಂಭಿಸಿದ್ದ. ಕುರಿಮಂದೆಗಳು ಹೆಚ್ಚಾದುವು. ಉಣ್ಣೆಯ ಉತ್ಪತ್ತಿಯೂ ಹೇರಳವಾಯಿತು. ಬೊಂಬಾಯಿ, ಉತ್ತರ ಭಾರತ ಇಂತಹ ಕಡೆಗಳಲ್ಲೂ ಅವ ಉಣ್ಣೆಯನ್ನು ಮಾರುತ್ತಿದ್ದ. ಅತಿ ಶ್ರೀಮಂತನೂ ಆದ. ಜಗದಾಂಬಾ ಮಾತೆಯ ಸೂಚನೆಯಂತೆ ಅವನೆ ಸಂತೆಮಾಳಕ್ಕೆ ವಿದ್ಯುತ್ ದೀಪಗಳನ್ನು ಹಾಕಿಸಿದ್ದ.

ಎರಡು ತಲೆಮಾರು ನಡೆದು ಹೋಯಿತು. ಈಗ ಗುಬ್ಬಾಲೆಯ ನಾಯಕ ರಾಷ್ಟ್ರದಲ್ಲೇ ಪ್ರಭಾವೀ ಶ್ರೀಮಂತ. ರಾಷ್ಟ್ರಾಧ್ಯಕ್ಷರಿಂದ ಮನ್ನಣೆಯನ್ನೂ ಪಡೆದಿದ್ದ. ಹೆಬ್ಬಿ ಸಾಹುಕಾರನ ಮೊಮ್ಮಗನೂ ಈಗ ರಾಷ್ಟ್ರಾದ್ಯಂತ ಕೀರ್ತಿಯನ್ನು ಗಳಿಸಿದ್ದ. ಇಬ್ಬರನ್ನೂ ರಾಷ್ಟ್ರದ ಪ್ರಜೆಗಳು ಗೌರವಿಸುತ್ತಿದ್ದರು. ಇಬ್ಬರೂ ಈಗಲೂ ಜಗದಾಂಬಾ ಮಾತೆಯ ಅವಿಚ್ಛಿನ್ನ ಭಕ್ತರು.

★★★

ಬೆಳಿಗ್ಗೆ ಹನ್ನೊಂದು ಗಂಟೆಯ ಹೊತ್ತು. ಝೂಕಿರ್ ಬಡಾವಣೆಯ ದೊಡ್ಡ ರಸ್ತೆಯಲ್ಲಿದ್ದ ಮಹಡಿ ಬಂಗಲೆಯ ಎದುರಿಗೆ ಸ್ಕೂಟರ್ ನಿಂತಿತು. ಬಂಗಲೆಯ ವರಾಂಡಾದಲ್ಲಿ ಮಧ್ಯ ವಯಸ್ಸಿನ ಹೆಂಗಸೊಬ್ಬಳು ಕಾಣಿಸಿಕೊಂಡಳು. ''ಲಚ್ಚೂ, ಲಚ್ಚೂ, ಇಲ್ಲಿಗೇನು ಬಂದಿದ್ದೀ. ಯಾರ ಮನೆಯನ್ನು ಹುಡುಕಿಕೊಂಡು ಬಂದಿದ್ದೀ'' ಎಂದು ಆಕೆ ಕೂಗಿ ಕೇಳಿದಳು. ''ನಿನ್ನನ್ನೇ ಹುಡುಕಿಕೊಂಡು ಬರ್ತಾ ಇದ್ದೇನೆ'' ಎಂದನ್ನುತ್ತಾ ಲಚ್ಚೂರಾಯ ಬಂಗಲೆಯೊಳಕ್ಕೆ ಹೋದ.

''ಯಾಸ್ಮಿನ್! ಹೊಟೇಲ್ ಮಜೇಂದರ್ ಇಂಟರ್ ಕಾಂಟಿನೆಂಟಿನಲ್ಲಿ ಅರಬ್ಬೀ ಶ್ರೀಮಂತನ ಜತೆಯಲ್ಲಿ ಕಂಡಾಗ, ನನಗೆ ತುಂಬಾ ಆಶ್ಚರ್ಯವಾಯಿತು. ಎಷ್ಟೋ ವರ್ಷಗಳಾಯಿತು ನಿನ್ನ ನೋಡಿ! ಸುಮಾರು ಇಪ್ಪತ್ತಕ್ಕೂ ಹೆಚ್ಚು ವರ್ಷಗಳಾಗಿರಬೇಕು! ಸುಲ್ತಾನ್‌ಪೇಟೆ ಸ್ಕೂಲಿಗೆ ಹೋಗ್ತಿದ್ದಾಗ ನಿನ್ನ ನೋಡಿದ್ದು. ಆಮೇಲೆ ನಮ್ಮಪ್ಪ ಬೊಂಬಾಯಿಗೆ ಡ್ರೈವರ್ ಆಗಿ ಹೋದ. ಅಲ್ಲೇ ಸ್ಕೂಲಿಗೆ ಸೇರಿಸಿದ. ಆಮೇಲೆ ಹೊಟೇಲಲ್ಲಿ ಕೆಲಸಕ್ಕೆ ಸೇರಿಸಿದ, ತಟ್ಟೆ ಬಟ್ಟಲುಗಳನ್ನು ತೊಳೆಯುವ ಕೆಲಸ. ಈ ಹೊಸ ಹೊಟೇಲಿಗೆ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ನೇಮಿಸಿದರು. ಇಲ್ಲಿಗೆ ಬಂದೆ. ಈಗ ನೀನೂ ಶ್ರೀಮಂತಳಾಗಿ ಕಾಣುತ್ತಿದ್ದೀ'' ಎಂಮ ಹೇಳಿದ ಲಚ್ಚೂರಾಯ.

ತುಂಬಾ ಆದರದಿಂದ ಯಾಸ್ಮಿನ್ ಮಾತನಾಡಿದಳು. ಬಾಲ್ಯದ ವಿವರಗಳನ್ನು ಕುರಿತು. ರಜಾಕರ್ ಗಲಭೆಯಲ್ಲಿ ಹೈದ್ರಾಬಾದಿಗೆ ಹೋಗಿದ್ದು; ಅಲ್ಲಿಂದ ಶ್ರೀಮಂತ

ಖಾನ್‌ನೊಡನೆ ಪಾಕಿಸ್ತಾನಕ್ಕೆ ಓಡಿ ಹೋಗಿದ್ದು; ಅಲ್ಲಿಂದ ಕುವಾಯಿಟ್ ಶ್ರೀಮಂತನು ತನ್ನ ದೇಶಕ್ಕೆ ಹಾರಿಸಿಕೊಂಡು ಹೋಗಿದ್ದು; ಅಲ್ಲಿ ಶ್ರೀಮಂತನ ವ್ಯಾಪಾರದಲ್ಲಿ ತನ್ನನ್ನೂ ಸೇರಿಸಿಕೊಂಡಿದ್ದು; ಈಗ ಅವನ ಪರವಾಗಿ ಇಲ್ಲಿ ವ್ಯವಹಾರಗಳನ್ನು ಗುಟ್ಟಿನಲ್ಲಿ ನಡೆಸುತ್ತಿದ್ದುದು; ಇಲ್ಲಿಂದ ಹಾಜ್ ಪ್ರಯಾಣಿಕರಿಗೆ ಪ್ರಯಾಣದ ಅನುಕೂಲಗಳನ್ನು ಮಾಡಿಕೊಡುವ ಸಂಸ್ಥೆಯನ್ನು ನೆಪಕ್ಕಾಗಿ ನಡೆಸುತ್ತಿರುವುದು; ಇತ್ಯಾದಿ ವಿವರಗಳನ್ನು ಹೇಳಿದಳು. ಗುಟ್ಟಾಗಿ ನಾನು ಹೇಳಿದ ಕೆಲಸವನ್ನು ಮಾಡಿದರೆ ಕೈ ತುಂಬ ಹಣವನ್ನು ಸಂಪಾದಿಸಿ ದಿಢೀರ್ ಶ್ರೀಮಂತನಾಗಬಹುದೆಂದೂ ಸೂಚಿಸಿದಳು.

ಆ ಹೊತ್ತಿಗೆ ಅವಳ ಸ್ನೇಹಿತರಿಬ್ಬರು ದೊಡ್ಡ ಮೋಟಾರಿನಲ್ಲಿ ಬಂದಿಳಿದರು. ''ಇವರು ನನ್ನ ಬಾಲ್ಯದ ಗೆಳೆಯ, ಲಚ್ಚೂರಾಯ; ಇವರು ಹೆಬ್ಬಿ ಅಗ್ರೋ ಸಂಸ್ಥೆಯ ಮಾಲೀಕರು, ಪದ್ಮಭೂಷಣ ಹೆಬ್ಬಿಕಾರ್ ಅವರು; ಈತ ಗುಬ್ಬಾಲೆಯ ಅಖಿಲ ಭಾರತ ಉಣ್ಣೆ ಫೆಡರೇಷನಿನ್ನ ಮಾಲೀಕರು; ಪದ್ಮಭೂಷಣ ನಾಯಕ್ ಅವರು'' ಎಂದು ಪರಸ್ಪರ ಪರಚಯವನ್ನು ಮಾಡಿಕೊಟ್ಟಳು. ''ಹೋಗಿ ಬರ್ತೀನಿ ಅಂದೆ ಅಲ್ಲವೇ ಲಚ್ಚೂರಾಯ! ಇದು ನನ್ನ ಫೋನ್ ನಂಬರು. ಬೆಳಗಿನ ಹೊತ್ತು ಯಾವಾಗ ಬೇಕಾದರೂ ಅಗತ್ಯವಿದ್ದರೆ ಫೋನ್ ಮಾಡಿ ನಂತರ ಬಂದು ಕಾಣು'' ಎಂದು ಹೇಳಿ ಲಚ್ಚೂರಾಯನನ್ನು ಬೀಳ್ಕೊಟ್ಟಳು.

ಹಿಂತಿರುಗುವಾಗ ಲಚ್ಚೂರಾಯ ಯೋಚಿಸುತ್ತಿದ್ದ. ಪದ್ಮಭೂಷಣರಿಬ್ಬರ ಹೆಸರೂ ಪತ್ರಿಕೆಗಳಲ್ಲಿ ಆಗಿಂದಾಗ್ಗೆ ಚಿತ್ರಸಮೇತ ಬರುತ್ತಲೇ ಇದ್ದವು. ರಾಜಕೀಯ ಧುರೀಣರು ಇವರಿಬ್ಬರಿಗೂ ನಿಕಟವರ್ತಿಗಳಾಗಿದ್ದರು. ಅಂತಹ ಹಿರಿಯ ಉದ್ಯಮಿಗಳೂ ಯಾಸ್ಮಿನ್ ಮನೆಗೆ ಬರುವುದು, ಅವಳೊಡನೆ ಅತಿ ಸದರದಿಂದ ನಡೆದುಕೊಳ್ಳುವುದು, ಇವನ್ನೆಲ್ಲಾ ನೋಡಿದ ಮೇಲೆ, ಮರೆಯಲ್ಲಿ ಎಲ್ಲರ ಮೇಲೂ ಪ್ರಭಾವ ಬೀರುವ ವ್ಯಕ್ತಿಯಾಗಿರಬೇಕು, ಯಾಸ್ಮಿನ್: ಕೇವಲ ಹೆಣ್ಣುತನದಿಂದಲೇ ಅವಳು ಮುಂದು ಬಂದಿಲ್ಲ; ಇದರೊಳಗೆ ಇನ್ನೂ ಯಾವುದೋ ಮರ್ಮವಿರಬೇಕು. ಯಾಸ್ಮಿನ್‌ಳನ್ನು ಆಗಿಂದಾಗೆ ಕಾಣುತ್ತಿರಬೇಕು; ನನಗೂ ಮುಂದೆ ಕೊಳ್ಳೆ ಹಣ ದೊರಕಬಹುದು ಎಂದು ತೀರ್ಮಾನಿಸಿದ.

ಒಂದು ವಾರವಾಗಿರಬಹುದು: - ಲಚ್ಚೂರಾಯನಿಗೆ ಫೋನ್ ಕರೆಯು ಬಂತು. ಮುಂದಿನ ವಾರದಲ್ಲಿ ಅರಬ್ಬೀ ಶ್ರೀಮಂತನು ಖಾಸಗಿಯಾಗಿ ಗೋಪ್ಯವಾಗಿ ಬರುತ್ತಾನೆ. ಅಬೂ ಹಸನ್ ಎಂಬ ಹೆಸರಿನಲ್ಲಿ ಸಾಮಾನ್ಯ ಕೊಠಡಿಯನ್ನು ಮೂರು ದಿನಗಳಿಗೆ ರಿಸರ್ವ್ ಮಾಡು. ಮಿಕ್ಕ ವಿವರಗಳಿಗೆ ಯಾಸ್ಮಿನ್‌ಳನ್ನು ಕಾಣು - ಎಂಬ ಆಜ್ಞೆ.

ಅಚ್ಚ ಹೊಸ ನಮೂನೆಯ ಸೂಟನ್ನು ಧರಿಸಿ, ಅಬೂ ಹಸನ್ ಹೋಟೇಲ್ ಮಜೇಂದರ್ ಇಂಟರ್ ಕಾಂಟಿನೆಂಟಿಗೆ ಟ್ಯಾಕ್ಸಿಯಲ್ಲಿ ಬಂದಿಳಿದ. ಇವರು ಅರಬ್ಬಿಯವ ಎಂದು ಯಾರೂ ಹೇಳುವಂತಿರಲಿಲ್ಲ. ಲಚ್ಚೂರಾಯನು ಮಾತ್ರ ತುಂಬಾ ವಿನಯದಿಂದ ಅವನನ್ನು ಸ್ವಾಗತಿಸಿದ. ಕೊಠಡಿಯಲ್ಲಿ ಸಾಮಾನುಗಳನ್ನು ತಂದಿಟ್ಟ ಬೇರರ್ ಸೆಲ್ಯೂಟ್ ಹೊಡೆದು ಹೊರಗೆ ಹೋದ ಮೇಲೆ ಲಚ್ಚೂರಾಯ ಹೇಳಿದ: ''ಎಷ್ಟು ಹೊತ್ತಿಗೆ ಹೆಬ್ಬಿಕಾರ್ ಮತ್ತು ನಾಯಕರನ್ನು ಭೇಟಿಮಾಡಲು ನಿಮಗೆ ಅನುಕೂಲ; ತಿಳಿಸಿದರೆ

ಯಾಸ್ಮಿನ್ ಬೇಗಂಗೆ ಸುದ್ದಿ ಮುಟ್ಟಿಸುತ್ತೇನೆ'' ಎಂದು. ''ಮಧ್ಯಾಹ್ನ ಮೂರಕ್ಕೆ ಯಾಸ್ಮಿನ್ ಜತೆಯಲ್ಲಿ ಬರಲಿ'' ಎಂದು ಅಬು ಹಸನ್ ಹೇಲಿದ. ಸಲಾಂ ಹೊಡೆದು ಲಚ್ಚೂರಾಯ ಹೊರಬಿದ್ದ.

ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ಶುದ್ಧ ಖಾದಿ ಸೀರೆಯನ್ನುಟ್ಟು, ಬೊಟ್ಟು ಕುಂಕುಮವಿಟ್ಟ ಹಿಂದೂ ಗೃಹಿಣಿಯೊಬ್ಬಳು, ಖಾದಿ ಜುಬ್ಬ, ನೆಹರೂ ವೆಸ್ಟ್ ಧರಿಸಿದ ಇಬ್ಬರು ಮಹನೀಯರೊಂದಿಗೆ ಹೊಟೇಲಿಗೆ ಬಂದಳು. ರಿಸೆಪ್ಷನ್ ಕೌಂಟರಿನ ಬಳಿಗೆ ಆಕೆಯು ಹೋಗಿ ಅಬುಹಸನ್ ಅವರನ್ನು ಕಾಣಬೇಕು ಎಂದು ಹೇಳುವ ಹೊತ್ತಿಗೆ ಲಚ್ಚೂರಾಯನು ಹಾಜರಾದ. ''ಬನ್ನೀಮ್ಮಾ, ಬನ್ನಿ ಮಹಾ ಸ್ವಾಮಿಗಳೇ, ಅಬುಹಸನ್ ಅವರು ಕಾದಿದ್ದಾರೆ, ಕರೆದುಕೊಂಡು ಹೋಗಲು ಬಂದೆ'' ಎಂದು ಹೇಳುತ್ತಾ ಅವರುಗಳನ್ನು ಕರೆದುಕೊಂಡು ಹೋದ.

★★★

ಯಾಸ್ಮಿನ್ ತುಂಬಾ ಆತಂಕದಿಂದಿದ್ದಳು. ಬೀದಿಯನ್ನು ನೋಡುತ್ತಾ ವರಾಂಡಾದಲ್ಲಿ ಶತಪಥ ತಿರುಗುತ್ತಿದ್ದಳು. ಸ್ಕೂಟರಿನಿಂದ ಇಳಿದು ಲಚ್ಚೂರಾಯ ಒಳಗೆ ಹೋದಾಗ, ''ಫೋನ್ ಮಾಡಿ ಅರ್ಧ ಗಂಟೆಯಾಯಿತು. ಇಷ್ಟು ಲೇಟಾಗಿ ಯಾಕೆ ಬಂದೆ?'' ಎಂದು ಗದರುತ್ತಾ ಆಕ್ಷೇಪಿಸಿದಳು. ಟೂರಿಸ್ಟ್ ಡಿಪಾರ್ಟ್‌ಮೆಂಟಿನ ಅಧ್ಯಕ್ಷರು ದಿಳ್ಳಿಯಿಂದ ಬಂದಿದ್ದರು. ಅವರು ಹೊರಡುವ ತನಕ ನಾನಲ್ಲೇ ಇರಲೇಬೇಕಾಯಿತು, ಎಂದ ಲಚ್ಚೂರಾಯ.

''ಯಾರದು? ಕೆ.ಕೆ. ಕೌಲ್ ಅವರೇ'' ಎಂದು ಅಚ್ಚರಿಯಿಂದ ಹುಬ್ಬೆತ್ತುತ್ತಾ ಯಾಸ್ಮಿನ್ ಕೇಳಿದಳು.

''ಈ ವಿಷಯ ಯಾರಿಗೂ ಗೊತ್ತಿರಲಿಲ್ಲ; ನಿಮಗೆ ಹೇಗೆ ತಿಳಿಯಿತು'' ಎಂದು ಲಚ್ಚೂರಾಯ ಕುತೂಹಲದಿಂದ ಕೇಳಿದ. ''ಅದಿರಲಿ, ಈಗ ತುರ್ತಾಗಿ ಕೆಲಸ ಮಾಡಬೇಕು. ಐದಾರು ದಿನ ರಜಾ ಪಡೆಯಬೇಕು ನೀನು. ಏನಾದರೂ ನೆಪ ಹೇಳಿಕೋ. ನಾಳೆ ದಿಳ್ಳಿಗೆ ಹೋಗಬೇಕು. ವಿಮಾನ ನಿಲ್ದಾಣಕ್ಕೆ ಹೋಗುವ ಮೊದಲು ಇಲ್ಲಿಗೆ ಬಾ. ಒಂದು ಹ್ಯಾಂಡ್‌ಬ್ಯಾಗ್ ಕೊಡುತ್ತೇನೆ. ಭದ್ರವಾಗಿ ಅದನ್ನು ಕೈಯಲ್ಲೇ ಹಿಡಿದುಕೊಂಡಿರು. ಹೊಟೇಲ್ ಜನಪತ್ತಿನಲ್ಲಿ ರಾಮಾನುಜಂ ಎಂಬ ಹೆಸರಿನಲ್ಲಿ ಕೊಠಡಿಯನ್ನು ರಿಸರ್ವ್ ಮಾಡಿದೆ. ರಾಮಾನುಜಂ ಹೆಸರಿನಲ್ಲೇ ದಿಲ್ಲಿಗೆ ಇಲ್ಲಿಂದ ರಿಟರ್ನ್ ಟಿಕೆಟ್ ಕೊಂಡಾಗಿದೆ. ಆ ಕೊಠಡಿಗೆ ನಾಳೆ ರಾತ್ರಿ ರಣಜೀತ್ ಚೌಧುರಿ ಎನ್ನುವವರು ಬಂದು, ಹೆಬ್ಬೀಕರ್ ನಿಮ್ಮನ್ನು ಕಳಿಸಿದ್ದಾರೇ ಅಂತ ಕೇಳುತ್ತಾರೆ. ಅವರಿಗೆ ಬ್ಯಾಗನ್ನು ಒಪ್ಪಿಸು. ಮಾರನೆಯ ಮಧ್ಯಾಹ್ನ ಆ ಬ್ಯಾಗನ್ನು ನಿನಗೆ ತಂದು ಕೊಡುತ್ತಾರೆ. ಅದನ್ನು ಭದ್ರವಾಗಿ ಹಿಡಿದುಕೊಂಡು ದಿಳ್ಳಿಯಿಂದ ವಿಮಾನವನ್ನು ಹತ್ತಿ ಹಿಂತಿರುಗು. ನನಗೆ ಬ್ಯಾಗನ್ನು ಕೊಟ್ಟು ನಂತರ ಮನೆಗೆ ಹೋಗು. ಆಮೇಲೆ ಇನ್ನೊಂದು ಸಲ ಹೋಗಿ ಬರಬೇಕಾಗುತ್ತೆ. ಇದೇ ರೀತಿ ಆದರೆ ಮುಂದಿನ ಸಲ ಕ್ಲಾರಿಡ್ಜಸ್‌ನಲ್ಲಿಳಿದುಕೋ.

ಭಜನ್‌ಲಾಲ್ ಅಂತ ಹೆಸರಿಟ್ಟುಕೋಬೇಕು ಆ ಪ್ರಯಾಣಕ್ಕೆ. ಹುಷಾರಾಗಿರು. ಈಗಲೇ ಜಟ್ಟಂತ ಹೋಗಿ ರಜ ತೆಗೆದುಕೊಂಡು ಬಿಡು'' ಎಂದು ಹೇಳಿ ಆತುರದಲ್ಲಿ ಅವನನ್ನು ಹೊರ ದಬ್ಬಿದಳು.

★★★

ಹೊಟೇಲ್ ಮಹೇಂದರ್ ಇಂಟರ್ ಕಾಂಟಿನೆಂಟಲ್ಲಿನ ಅತಿ ಎತ್ತರದ ಸೂರಿನ ಮೇಲೆ ಮೂವರು ಪಾಶ್ಚಾತ್ಯ ಉದ್ಯಮಿಗಳೊಂದಿಗೆ ನಮ್ಮ ದೇಶದ ಉನ್ನತ ಕೈಗಾರಿಕಾ ಸಂಘದ ಇಬ್ಬರು ಮಹನೀಯರು ತೀರ್ಥ ಸೇವೆಯನ್ನು ಆರಾಮವಾಗಿ ಮಾಡುತ್ತಿದ್ದರು. ''ಅರೆ! ಆಕಾಶದಲ್ಲಿ ಪ್ರಾಜ್ವಲ್ಯಮಾನವಾಗಿ ಚಲಿಸುತ್ತಿರುವ ಅದು ಏನು'' ಎಂದೊಬ್ಬ ಉದ್ಗರಿಸಿದ. ಪರೀಕ್ಷಾರ್ಥ ಹಾರಿಸಿದ ಬೆಲೂನ್ ಇರಬಹುದು ಎಂದ ಇನ್ನೊಬ್ಬ. ''ನೋ ನೋ, ಅದು ಹೊಸ ಧೂಮಕೇತು ಇರಬೇಕು'' ಎಂದ ಭಾರತೀಯ.

ಆ ದಿನವೇ ಲೋಕಸಭೆಗೆ ಚುನಾವಣೆ ಇನ್ನೊಂದು ತಿಂಗಳ ಸುಮಾರಿನಲ್ಲಿ; ಎಂದು ಆಕಾಶವಾಣಿಯು ಪುನಃ ಪುನಃ ಪ್ರಸಾರವನ್ನು ಮಾಡಿತು. ಭಾರತೀಯ ಉದ್ಯಮಿ ''ನಿನ್ನೆ ಕಂಡಿದ್ದು ಖಂಡಿತವಾಗಿಯೂ ಧೂಮಕೇತುವೇ. ಅದಕ್ಕೇ ಈ ಚುನಾವಣೆ ನಿರ್ಧಾರವಾಗಿದೆ'' ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು ಖುಷಿಯಾದ.

ಎಂಟು ಹತ್ತು ಯುವಕರು ದೋಸೆ ಕಾಫಿಗೆ ಎಂದು ಆ ಹೊಟೇಲಿಗೆ ಹೋಗಿದ್ದರು. ಸಿಕ್ಕಾಪಟ್ಟೆ ತಲೆಹರಟುತ್ತಿದ್ದರು. ''ಆ ಚಿಹ್ನೆ ನೋಡಿದೆಯಾ? ಎಂಟು ವರ್ಷಗಳಿಂದ ಕರು ಹಸುವಿನಿಂದ ಹಾಲನ್ನು ಕುಡಿಯುತ್ತಿದೆ. ಯಾರಿಗೂ ಒಂದು ತೊಟ್ಟು ಬಿಡದೆ ಕುಡಿದು ಈಗ ಭರ್ಜರಿ ಹೋರಿಯಾಗಿದೆ. ಬೆದೆಗೆ ಬಂದವರ ಹಾಗೆ ಜಿಗಿದಾಡ್ತಾ ಇದೆ'' ಎಂದೊಬ್ಬ ಪೂತ್ಕರಿಸಿದ. ''ಓ ಹೋಹೋಹೋ ಇವ ಭಗವದ್ಗೀತೆಯನ್ನು ಪಾರಾಯಣ ಮಾಡಲು ಶುರು ಹಚ್ಚಿದ್ದಾನೆ'' ಎಂದ ಇನ್ನೊಬ್ಬ ಪೋಕರಿ. ''ಹೌದು, ಹೌದು, ಆ ಗೀತೆಯಲ್ಲಿ ಸಂಜಯ ಉವಾಚ ಅಂತಲೇ ಸ್ವಾರಸ್ಯ ಇರೋದು'' ಎಂದ ಹಿಪ್ಪಿ ಕೂದಲಿನವ. ಬಿಲ್ಲನ್ನೂ ಪಾವತಿ ಮಾಡದೆ ದಾಂಢಿಗ ಯುವಕರೆಲ್ಲರೂ ನಗುತ್ತಾ ಕೇಕೆ ಹಾಕುತ್ತಾ ಅರಚಾಡುತ್ತಾ ಸ್ವಲ್ಪ ಹೊತ್ತಿನ ಮೇಲೆ ಹೊರಟು ಹೋದರು. ಇದನ್ನು ಕಂಡ ಅಮೆರಿಕನ್ ಮಹಿಳೆಯೊಬ್ಬಳು ''ಎಷ್ಟು ಸ್ವಾತಂತ್ರ್ಯ, ಈ ದೇಶದಲ್ಲಿ'' ಎಂದು ಮೆಚ್ಚಿ ಅಂದುಕೊಂಡಳು, ಮಂದಸ್ಮಿತಳಾದಳು.

★★★

ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಪಕ್ಷಗಳೆಲ್ಲವೂ ಬಿರುಸಿನ ಪ್ರಚಾರವನ್ನು ನಡೆಸಲಾರಂಭಿಸಿದುವು. ಆಳುವ ಪಕ್ಷಕ್ಕನಕ ಪ್ರಚಾರವು ಯಶಸ್ವಿಯೂ ಸುಲಭಸಾಧ್ಯವೂ ಆಗಿತ್ತು. ಪದ್ಮಭೂಷಣ ಹೆಬ್ಬಿಕುಮಾರರು ಗೋಪ್ಯವಾಗಿ ಪ್ರತಿ ರಾಜ್ಯದ ಮುಖ್ಯ ಸಮಿತಿಗೆ ಹಲವಾರು ಮಾರ್ಗಗಳಲ್ಲಿ ಹಣವನ್ನು ನೀರಿನಂತೆ ವಿನಿಯೋಗಿಸುತ್ತಿದ್ದರು ಎನ್ನುವುದು ಮುಖ್ಯಸ್ಥರಿಗೆ ಮಾತ್ರ ಗೊತ್ತು. ಪ್ರಮುಖವಾದ ಎದುರು ಪಕ್ಷಕ್ಕೆ ಪದ್ಮಭೂಷಣ ನಾಯಕರು ಅದೇ ರೀತಿ ಮರೆಯಲ್ಲಿ ಬಿಡುಗೈಯಿಂದ ಹಣವನ್ನು ಚೆಲ್ಲಿದ್ದರು ಎಂಬುದೂ

ಕೆಲವು ಮುಖ್ಯಸ್ಥರಿಗೆ ಮಾತ್ರ ಗೊತ್ತು. ಆದರೂ ಅವರುಗಳು "ರಾಜಕೀಯದಲ್ಲಿ ಆಸಕ್ತಿ ಏನೂ ಇಲ್ಲ. ನಮ್ಮ ಉದ್ಯಮಗಳನ್ನು ಲಕ್ಷಣವಾಗಿ ನಡೆಸಿದರಾಯ್ತು. ಹತ್ತಾರು ಸಾವಿರ ಸಿಬ್ಬಂದಿಗೆ ಹೊಟ್ಟೆ ತುಂಬ ಊಟ, ಇರಲು ಮನೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಇತ್ಯಾದಿಗಳನ್ನು ಒದಗಿಸಬಹುದು. ಬಡವರಿಗೆ ಸೌಕರ್ಯಗಳನ್ನು ನೀಡುವುದೇ ನಮ್ಮ ಧ್ಯೇಯ" ಎಂದು ನಮ್ರರಾಗಿ ನುಡಿಯುತ್ತಿದ್ದರು. ಜನತೆಯ ಕಣ್ಣಿನಲ್ಲಿ ಅವರು ಸಾಮಾನ್ಯ ಶ್ರೀಮಂತರು; ರಾಜಕೀಯದಲ್ಲಿ ಅನಾಸಕ್ತರು; ಹಾಗಲ್ಲದಿದ್ದರೆ ಅವರೇ ಚುನಾವಣಾ ಕಣಕ್ಕೆ ಇಳಿದೇ ಇಳಿಯುತ್ತಿದ್ದರು. ಹಾಗೆ ಮಾಡಿ ಲಕ್ಷಾಂತರ ರೂಪಾಯಿಗಳನ್ನೂ ಕಳೆದುಕೊಂಡು, ಅತ್ಯಂತ ದೇಹ ಮತ್ತು ಮಾನಸಿಕ ಶ್ರಮವನ್ನೂ ಅನುಭವಿಸಬೇಕಾಗಿತ್ತು ಎಂದೇ ಜನತೆಯ ಅಭಿಪ್ರಾಯ.

ಇಬ್ಬರೂ ಕೂಡಿ ಶ್ರೀಮಜ್ಜಗದಾಂಬಾ ಮಾತೆಯ ಮಠದಲ್ಲಿ ಬಲು ಸಂಭ್ರಮದಿಂದ ಒಂದು ವಾರ ಪೂರ್ತಿ ಉತ್ಸವವನ್ನು ನಡೆಸಿದರು. ದೈವಭಕ್ತಿ; ಸತ್ಯಪ್ರೇಮ; ಬಡವರ ಬಗ್ಗೆ ಅನುಕಂಪ; ಇವೆಲ್ಲವೂ ಇವರಲ್ಲಿ ತುಂಬಿ ತುಳುಕಾಡುತ್ತಿದೆ ಎಂದು ಎಲ್ಲರೂ ನಂಬಿದರು.

★★★

ವೋಟುಮಾಲೆಯನ್ನು ಹೊತ್ತ ಆನೆಗೆ ಹೆಬ್ಬಿಕರ್‌ರಿಂದ ಪಡೆದ ಕಬ್ಬು, ಬೆಲ್ಲದುಂಡೆ, ಎಳ್ಳಿನ ಮೊರ ಇತ್ಯಾದಿಗಳನ್ನು ಆಡಳಿತ ಪಕ್ಷದ ಸಲುವಾಗಿ ಸ್ವಯಂ ಸೇವಕರು ಸಮೃದ್ಧಿಯಾಗಿ ತಿನ್ನಿಸಿದರು. ಹುದುಗು ತುಂಬಿದ್ದ ಉದ್ದಿನ ಹಿಟ್ಟು, ಕಳ್ಳಭಟ್ಟಿ ಸಾರಾಯಿ, ಬೇಲದ ಹಣ್ಣು ಇತ್ಯಾದಿಗಳನ್ನು ಆ ಆನೆಗೆ ಎದುರು ಪಕ್ಷದವರು ದಿನ ರಾತ್ರಿ ನೀಡಿದರು. ಮುಂದೆಯೂ ಹೀಗೆ ಎಂದು ಆನೆಗೆ ಆಮಿಷಗಳನ್ನು ತೋರಿಸಿದರು. ಸವಿದು ತಿಂದು ತೇಗುತ್ತಿದ್ದ ಆನೆಗೆ, ಅಮಲೇರಿದ ಆನೆಗೆ, ಭವಿಷ್ಯದ ಆಮಿಷಗಳ ಮೇಲೆ ಯಾವ ಗಮನವೂ ಇರಲಿಲ್ಲ. ಹಾಗಿರಲು ಸಾಧ್ಯವೂ ಇರಲಿಲ್ಲ.

ಮಾಲೆಯನ್ನು ಹಾಕುವ ದಿನವೂ ಬಂತು. ಭಾರೀ ಮಾಲೆಯನ್ನು ಸೊಂಡಿಲಿನಲ್ಲಿ ಆಡುತ್ತಾ ಅಮಲೇರಿದ ಆನೆಯು ತಪ್ಪುತಪ್ಪು ಹೆಜ್ಜೆ ಹಾಕುತ್ತ ಮೆರವಣಿಗೆ ಹೊರಡಿತು. ಇಕ್ಕೆಲಗಳಲ್ಲೂ ಮುಖಂಡರು ಜಯಘೋಷ ಮಾಡುತ್ತ ಹಸೆಯ ಮಂದಿರದತ್ತ ನಡೆಯುತ್ತಿದ್ದರು, ಕತ್ತುಗಳನ್ನು ಚಾಚಿಕೊಂಡು, ಹತ್ತಿರ ಇದ್ದ ಕತ್ತಿಗೆ ಹಾರ ಹಾಕಬಹುದು ಎಂಬ ಆಸೆಯಿಂದ.

ಜಗದಾಂಬಾ ಮಂದಿರದ ಎದುರಿನಲ್ಲೇ ಹಸೆಯ ಮಂಟಪವಿತ್ತು. ಅಲ್ಲಿಯೇ ಮೆಚ್ಚಿದ ವ್ಯಕ್ತಿಗೆ ಆನೆಯು ಮಾಲೆಯನ್ನು ಹಾಕಬೇಕೆಂದು ಸಂಪ್ರದಾಯ. ಅದರ ಹತ್ತಿರ ಬಂದಾಗ ಆನೆಗೆ ಅಮಲು ಸೊಂಡಿಲು ತುದಿಯ ತನಕ ಏರಿತ್ತು. ಭಯಂಕರವಾಗಿ ಘೀಳಿಟ್ಟಿತು. ಹತ್ತಿರ ಇದ್ದವರು ದೂರ ದೂರಕ್ಕೆ ಓಡಿದರು. ಭಾರೀ ಮಾಲೆಯನ್ನು ಆನೆಯು ತನ್ನ ತಲೆಯ ಮೇಲಕ್ಕೆ ಝೂಡಿಸಿ ಹಾಕಿತು. ಮಾಲೆಯು ಮೂರುನಾಲ್ಕು ದೊಡ್ಡ ಚಿಕ್ಕ ಪುಟ್ಟ ಚೂರುಗಳಾದವು. ಆನೆಯು ಮತ್ತು ಬಂದಂತೆ ಮಠದ ಎದುರಿನ ಕಲ್ಲುಬಸವನನ್ನು ಸೊಂಡಿಲಿನಿಂದ ತಬ್ಬಿಕೊಂಡು ಮಲಗಿಬಿದ್ದಿತು. ಗೊರಕ್ಕೆ ಹೊಡೆಯಲಾರಂಭಿಸಿತು.

ಮಾಲೆಯ ದೊಡ್ಡ ಚೂರನ್ನು ಒಬ್ಬರು ಕಸಿದುಕೊಂಡರು. ಅಷ್ಟೇ ಉದ್ದವಿರುವಂತಿದ್ದ ಚೂರನ್ನು ಇನ್ನೊಬ್ಬರು ಕಸಿದುಕೊಂಡರು. ಮಿಕ್ಕ ಎರಡು ಚೂರುಪಾರುಗಳನ್ನು ಕೆಲವರು ಬಾಚಿಕೊಂಡರು.

ಶ್ರೀಮಜ್ಜಗದಾಂಬಾ ಮಾತೆಯು ಮಾಲೆಯ ಚೂರುಗಳನ್ನು ಅಳತೆ ಮಾಡಿ ಇಂತಹವರೇ ರಾಜರು, ಇಂತಹವರೇ ಯುವರಾಜರು ಎಂದು ತೀರ್ಮಾನವಿತ್ತಳು.

★★★

ರಾಮನವಮಿಯ ದಿನ ಗೋಕರ್ಣದ ಬಳಿ ಇರುವ ಜೋಗಿ ಮಂಟಪದಲ್ಲಿ ಮೂರು ಜನರು ರಾತ್ರಿ ಹನ್ನೊಂದು ಗಂಟೆಯ ಹೊತ್ತಿನಲ್ಲಿ ಮಾತನಾಡುತ್ತಾ ಕುಳಿತಿದ್ದರು. ಮೋಹನರಾವ್ ಅಧ್ಯಕ್ಷನಂತೆ ಹಿರಿಯ ಪಾತ್ರವನ್ನು ವಹಿಸಿದ್ದ. ನುಡಿದ ನಿರ್ಧಾರದ ದನಿಯಲ್ಲಿ: ''ಹೆಬ್ಬಿಕರ್, ಇಪ್ಪತ್ತು ಲಕ್ಷ ಖರ್ಚು ಮಾಡಿದ್ದೀರಿ. ಅಬು ದುಬಾಯಿನಿಂದ ಸುಮಾರು ಒಂದು ಕೋಟಿ ರೂಪಾಯಿ ಬರುವ ವಸ್ತುಗಳನ್ನು ನಿಮಗೆ ತಲುಪಿಸಲಾಗಿದೆ. ಜಗದಾಂಬಾ ಮಾತೆಯವರಿಗೆ ಹತ್ತು ಲಕ್ಷ ಕಾಣಿಕೆ ಕೊಡಬೇಕು.

''ನಾಯಕ್ ಅವರೇ, ಇಪ್ಪತ್ತೈದು ಲಕ್ಷದಷ್ಟು ನೀವು ಕೊಟ್ಟಿದ್ದೀರಿ. ದೊಡ್ಡ ಷಹರುಗಳಲ್ಲಿರುವ ಹಾಗೂ ಲಂಡನ್ನಿನಲ್ಲಿರುವ ನಿಮ್ಮ ಶಾಖಾ ಕಚೇರಿಗಳಿಗೆ ಸುಮಾರು ಒಂದು ಕೋಟಿಯಷ್ಟನ್ನು ಈಗಾಗಲೆ ಸರಕಾರದ ಗುಪ್ತ ಲೆಕ್ಕದಿಂದ ಜಮಾ ಮಾಡಲಾಗಿದೆ.

''ನನ್ನ ಬಳಿಗೆ ಇಪ್ಪತ್ತು ಕೋಟಿ ರೂಪಾಯಿ ಬಂದಿದ್ದುವು. ಒಂದೊಂದು ಕೋಟಿ, ನಿಮಗೆ ಕೊಟ್ಟಾಯಿತು. ಅಬು ಹಸನ್ ಎರಡು ಕೋಟಿ ಸಂಪಾದಿಸಿಕೊಂಡು ಅಬು ದುಬಾಯಿನಲ್ಲಿಯೇ ಇರುತ್ತಾನೆ. ಒಂದು ಕೋಟಿ ರೂಪಾಯಿಯನ್ನು ಯಾಸ್ಮಿನ್ ಬೇಗಂನ ಊರೂರುಗಳ ವಿವಿಧ ಅಕೌಂಟುಗಳಿಗೆ ಜಮಾ ಮಾಡಲಾಗಿದೆ.

''ಮಿಕ್ಕ ಹಣವನ್ನು ಪ್ರಾರ್ಥನಾ ಮಂದಿರಗಳಿಗೆ ಹಂಚುತ್ತೇನೆ. ಅನ್ಯಾಯದಿಂದ ಸಂಪಾದಿಸಿದವರನ್ನು ನಾವೂ ಬೋಳಿಸಬೇಕು. ಆದರೆ ಆ ಹಣವನ್ನು ಸನಾತನ ಧರ್ಮದ ಪ್ರಸಾರಕ್ಕೆ ಮೀಸಲಿಡಬೇಕು ಎಂದು ಪೂಜಾರಪ್ಪನವರು ನಮ್ಮ ಮುತ್ತಾತನಿಗೆ ಉಪದೇಶ ಮಾಡಿದರಂತೆ'' ಎಂದ ಮೋಹನರಾವ್.

''ಮಿ।। ಮೋಹನ ರಾವ್! ನಿಮ್ಮ ಮುತ್ತಾತನ ಹೆಸರೇನು?'' ಎಂದು ಹೆಬ್ಬಿಕರ್ ಕೇಳಿದರು.

''ನಮ್ಮ ಮುತ್ತಾತನ ಹೆಸರು ಜಗ್ಗೋಜಿ, ನಾನು ಬುದ್ಧೋಜಿ'' ಎನ್ನುವ ಉತ್ತರ ಬಂತು.

★★★

ಜನಮರುಳೋ ಜಾತ್ರೆ ಮರುಳೋ!

◊ ಅಣ್ಣಾಸ್ವಾಮಿ ಮೊದಲಿಯಾರ್

ಮುದ್ದೇನಹಳ್ಳಿ, ತುಮಕೂರಿನಿಂದ ಮಧುಗಿರಿಗೆ ಹೋಗುವ ರಸ್ತೆಯಲ್ಲಿ ಏಳು ಮೈಲಿ ದೂರದಲ್ಲಿದೆ. ಅದೇ ನಮ್ಮೂರು. ನಮ್ಮ ತಾತ ಮುತ್ತಾತಂದಿರು ಬದುಕಿ ಬಾಳಿದ ಊರು. ಊರೇನು ಬಂತು? ಹಳ್ಳಿ! ನಾವೆಲ್ಲ ಬೆಂಗಳೂರು ಸೇರಿ ಐವತ್ತು ವರ್ಷಗಳ ಮೇಲ್ಪಟ್ಟು ಆಗಿರುವ ಕಾರಣ ಈಗ ನಾವು ಪೇಟೆ ಜನ.

ನಮ್ಮ ಹಳ್ಳಿ ಮಾತ್ರ ಸ್ವಾತಂತ್ರ್ಯಕ್ಕೆ ಮೊದಲು ಹೇಗಿತ್ತೊ ಈಗಲೂ ಹಾಗೇ ಇದೆ. ಸ್ವತಂತ್ರ ಭಾರತದ ಮಾದರಿ ಹಳ್ಳಿ. ಹಲವಾರು ಪಂಚವಾರ್ಷಿಕ ಯೋಜನೆಗಳು ಆಗಿ ಹೋದರೂ ಬಿಲಿಯನ್ ಗಟ್ಟಲೆ ಡಾಲರುಗಳು ನಮ್ಮ ದೇಶಕ್ಕೆ ಹರಿದು ಬಂದಿದ್ದರೂ, ರಾಜಕೀಯ ನಾಯಕರು "ಗ್ರಾಮೋದ್ಧಾರ -ರೈತನೇ ದೇಶದ ಬೆನ್ನೆಲುಬು!" ಹೀಗೆಲ್ಲಾ ಹೇಳುತ್ತಿದ್ದರೂ, ಐವತ್ತು ಮನೆಗಳ ನಮ್ಮ ಹಳ್ಳಿ ಮಾತ್ರ ನಾನು ಚಿಕ್ಕ ಹುಡುಗನಾಗಿದ್ದಾಗ ಹೇಗಿದ್ದಿತೋ ಈಗಲೂ ಹಾಗೇ ಇದೆ.

ಊರಿಗೊಂದು ಪ್ರೈಮರಿ ಶಾಲೆ ಬಂದಿದೆ. ಮೇಷ್ಟ್ರು ಇದೇ ಹಳ್ಳಿಯವರಾದ್ದರಿಂದ ಬೇಸಾಯದ ದಿನಗಳಲ್ಲಿ ಬೆಳಿಗ್ಗೆ ಕ್ಲಾಸು - ಹಬ್ಬ ಹರಿದಿನಗಳಂದು ರಜೆ. ಮೇಷ್ಟ್ರು ಮಳೆಗಾಲದಲ್ಲಿ ಬೇಸಾಯಕ್ಕೆ ಹೋಗಬೇಕಾದಾಗ ರಜೆ. ಕುಂಟುತ್ತಾ ಶಾಲೆ ನಡೆಯುತ್ತಿದೆ. ಶಾಲೆಯ ಇನ್‌ಸ್ಪೆಕ್ಷನ್‌ಗೆ ಯಾವ ಅಧಿಕಾರಿಯೂ ಬಂದಿಲ್ಲ - ಬರುವುದಿಲ್ಲ. ಏಕೆಂದರೆ ಈ ಊರಿನ ದಾರಿ ಅವರಿಗೆ ಗೊತ್ತಿಲ್ಲ. ಮೇಷ್ಟ್ರು ಮೇಲಧಿಕಾರಿಗಳ ಮನೆಗೆ ತರಕಾರಿ - ರೇಷನ್ - ಹಾಲು - ತುಪ್ಪ ಸಪ್ಲೈ ಮಾಡ್ತಾರೆ. ಅವರ ಮನೆಗೆ ದಾಖಲೆ ಪುಸ್ತಕಗಳನ್ನು ತೆಗೆದುಕೊಂಡು ಹೋಗಿ ಸಹಿ ಹಾಕಿಸಿಕೊಂಡು ಬರ್ತಾರೆ. ಹಳ್ಳಿಗೊಂದು ವಾಚನಾಲಯವಿದೆ. ದಿನಪತ್ರಿಕೆಗಳು ವಾರಪತ್ರಿಕೆಗಳು ಬರುತ್ತವೆ. ಅವೆಲ್ಲಾ ಊರಿನ ಛೇರ್ಮನ್ ಮನೆಗೆ ಹೋಗುತ್ತವೆ. ಅವರು ಓದಿಯಾದ ನಂತರ ವಾಚನಾಲಯಕ್ಕೆ ಬರುತ್ತವೆ. ಅಷ್ಟು ಹೊತ್ತಿಗೆ ಸುದ್ದಿ ತಂಗಳಾಗಿರುತ್ತೆ. ರಾತ್ರಿ ವೇಳೆ ರೈತರು ಬೇಗ ಮಲಗುವುದರಿಂದ ಟಿ.ವಿ. ಇನ್ನೂ ಕಾಲಿಟ್ಟಿಲ್ಲ. ಟ್ರಾನ್ಸಿಸ್ಟರ್ ಒಬ್ಬಿಬ್ಬರ ಮನೆಯಲ್ಲಿದೆ. ದೇಶದಲ್ಲಿ ಯುದ್ಧವಾಗಲಿ, ಭೂಕಂಪವಾಗಲಿ, ರಾಜಕೀಯ ಧುರೀಣರ ಏರುಪೇರಾಗಲಿ ನಮ್ಮ ಊರಿನ ಜನಕ್ಕೆ ಆಸಕ್ತಿಯಿಲ್ಲ. "ಯಾರು ಬಂದರೇನು? ಏನಾದರೇನು? ನಾವು

ಮಡಿದು ತಿನ್ನೋದು ತಪ್ಪೊಲ್ಲ'' ಎಂಬುದು ಇವರ ವೇದಾಂತ. ಧರ್ಮಶ್ರದ್ಧೆ - ಮಾತ್ರ ದಟ್ಟವಾಗಿದೆ. ಕನ್ನಡ ಸಿನಿಮಾ ಹುಚ್ಚು ಚಿಕ್ಕ ಹುಡುಗನಿಂದ ವೃದ್ಧರವರೆಗೆ ಇದೆ. ಗಾಡಿ ಕಟ್ಟಿಕೊಂಡೋ - ಏಳು ಮೈಲಿ ನಡೆದುಕೊಂಡೋ ಸೈಕಲ್ ಮೇಲೋ ತುಮಕೂರಿಗೆ ಹೋಗಿ ಸಿನಿಮಾ ನೋಡಿಕೊಂಡು ಬರ್ತಾರೆ. ಸಾಹಿತ್ಯ ಎಂದರೆ ಕೆ.ಜಿ.ಗೆ ಎಷ್ಟು ಅನ್ನುವ ಜನ.

ಆದರೆ ಒಬ್ಬರಿಗೊಬ್ಬರು ಅನ್ಯೋನ್ಯವಾಗಿ ಶಾಂತಿಯಿಂದ ಜೀವನ ನಡೆಸುತ್ತಿದ್ದಾರೆ.

ನಾನು ಆಗಾಗ್ಗೆ ಹಳ್ಳಿಗೆ ಹೋಗುವುದುಂಟು. ಬೇಸಿಗೆ ರಜೆ ಬಂದರೆ ಹಳ್ಳಿಯಲ್ಲಿ ತಾತನ ಮನೆಯಲ್ಲಿ ಬಿಡಾರ. ತಾತ ಅಜ್ಜಿ ನನ್ನ ಯೋಗಕ್ಷೇಮ ನೋಡಿಕೊಂಡರೆ ನಾನು ಹಳ್ಳಿಯ ಸುತ್ತಮುತ್ತಾ ಇರುವ ಗದ್ದೆ ಬಯಲು, ರಾಗಿ ಹೊಲ, ತೆಂಗಿನ ತೋಟ, ಕಬ್ಬಿನ ಗದ್ದೆ ಹೀಗೆ ಸುತ್ತಾಡಿಕೊಂಡು ಊರಿನ ಕೆರೆಯ ಏರಿ ಮೇಲೆ ಕುಳಿತು ಪ್ರಕೃತಿ ಸೌಂದರ್ಯ ಸವಿಯುತ್ತಿದ್ದೆ. ಹಕ್ಕಿಗಳ ಸಾಲು ಸಾಲು ಹಾರಾಟ, ಗಿಣಿಗಳ ಕೂಗು, ಕೋಗಿಲೆ ಹಾಡು ತಾವರೆ ಹೂಬನ ನನ್ನನ್ನು ತನ್ಮಯನನ್ನಾಗಿ ಮಾಡುತ್ತಿತ್ತು. ವರ್ಡ್ಸ್‌ವರ್ತ್, ಕುವೆಂಪು, ಇವರೆಲ್ಲಾ ನಾನೇ ಆಗಿ ನನ್ನ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದೆ. ಹೀಗಾಗಿ ಸಹಜವಾಗಿ ಸಾಹಿತ್ಯದ ಹುಚ್ಚು ಹಿಡಿದು ಮೊದಲು ಕವನಗಳನ್ನು ಬರೆದೆ, ನಂತರ ಕಥೆಗಳು, ಕಾದಂಬರಿ ಹೀಗೆ ತೋಚಿದ್ದೆಲ್ಲಾ ಬರೆದೆ. ಬೆಂಗಳೂರಿನಿಂದ, ಮಣಿಪಾಲದಿಂದ ಪ್ರಕಟವಾಗುವ ಕೆಲವು ಪತ್ರಿಕೆಗಳಲ್ಲಿ ನನ್ನ ಕಥೆ-ಕವನಗಳು ಪ್ರಕಟವಾದವು. ಪ್ರಕಾಶಕರೊಬ್ಬರು ನನ್ನ ಕಾದಂಬರಿ ಪ್ರಕಟಿಸಿದರು ಅದು ಕಾಲೇಜು ಹುಡುಗಿಯರ ಅಚ್ಚುಮೆಚ್ಚಿನ ಕಾದಂಬರಿಯಾಯಿತು. ನಾನು ಒಬ್ಬ ಸಾಹಿತಿ ಎಂದು ನನ್ನ ತಾತ ಹಳ್ಳಿಯಲ್ಲಿ ಎಲ್ಲರಿಗೂ ಹೇಳಿ ಹಳ್ಳಿಜನ ಇದ್ದಕ್ಕಿದ್ದಂತೆ ನನಗೆ ಗೌರವ ಕೊಡಲು ಪ್ರಾರಂಭಿಸಿದು. ನೆರೆಮನೆ ಹುಡುಗ ಮುಖ್ಯಮಂತ್ರಿಯಾದರೆ ಎದುರಿಗೆ ಬಂದರೆ ಕೈಕಟ್ಟಿ ನಿಂತು ಸಲಾಂ ಮಾಡುವ ಹಾಗೆ ನಡೆದುಕೊಂಡರು. ಇಷ್ಟೆಲ್ಲಾ ಆದರೂ ಒಂದು ಹಾಸ್ಯ ಬರಹ ಬರೆಯಬೇಕಾದರೆ, ಸಂಯುಕ್ತ ಸರ್ಕಾರದಲ್ಲಿ ಒಂದು ಆದೇಶ ಹೊರಡಿಸಬೇಕಾದರೆ ಮುಖ್ಯಮಂತ್ರಿ ತಿಣಿಕಾಡುವ ಹಾಗೆ ಕಷ್ಟ ಪಡಬೇಕಾಯಿತು. ಹಾಸ್ಯಬರಹ ಬರೆಯುವುದೇನು ಸಾಮಾನ್ಯವೇ? ಅರ್ಕಾವತಿ ಬಡಾವಣೆ ಮಾಡಿದಷ್ಟೇ ಪಾಡು ಪಡಬೇಕು!

'ಬಿರುಗಾಳಿ ಕೂಡಿದ ಮಳೆ ಬರುತ್ತೆ' ಎಂದು ರೇಡಿಯೋದಲ್ಲಿ ಹವಾಮಾನ ಇಲಾಖೆಯವರು ಘೋಷಿಸಿದ ಒಂದು ವಾರ ಎದ್ವಾತದ್ವಾ ಬಿಸಿಲು, ಬೇಗೆಯಿಂದ ಜನ ಬಳಲಿ ಬೆಂಡಾದರು. ಹೆಂಗಸರು ಮನೆಯ ಸೂರಿನ ಮೇಲೆ ಸಂಡಿಗೆ ಕಾಯಿಸಿ ತುಂಬಿಟ್ಟುಕೊಂಡರು. ''ವಿಪರೀತ ಬಿಸಿಲು, ಒಣಹವೆ ವಾತಾವರಣವಿದ್ದು ಸೆಖೆ ವಿಪರೀತವಾಗಿರುತ್ತೆ'' ಎಂದು ಹವಾಮಾನ ಇಲಾಖೆಯವರು ರೇಡಿಯೋದಲ್ಲಿ ಹೇಳಿದ ಮೇಲೆ ಮೂರುದಿನ ರೈತರು ದನಕರುಗಳನ್ನು ಕೊಟ್ಟಿಗೆಗಳಲ್ಲಿ ಕಟ್ಟಿದರು, ಹುಲ್ಲಿನ ಬಣವೆಗಳ ಮೇಲೆ ತಾರ್‌ಪಾಲ್ ಹಾಸಿ ಮುಚ್ಚಿದರು. ಅಡಿಗೆಗೆ ಕಾಳು - ತರಕಾರಿಗಳನ್ನು ಕೂಡಿಟ್ಟರು ಮುಚ್ಚಿಟ್ಟಿದ್ದ ಛತ್ರಿ, ಗೋಣಿತಾಟುಗಳನ್ನು ಹೊರಗೆ ತೆಗೆದಿಟ್ಟರು.

'ಇದೆಲ್ಲಾ ಯಾಕ್ರೀ ಅಣ್ಣಾ?!' ಎಂದು ನಾನು ಕೇಳಿದರೆ 'ಈಗ್ಲೋ ಆಗ್ಲೋ ಮುಂಗಾರು ಮಳೆ ಶುರುವಾಗುತ್ತೆ ಅದಕ್ಕೇ!' ಎಂದರು. 'ಮತ್ತೆ ರೇಡಿಯೋದಲ್ಲಿ...!' ಎಂದು ನಾನು ರಾಗ ಎಳೆದಾಗ 'ರೇಡಿಯೋದಲ್ಲಿ ಹೇಳಿದಾಗ ಮಳೆಬಂದು, ಕೃಷಿ ಇಲಾಖೆಯವರು ಹೇಳಿದ ಹಾಗೆ ಬೆಳೆ ಬೆಳೆದರೆ ರೈತರೆಲ್ಲಾ ಲಕ್ಷಾಧಿಪತಿಗಳಾಗ್ತಾರೆ ಬಿಡಿ ಸೋಮಿ!' ಎಂದು ಎಲೆ ಅಡಿಕೆ ಜಗಿಯುತ್ತಾ ಹೋದರು.

ರೈತರು ಹೇಳಿದ್ದೇ ನಿಜವಾಯಿತು. ಭಯಂಕರ ಮಳೆ ಬಂತು. ಗುಡುಗು-ಸಿಡಿಲು, ಬಿರುಗಾಳಿಗೆ ಮರಗಿಡಗಳು, ಹೆಂಚಿನ ಮನೆ, ಗುಡಿಸಲಿನ ಛಾವಣಿಗಳು ತತ್ತರಿಸಿದವು. ಐನೂರು ವರ್ಷಗಳ ಹಳೆಯದಾದ ನಂದೀಶ್ವರನ ಗುಡಿ ಕುಸಿದು ಬಿತ್ತು. ಅಭಿಷೇಕ - ಪೂಜೆ ನಿಂತುಹೋಯಿತು. ಮಳೆ ನಿಂತು ನೆಲ ಹದಕ್ಕೆ ಬಂದ ಮೇಲೆ ರೈತರು ಬೇಸಾಯದಲ್ಲಿ ತೊಡಗಿದರು. ನೆಲ ಉತ್ತು ಬಿತ್ತಿ, ಗೊಬ್ಬರ ಹಾಕಿದ ಮೇಲೆ ಅವರಿಗೆ ಸ್ವಲ್ಪ ಬಿಡುವಾದದ್ದು, ಬೈ ಎಲೆಕ್ಷನ್ ಫಲಿತಾಂಶ ಬಂದ ಮೇಲೆ ಮಂತ್ರಿಗಳಿಗೆ ಬಿಡುವು ದೊರಕಿದಂತೆ. ಸಂಜೆ ಅರಳೀಕಟ್ಟೆ ಪಂಚಾಯ್ತಿಯಲ್ಲಿ ಊರಿನ ದೇವರು ನಂದೀಶ್ವರನ ಗುಡಿ ಕುಸಿದು ಹೋಗಿರುವುದರಿಂದ, ಎಲ್ಲರೂ ಸೇರಿ ಚಂದಾ ನೀಡಿ ಹಣ ಕೂಡಿಸಿ ಹೊಸದಾಗಿ ಗುಡಿಕಟ್ಟಿ ಶಿವನ ಪ್ರತಿಷ್ಠಾಪನೆ ಮಾಡಬೇಕೆಂದು ತೀರ್ಮಾನವಾಯಿತು. ಸ್ಥಳಗಳಲ್ಲೇ ಛೇರ್ಮನ್ನರು, ಸೆಕ್ರೆಟರಿ, ಪಟೇಲರು, ಹಣ ನೀಡಿದರು. ಮನೆಯೊಂದಕ್ಕೆ ಇಷ್ಟು ನೀಡಬೇಕೆಂದು ತೀರ್ಮಾನವಾಯಿತು.

ವಿಜಯನಗರ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ನಮ್ಮ ಹಳ್ಳಿ ಪಕ್ಕದ ಬ್ರಹ್ಮಸಂದ್ರ ಮತ್ತೆ ಏಳು ಊರುಗಳಿಗೆ ಪಾಳೇಗಾರನೊಬ್ಬನಿದ್ದು, ಇಲ್ಲಿ ಧಾನ್ಯಗಳ ಗೋದಾಮು ಇದ್ದು, ಅದರ ಕಾವಲಿಗೆ ಒಂದು ತುಕುಡಿ ಸೈನ್ಯವೂ ಇತ್ತಂತೆ. ಒಂದೊಮ್ಮೆ ಮಹಾಮಂತ್ರಿ ತಿಮ್ಮರಸು ಈ ಕಡೆ ಬಂದಾಗ ಇಲ್ಲಿ ಬಿಡಾರ ಮಾಡಿದ್ದು, ಬೆಳಿಗ್ಗೆ ಎದ್ದು ಕೈಮುಗಿಯಲು ದೇವಾಲಯವಿಲ್ಲದ್ದನ್ನು ಕಂಡು, ಇಲ್ಲಿ ನಂದೀಶ್ವರ ದೇವಾಲಯ ಕಟ್ಟಿಸಿದನಂತೆ, ಈ ದೇವಾಲಯದ ಕುಂಭಾಭಿಷೇಕದ ದಿನ ಶ್ರೀ ಕೃಷ್ಣದೇವರಾಯರು ತನ್ನ ರಾಣಿಯರ ಜೊತೆ ಬಂದಿದ್ದರಂತೆ. ಇದು ಪ್ರತೀತಿ. ಶಾಸನಗಳ್ಯಾವುವೂ ಇಲ್ಲದೇ ಹೋದರು ಜಾನಪದ ಗೀತೆಗಳಲ್ಲಿ ಈ ಕತೆ ಉಳಿದುಕೊಂಡಿದ್ದು ಈಗಲೂ ರಾಗಿ ಬೀಸುವಾಗ, ಭತ್ತ ಕುಟ್ಟುವಾಗ ಭತ್ತದ ಪೈರು ನೆಡುವಾಗ, ಕೊಯ್ಲು ಕೊಯ್ಯುವಾಗ ಹೆಂಗಸರು ರಾಗರಾಗವಾಗಿ ಹಾಡ್ತಾರೆ. ಇಂಥಹ ಗುಡಿ ಬಿದ್ದುಹೋದರೆ ಸುಮ್ಮನಿರಲಾಗುತ್ತದೆಯೇ? ಚುನಾವಣೆಯಲ್ಲಿ ಬಹುಮತ ಬರದಿದ್ದರೇನು ಸರ್ಕಾರ ನಡೆಸಲು ಹರ ಸಾಹಸ ಮಾಡುವ ರಾಜಕಾರಣಿಗಳಂತೆ, ಹಳ್ಳಿಜನ ಒಂದು ಪ್ರತಿಷ್ಠೆಯಾಗಿ ತೆಗೆದುಕೊಂಡು ಗುಡಿ ಕಟ್ಟತೊಡಗಿದರು.

ಪಕ್ಕದ ಊರಿನಲ್ಲಿ ಗುಡಿ ಕಟ್ಟುವ ಕುಶಲಿಗಳಿರುವುದನ್ನು ತಿಳಿದು, ಸ್ವಲ್ಪ ಯೋಚನೆಗಿಟ್ಟುಕೊಂಡಿತು. ಗ್ರಾಮದ ಹುಲ್ಲುಗಾವಲು ವಿವಾದದಲ್ಲಿ ಎರಡು ಊರಿನವರೂ ಹೊಡೆದಾಡಿ, ಬಡಿದಾಡಿ ಮಾತುಬಿಟ್ಟು ಹತ್ತಾರು ವರ್ಷಗಳೇ ಆಗಿತ್ತು. ಪಕ್ಕದ ಹಳ್ಳಿ ತೊಟ್ಲಕೆರೆಯ ಪಟೇಲನ ತಮ್ಮನ ಕಾಲನ್ನು ಮಚ್ಚಿನ ಕಾಳಗದಲ್ಲಿ ನಮ್ಮೂರಿನ

ಪಣಗಾರ ಸಿದ್ಧಪ್ಪ ಕೊಚ್ಚಿ ಹಾಕಿದ ಕಾರಣ, ಪಣಗಾರ ಸಿದ್ಧಪ್ಪನ ಸೊಂಟ ಮುರಿಯಲು ತೊಟ್ಲಕೆರೆಯ ಜನ ಕಾದಿದ್ದರು. ದೂರದ ಊರಿನಿಂದ ಶಿಲ್ಪಿಗಳನ್ನು ಕರೆತಂದು ಗುಡಿ ಕಟ್ಟಿಸಲು ತುಂಬಾ ಖರ್ಚಾಗುತ್ತಿತ್ತು. ಈಗೇನು ಮಾಡುವುದು? 'ಎಲ್ಲಾ ಶಿವನೇ ಬಲ್ಲ ಅಂತ!' ಹಿರಿಯರು ಹೇಳಿಲ್ಲವೇ? ಯಾವ ಪಾರ್ಟಿಗೂ ಬಹುಮತವಿಲ್ಲವಾದರೆ, ರಾಷ್ಟ್ರಪತಿ ಆಡಳಿತ ಜಾರಿ ಮಾಡುವ ಹಾಗೆ ಶಿವ ಆರ್ಡರ್ ಮಾಡಿಯೇಬಿಟ್ಟ, ಕಾಲೇಜಿನಲ್ಲಿ ಓದುತ್ತಿದ್ದ ತೊಟ್ಲಕೆರೆ ಗೌಡನ ಮಗಳು 'ರಾಗಿಣಿ' ಮತ್ತು ನಮ್ಮೂರ ಪಣಗಾರ ಸಿದ್ಧಪ್ಪನ ಮಗ 'ನಂದೀಶ' ಸಿಟಿಯಲ್ಲಿ ಗೆಳೆಯರಾಗಿ - ಪ್ರೇಮಿಗಳಾಗಿ ರಿಜಿಸ್ಟರ್ ಮ್ಯಾರೇಜ್ ಮಾಡಿಕೊಂಡು ಸಂಸಾರ ಹೂಡಿಬಿಟ್ಟರು. ಮೊದ ಮೊದಲು ಪಣಗಾರ ಸಿದ್ಧಪ್ಪ ಮತ್ತು ತೊಟ್ಲಕೆರೆ ಗೌಡ ಎಗರಾಡಿದರೂ, ಅವರಿಬ್ಬರೂ ಕಾನೂನಿನ ಪ್ರಕಾರ ಮದುವೆಯಾಗಿರುವ ಕಾರಣ ಏನೂ ಮಾಡಲಾಗಲಿಲ್ಲ. ವೈರಿಗಳಿಬ್ಬರೂ ಬೀಗರಾದರು. ಪಣಗಾರ ಸಿದ್ಧಪ್ಪ ತೊಟ್ಲಕೆರೆ ಗೌಡನ ಮನೆಗೆ ಹೋಗಬೇಕಾಯಿತು ಹೋದವನೇ ಭರ್ಜರಿ ಬೀಗರೂಟವಾದ ಮೇಲೆ ತೊಟ್ಲಕೆರೆ ಗೌಡನ ತಮ್ಮನ ಕಾಲು ಮುರಿದದ್ದು ತನ್ನ ಜೀವಮಾನದಲ್ಲೇ ವಿಷಾದದ ದಿನವೆಂದು ಸಾರಿದ. ಹುಲ್ಲುಗಾವಲು ಎಲ್ಲಾ ರೈತರಿಗೆ ಸೇರಿದ್ದು ಆದ್ದರಿಂದ ಮುದ್ದೇನಹಳ್ಳಿ ಮತ್ತು ತೊಟ್ಲಕೆರೆಯ ರೈತರು ಹುಲ್ಲುಗಾವಲನ್ನು ಉಪಯೋಗಿಸಿಕೊಳ್ಳಬಹುದು ಎಂದೂ ಹೇಳಿದ. ನಂಟನ ಮಾನ ಕಾಪಾಡಲು ತೊಟ್ಲಕೆರೆ ಗೌಡ ಗುಡಿ ಕಟ್ಟುವ ಶಿಲ್ಪಿಗಳನ್ನು ಮುದ್ದೇನಹಳ್ಳಿಗೆ ಕಳುಹಿಸಿದ.

ಪ್ರಾರಂಭದಲ್ಲಿ ಮುದ್ದೇನಹಳ್ಳಿ ಜನ ಪಣಗಾರ ಸಿದ್ಧಪ್ಪನನ್ನು ಕಟುವಾಗಿ ಖಂಡಿಸಿದರು. ಪಡ್ಡೆ ಹುಡುಗರು 'ದ್ರೋಹಿ!' ಎಂದು ಕೂಗಿದರು. ಕ್ರಮೇಣ ಎಲ್ಲಾ ತಣ್ಣಗಾಯಿತು. ತೊಟ್ಲಕೆರೆ ಗೌಡ ದೇವಾಲಯ ಗೋಪುರದ ಖರ್ಚು ವಹಿಸಿಕೊಂಡ. ಲೇಪಾಕ್ಷಿಯಿಂದ ಗಣೇಶ್, ಶಿವಲಿಂಗ, ನಂದಿ ವಿಗ್ರಹಗಳನ್ನು ತಂದುಕೊಟ್ಟ. ಕಾಡುಮಲೆ ಮಠದ ಸ್ವಾಮೀಜಿಯವರನ್ನು ಕರೆತಂದು ದೇವರ ಪ್ರತಿಷ್ಠಾಪನೆ ಮಾಡಿಸಿ ಮೂರು ದಿನ ಭರ್ಜರಿ ಜಾತ್ರೆ ನಡೆಸಿದ. ಮೊದಲನೆಯ ದಿನ ಮಂತ್ರಿ ಮಹೋದಯರು ಬಂದು ದೇವಾಲಯ ಪ್ರಾರಂಭೋತ್ಸವ ನಡೆಸಿದರು. ಆದಿನ ಸಹಸ್ರಾರು ಮಂದಿಗೆ ಊಟ ಹಾಕಲಾಯಿತು. ಎರಡನೆಯ ದಿನ ಕೋರ, ಬ್ರಹ್ಮಸಂದ್ರ, ಮೆಳೇಹಳ್ಳಿ, ತೊಟ್ಲಕೆರೆ, ಊರುಕೆರೆ ಮೊದಲಾದ ಊರುಗಳಿಂದ ದೇವರ ಉತ್ಸವಗಳು ಸಾಲುಸಾಲಾಗಿ ಬಂದು ಮೆರವಣಿಗೆ ನಡೆಸಿ, ಜನರ ಮನಸ್ಸನ್ನು ಆಕರ್ಷಿಸಿದವು. ಅದೇ ಸಂದರ್ಭದಲ್ಲಿ 'ಬ್ಲಾಕ್ ಅಂಡ್ ವೈಟ್' ಬ್ಯಾನರಿನಲ್ಲಿ ಸಿನಿಮಾ ನಿರ್ಮಾಪಕರೊಬ್ಬರು ಕನ್ನಡ ಚಲನಚಿತ್ರ 'ಮೊದಲಪ್ರೇಮ'ದ ಶೂಟಿಂಗ್‌ಗೆ ನಮ್ಮೂರಿನ ಗೌಡರ ಮನೆಯಲ್ಲಿ ಬಂದಿಳಿದರು. ಜಾತ್ರೆಯನ್ನು ಮೆರವಣಿಗೆಗಳನ್ನು ಚಿತ್ರೀಕರಿಸಿಕೊಂಡರು. ''ಮೊದಲ ಪ್ರೇಮ''ಕ್ಕೂ ಜಾತ್ರೆಗೂ ಸಂಬಂಧವೇನು? ನನಗೆ ತಿಳಿಯಲಿಲ್ಲ! ಚಿತ್ರೀಕರಣದ ತಂಡದಲ್ಲಿ ಸಹ ನಿರ್ದೇಶಕ ಪ್ರಸಾದ್ ಬಂದಿದ್ದ. ಪ್ರಸಾದ್ ಯಾರೂ ಅಂತೀರಾ? ಅವನು ನನ್ನ ಜಿಗರಿ ದೋಸ್ತ್! ಹೈಸ್ಕೂಲಿನಿಂದ ಕಾಲೇಜಿನವರೆಗೆ ನನ್ನ ಜೊತೆ ಓದಿದವನು. ನನ್ನ ಹಾಗೆ ಭಾವನಾ ಜೀವಿ. ಅವನಿಗೆ ನಾಟಕದ ಹುಚ್ಚು. ಪದವಿ ಮುಗಿಸಿ ಬೊಂಬಾಯಿಗೆ ಓಟ

ಕಿತ್ತವನು, ಫುಟ್‌ಬಾಲ್ ಚೆಂಡಿನಂತೆ ಸ್ಟುಡಿಯೋದಿಂದ ಸ್ಟುಡಿಯೋವಿಗೆ ಅಲೆದಾಡಿ ಎಲ್ಲರಿಂದ ಒದೆಸಿಕೊಂಡು ಹೇಗೋ ಈ ಚಿತ್ರನಿರ್ಮಾಣ ಸಂಸ್ಥೆಯಲ್ಲಿ ಸಹಾಯಕ ನಿರ್ದೇಶಕನಾಗಿ ಸೇರಿಕೊಂಡಿದ್ದ. ನಾನೂ ಅವನೂ ತೀರ ಆತ್ಮೀಯವಾಗಿ ಮಾತನಾಡುವುದನ್ನು ಜನ ಗಮನಿಸಿದರು. ಷೂಟಿಂಗ್ ಸಮಯದಲ್ಲಿ ನಾನು ಅವನ ಜೊತೆಯಲ್ಲೇ ಇರುತ್ತಿದ್ದೆ. ನಿರ್ಮಾಪಕರಿಗೆ, ನಿರ್ದೇಶಕರಿಗೆ, ಪರಿಚಯ ಮಾಡಿಸಿದ ಎಲ್ಲಕ್ಕಿಂತ ಮಿಗಿಲಾಗಿ ಹೀರೋ ಹೇಮಂತಕುಮಾರ್‌ಗೆ ಪರಿಚಯ ಮಾಡಿಸಿ, ನನ್ನ ಸಾಹಿತ್ಯದ ಬಗ್ಗೆ ಹೊಗಳಿದ. ''ಓಹ್! ಐಸೀ!' ಎಂದ ಹೀರೋ ಸುತ್ತಲೂ ಸೇರಿದ್ದ ನಮ್ಮ ಹಳ್ಳಿ ಜನರನ್ನು ನೋಡಿ, ''ನಿಮಗೆ ನಾಚಿಕೆಯಾಗುವುದಿಲ್ಲವೇ? ಇಂಥ ಸಾಹಿತಿ ನಿಮ್ಮ ಊರಲ್ಲಿದ್ದಾರೆ - ಅವರಿಗೆ ಎಂದಾದರೂ ನೀವು ಸನ್ಮಾನ ಮಾಡಿದ್ದೀರಾ? ಒಂದು ಬಿರುದು ಕೊಟ್ಟಿದ್ದೀರಾ? ನೋ! ನೋ! ಷೇಮ್ ಷೇಮ್! ನಮ್ಮ ಕನ್ನಡಿಗರಿಗೆ ಕನ್ನಡಾಭಿಮಾನ ಇಷ್ಟೇ ನೋಡಿ! ನಿಮ್ಮ ತಪ್ಪಿಲ್ಲ, ಕ್ಷಮೆ ಕೇಳ್ತೀನಿ, ಈ ಮಣ್ಣಿನಲ್ಲಿ ಹುಟ್ಟಿದ ಕಲಾವಿದರಿಗೆ - ಉದಾರಹರಣೆಗೆ ನನ್ನಂಥ ಕಲಾವಿದರಿಗೆ ಕನ್ನಡಿಗರಾದ ನೀವು ಸನ್ಮಾನ ಮಾಡ್ಬೇಕು ಅಂತ ಯಾವತ್ತಾದರೂ ಅಂದ್ಕೊಂಡಿದ್ದೀರಾ? ಹೋಗಲಿ, ನಿಮ್ಮ ಸಾಹಿತಿಯ ಸಾಹಿತ್ಯವನ್ನಾದರೂ ಓದಿದ್ದೀರಾ?'' ಎಂದು ದೊಡ್ಡ ಡೈಲಾಗ್ ಹೊಡೆದು ತಲೆಮೇಲೆ ಕೈಹೊತ್ತು ಕುಳಿತ.

''ನಾವು ಓದ್ದೋರಲ್ಲಾ - ಇವರ ಸಾಹಿತ್ಯ ಓದಿಲ್ಲ - ಆದ್ರೆ ಇವರು ಕೆರೆಏರಿ ಮೇಲೆ, ಮನೆಛಾವಣಿ ಮೇಲೆ, ಮರದ ರೆಂಬೆಮೇಲೆ ಕುಳಿತು ಅದೇನೇನೋ ಬರೆಯೋದು ನೋಡಿದ್ದೀವಿ!'' ಎಂದು ಕ್ಷಮೆ ಕೇಳುವಂತೆ ಜನ ಹೇಳಿದರು.

''ಅದು ಹೋಗ್ಲೀರಿ... ಸನ್ಮಾನ... ಸನ್ಮಾನ ಯಾಕೆ ಮಾಡ್ಲಿಲ್ಲ? ಇಷ್ಟು ದೊಡ್ಡ ಜಾತ್ರೆ ಮಾಡ್ತೀರಿ ಸಾವಿರಾರು ಜನ ಸೇರಿದ್ದಾರೆ. ಒಂದು ಚಪ್ಪರ ಹಾಕಿ, ಹಾರ ಹಾಕಿ, ಶಾಲು ಹೊದಿಸಿ ಸನ್ಮಾನ ಮಾಡೋಕ್ಕಾಗೋಲ್ಲವೇ? ನಾನು ನಿಮ್ಮೂರಿನವನಲ್ಲ - ಆದ್ರೂ ಹೇಳ್ತೀನಿ ನಾನು ಬೆಂಗಳೂರಿಗೆ ಹೋದಮೇಲೆ ನಿರ್ಮಾಪಕರಿಗೆ ಹೇಳಿ ರವೀಂದ್ರ ಕಲಾಕ್ಷೇತ್ರದಲ್ಲಿ ಇವರಿಗೆ ಸನ್ಮಾನ ಮಾಡ್ತೀನಿ. ಅಷ್ಟೇ ಅಲ್ಲ ನನ್ನ ಮುಂದಿನ ಚಿತ್ರದ ಹಾಡುಗಳನ್ನು ಇವರೇ ಬರೆಯೋದು ಇದು ಸತ್ಯ!'' ಎಂದು ಹೇಳಿದಾಗ ಜನ ಚಪ್ಪಾಳೆ ತಟ್ಟಿ ಷೀಟಿ ಹಾಕಿದರು.

ನಾನು ಗುಮ್ಮನಂತೆ ಮಂಕಾಗಿ ನಿಂತಿದ್ದೆ. ನನ್ನ ಸ್ನೇಹಿತ ಪ್ರಸಾದ್ ನನ್ನನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ಕಿವಿಯಲ್ಲಿ ಹೇಳಿದ ''ಇವೆಲ್ಲಾ ನಿಜ ಅಂತ ನಂಬಬೇಡ, ಬಡ್ಡೀಮಗ ಹಳ್ಳಿಜನ ನೋಡಿ ಮಜಾ ತಗೋತಿದ್ದಾನೆ'' ನಾನು ಪೆಚ್ಚಾದೆ.

ಈ ಮಾತು ಊರ ಹಿರಿಯರ ಕಿವಿ ಮುಟ್ಟಿತು. ಅವರು ಕೆರಳಿದರು ''ಎಂಥಹ ಅವಮಾನ. ಪರ ಊರಿನವನು ನಮ್ಮೂರ ಸಾಹಿತಿಗೆ ಸನ್ಮಾನ ಮಾಡಿದರೆ, ನಾವು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳಬೇಕಾ? ಹೊಡಿರೋ ಡಂಗೂರ ನಾಳೇನೇ ಸನ್ಮಾನ. ಕಟ್ಟಿರೋ ಚಪ್ಪರ. ಹಾಗೇ ಆ ಸಿನಿಮಾ ಹೀರೋ ಹೇಮಂತ್ ಕುಮಾರನನ್ನು ಕರಿಯಿರೋ ಅವರಿಗೂ ಸನ್ಮಾನ ಮಾಡೇ ಬಿಡೋವ!'' ಅಂತ ಗುಡುಗಿದರು.

ಡಂಗೂರದವನು ಡಂಗೂರ ಸಾರಿದ ''ಕೇಳ್ರಪ್ಪೋ ಕೇಳ್ರೀ ನಾಳೆ ಜಾತ್ರೆ ಮೂರನೇ ದಿನ ಗುಡಿಮುಂದೆ ಚಪ್ಪರದಲ್ಲಿ ನಮ್ಮೂರ ಸಾಹಿತಿ ಕಲ್ಲೇಶಪ್ಪನಿಗೂ ಸಿನಿಮಾ ಹೀರೋ ಹೇಮಂತಪ್ಪನಿಗೂ ಹಾರಹಾಕಿ ಶಾಲು ಹೊದಿಸಿ ಸನ್ಮಾನ. ಯಾರು ಬೇಕಾದ್ರೂ ಹಾರತನ್ನಿ- ಶಾಲು ತನ್ನಿ - ಬನ್ರಪ್ಪೋ ಬನ್ನಿ!''

ರಾತ್ರೋರಾತ್ರಿ ಹುಡುಗರು ಗುಡಿಮುಂದೆ ಚಪ್ಪರ ಹಾಕತೊಡಗಿದರು. ಬಾಳೇ ಕಂಬ ಕಟ್ಟುವುದೇನು! ಮಾವಿನ ತೋರಣ ಕಟ್ಟುವುದೇನು? ಹೂವಿನ ಹಾರ ಸುತ್ತಿ ಅಲಂಕಾರ ಮಾಡುವುದೇನು! ವೇದಿಕೆಗೆ ಯಾರ್‍ಯಾರ ಮನೇಲಿ ಬೆಂಚುಗಳಿದ್ದವೋ ಅವೆಲ್ಲಾ ಬಂದವು - ಶಾಲೆಯಲ್ಲಿದ್ದ ಬೆಂಚುಗಳು ಬಂದವು. ಗೌಡರ ಮನೆ ಕುರ್ಚಿಗಳು ವೇದಿಕೆ ಮೇಲೆ ಹಾಕಲಾಯಿತು. ಗರಡಿಮನೆ ಹುಡುಗರಿಗೆ ಒಂದೊಂದು ಗುರುತಿನ ಚೀಟಿ ಕೊಟ್ಟು ನೀವೆಲ್ಲಾ 'ವಾಲೆಂಟಯರ್ಸ್' ಎಂದು ಹೇಳಿ 'ಜನರು ಶಿಸ್ತಿನಿಂದ ಇರುವಂತೆ ನೋಡಿಕೊಳ್ಳಬೇಕಾದ್ದು ನೀವು' ಎಂದು ಆದೇಶ ನೀಡಲಾಯಿತು. ಹೆಂಗಸರು ಕೂಡುವ ಸ್ಥಳ, ಮಕ್ಕಳು ಕೂಡುವ ಸ್ಥಳ, ಪುರುಷರು ಕೂಡುವ ಸ್ಥಳ ಆಹ್ವಾನಿತರು - ಹಿರಿಯರು ಕುಳಿತುಕೊಳ್ಳುವ ಸ್ಥಳ ಹೀಗೆಲ್ಲಾ ಏರ್ಪಾಡುಗಳಾದವು. ಬೀದಿಕಂಬಗಳಿಂದ ಲೈನ್ ಎಳೆದು ದೀಪಾಲಂಕಾರ ಧ್ವನಿವರ್ಧಕ ವ್ಯವಸ್ಥೆ ಮಾಡಲಾಯಿತು. ಬ್ರಹ್ಮಸಂದ್ರ ಹೈಸ್ಕೂಲ್ ಹೆಡ್‌ಮಾಸ್ಟರ್ ನಂಜೇಗೌಡರು ಭಾಷಣ ಮಾಡಲಿದ್ದರು. ಛೇರ್ಮನ್ ಅಧ್ಯಕ್ಷತೆ ಮುಖ್ಯ ಅತಿಥಿಗಳು ಕಾಡುಮಲೆ ಮಠದ ಸ್ವಾಮಿಗಳು! ಎಲ್ಲಾ ವ್ಯವಸ್ಥೆ ನಡೆಯುತ್ತಿತ್ತು. ಹೆಡ್‌ಮಾಸ್ಟರ್ ನಂಜೇಗೌಡರು - ನನ್ನ ಬಗ್ಗೆ ನನ್ನ ಸಾಹಿತ್ಯದ ಬಗ್ಗೆ ಕೇಳಿ ಬರೆದುಕೊಂಡರು. ಸಿನಿಮಾ ಹೀರೋ ಹೇಮಂತ್‌ಕುಮಾರ್ ಬಗ್ಗೆ ನನ್ನ ಗೆಳೆಯ ಪ್ರಸಾದ್‌ನನ್ನು ಕೇಳಿ ಬರೆದುಕೊಂಡರು.

ಪ್ರಸಾದ್ ಆಶ್ಚರ್ಯದಿಂದ ಮೂಕನಾಗಿದ್ದ. ಕಾಡುಮಲೆ ಮಠದ ಸ್ವಾಮಿಗಳು ಪತ್ರಕರ್ತರನ್ನು ಆಹ್ವಾನಿಸಿ, ಅವರು ಬರಲು ಕಾರು ಕಳುಹಿಸಿದ್ದರು.

ಜನಮರುಳೋ ಜಾತ್ರೆ ಮರುಳೋ! ಅನ್ನುವ ಹಾಗೆ ಅಕ್ಕಪಕ್ಕದ ಊರುಗಳಿಂದ ಜನ ಗಾಡಿಗಳಲ್ಲಿ ಬಂದರು. ರಾಜಕಾರಣಿಗಳು ಭಾಷಣಕ್ಕೆ ಹಣ ಕೊಟ್ಟು ಜನರನ್ನು ಕರ್ಕೊಂಡು ಬರೋ ಹಾಗೆ ಯಾರೂ ಕರೆದಿರಲಿಲ್ಲ. ಆದರೂ ಜನ ತಂಡೋಪತಂಡವಾಗಿ ಬಂದರು.

ಕಾರ್ಯಕ್ರಮಕ್ಕೆ ಒಂದುಗಂಟೆ ಮುಂಚಿತವಾಗಿಯೇ ಜನ ಸೇರಿದರು. ಗರಡಿಮನೆ ಹುಡುಗರು ಎಲ್ಲರನ್ನೂ ಶಿಸ್ತಿನಿಂದ ಕೂರಿಸುತ್ತಿದ್ದರು. ಅರ್ಧಗಂಟೆ ಮುಂಚಿತವಾಗಿ ಪತ್ರಕರ್ತರು ಬಂದರು. ಕಾರ್ಯಕ್ರಮದ ಸಮಯಕ್ಕೆ ಕಾಡುಮಲೆ ಸ್ವಾಮೀಜಿಗಳು ಹೆಡ್ಮಾಸ್ಟರ್ ನಂಜಪ್ಪನವರು ಬಂದರು. ನಂತರ ಛೇರ್ಮನ್ನರು, ಪಣಗಾರ ಸಿದ್ಧಪ್ಪನವರು, ಪಟೇಲರು, ಗೌಡರು ಊರಿನ ಹಿರಿಯರು ಬಂದರು. ನಾನೂ ಹಾಜರಾದೆ. ಸ್ಕೌಟ್ ಮತ್ತು ಎನ್.ಸಿ.ಸಿ. ಹುಡುಗರು ಬ್ಯಾಂಡ್ ಬಾರಿಸಿ, ಬ್ಯೂಗಲ್ ಊದಿ ಅದ್ದೂರಿಯಾಗಿ ನಮ್ಮನ್ನು ಸ್ವಾಗತಿಸಿ ವೇದಿಕೆಗೆ ಕರೆದೊಯ್ದರು. ಹೀರೋ ಹೇಮಂತ್‌ಕುಮಾರ್ ಬಂದಿರಲಿಲ್ಲ. 'ಅವರು ಷೂಟಿಂಗ್ ಮುಗಿಸಿಕೊಂಡು ಬರ್ತಾರೆ. ಕಾರ್ಯಕ್ರಮ ಪ್ರಾರಂಭಿಸಬಹುದು!' ಎಂದು ಪ್ರಸಾದ ಹೇಳಿದ. ಗೌಡರ ಸೊಸೆ ಶಿವಮ್ಮ ಕೆಟ್ಟದಾಗಿ

ಒಂದು ಹಾಡು ಹೇಳಿ ಕಾರ್ಯಕ್ರಮ ಪ್ರಾರಂಭಿಸಿದರು. ಜನ ಎದ್ದು ಓಡಿ ಹೋಗುತ್ತಾರೇನೋ ಎಂದು ನೋಡಿದೆ ಗೂಟಕ್ಕೆ ಕಟ್ಟಿದ ಎತ್ತಿನ ಹಾಗೆ ಕುಳಿತೇ ಇದ್ದರು. ನಂಜಪ್ಪ ಮೇಷ್ಟ್ರು ಮಾತನಾಡಿದರು. ಹುಡುಗರು ಶಿಳ್ಳೆ ಹೊಡೆದು ಚಪ್ಪಾಳೆ ತಟ್ಟಿದರು. ತಪ್ಪಿದರೆ ಮಾರನೆ ದಿನ ಸ್ಕೂಲಿನಲ್ಲಿ ಒದೆ ಬೀಳುವುದೆಂಬ ಹೆದರಿಕೆ ಇರಬೇಕು.

ನಾನು ಮಾತನಾಡುವ ಸರದಿ ಬಂತು. ನಾನು ಗಂಭೀರವಾಗಿ ಎದ್ದು ನಿಂತು ಹಾಕಿಕೊಂಡಿದ್ದ ಜುಬ್ಬ ಸರಿ ಮಾಡಿಕೊಂಡು ಮಾತು ಷುರು ಮಾಡಿದೆ, ಸಭೆಯಲ್ಲಿ ಗುಲ್ಲೋ ಗುಲ್ಲು! ಪಟಾಕಿ ಶಬ್ದ ಬ್ಯಾಂಡ್ ಬಾರಿಸಿದ ಸದ್ದು 'ಜೈ! ಜೈ!' ಎಂಬ ಜೈಕಾರ ನಾನು ಹೆದರಿ ಆಕಡೆ ನೋಡಿದೆ ಜನರ ಮಧ್ಯದಿಂದ ಕೈ ಮೇಲೆತ್ತಿ ಬೀಸುತ್ತಾ ಹೀರೋ ಹೇಮಂತಕುಮಾರ್ ವೇದಿಕೆಗೆ ಬರುತ್ತಿದ್ದ. ಕೂಡಲೇ ಕಾರ್ಯಕರ್ತನೊಬ್ಬ ''ಹೀರೋ ಹೇಮಂತಕುಮಾರರಿಗೆ ಬೇರೆಕಡೆ ಷೂಟಿಂಗ್ ಇರುವುದರಿಂದ, ಅವರಿಗೆ ಸನ್ಮಾನ ಮಾಲಾರ್ಪಣೆ ಆದಮೇಲೆ ಮುಂದಿನ ಕಾರ್ಯಕ್ರಮ ನಡೆಯುತ್ತೆ!'' ಎಂದ.

ಸ್ವಾಮಿಗಳು 'ನಟಸಾಮ್ರಾಟ್' ಎಂದು ಬಿರುದನ್ನಿತ್ತು ಬಿನ್ನವತ್ತಿಕೆ ನೀಡಿ, ಹಾರ ಹಾಕಿ ತುರಾಯಿ ಕೊಟ್ಟು ಶಾಲು ಹೊದಿಸಿದರು. ''ನಟರಿಗೆ ಸನ್ಮಾನ ಮಾಡುವವರು ಸಾಲಾಗಿ ಬನ್ನಿ'' ಎಂದು ಪ್ರಕಟಣೆಯಾಯಿತು. ಹಾರ-ಶಾಲುಗಳನ್ನು ಹಿಡಿದು ಜನ ಹಿಂಡು ಹಿಂಡಾಗಿ ವೇದಿಕೆಗೆ ನುಗ್ಗಿದರು. ನಾನು ಇವನ್ನೆಲ್ಲಾ ನೋಡಿ ಬೆಪ್ಪಾಗಿ ನಿಂತಿದ್ದೆ. ನನ್ನ ಮಾತು ನಿಂತು ಮೌನವಾಗಿತ್ತು. ಛೇರ್ಮನ್ನರು, ಸ್ವಾಮೀಜಿ ಮತ್ತು ಮೇಷ್ಟರನ್ನು ಜನ ಎಳದಾಡಿದರು. ಹೇಮಂತಕುಮಾರನ ಸುತ್ತಲೂ ಜನ! ಹಾರ-ಶಾಲು ನಾಮುಂದು ತಾಮುಂದು ಅಂತ ಹಾಕಿದರು. ಅವರಲ್ಲೇ ಮನಸ್ತಾಪವಾಗಿ - ಹೊಡೆದಾಟ-ನೂಕಾಟ-ದೊಂಬಿ ನಡೆಯಿತು ಹೆಂಗಸರು ಮಕ್ಕಳು 'ಹೋ' ಎಂದು ಕೂಗಿದರು. ಅತ್ತರು, ಕಿರುಚಿದರು, ಓಡಿಹೋದರು. ನೂಕುನುಗ್ಗಾಟದಲ್ಲಿ ನನ್ನನ್ನು ಒಬ್ಬ ಹಿಡಿದೆಳೆದ ಜುಬ್ಬ ಹರಿದು ಚಿಂದಿಯಾಯಿತು. ಮತ್ತೊಬ್ಬ ದಡಿಯ ಹಿಡಿದು ನೂಕಿದ ವೇದಿಕೆಯಾಚೆ ಹೋಗಿ ಬಿದ್ದೆ. ತಲೆಗೆ ಏಟು ಬಿದ್ದು ಅರೆ ಜಾಗೃತಿ ಅವಸ್ಥೆಯಾಯಿತು. ಇದೇನು ವೇದಿಕೆಯೋ ಪಾರ್ಲಿಮೆಂಟ್ ಹೌಸೋ! ಎಂದು ಭ್ರಮಾಧೀನನಾದೆ.

ವೇದಿಕೆಗೆ ಹಾಕಿದ್ದ ಚಪ್ಪರ ಉರುಳಿ ಬಿತ್ತು. ವೇದಿಕೆಯ ಮೇಲಿದ್ದ ಕುರ್ಚಿಗಳು ಹಾರಾಡಿದವು. ಛೇರ್ಮನ್ ಕೆಳಗೆ ಬಿದ್ದು ಜನರ ಕಾಲ್ತುಳಿತಕ್ಕೆ ಬಿದ್ದು ನುಚ್ಚು ನೂರಿನಂತಾದರು. ಕೈಕಾಲು ಮೂಳೆಗಳು ಮುರಿದು ಏಳಲಾಗದೆ ಬಿದ್ದಿದ್ದರು. ನಾನೇ ವಾಸಿ ವೇದಿಕೆಯಾಚೆ ಎಸೆಯಲ್ಪಟ್ಟು ಬದುಕಿಕೊಂಡೆ. ಹಣೆಗೆ ಸಣ್ಣ ಗಾಯವಾಗಿತ್ತಷ್ಟೆ! ಹರಿದ ಜುಬ್ಬದ ಬಟ್ಟೆ ಕಿತ್ತು ಹಣೆಗೆ ಪಟ್ಟಿ ಕಟ್ಟಿಕೊಂಡೆ. ಈ ಗಲಾಟೇಲಿ ಹೇಮಂತಕುಮಾರ್, ಸ್ವಾಮೀಜಿ ಮತ್ತು ಮೇಷ್ಟ್ರು ಹೇಗೋ ಪರಾರಿಯಾಗಿ ಬಿಟ್ಟಿದ್ದರು. ತುಮಕೂರಿನಿಂದ ಪೋಲೀಸ್ ವ್ಯಾನ್ ಬಂದು ಗಲಭೆಯನ್ನು ಹತೋಟಿಗೆ ತರುವ ವೇಳೆಗೆ ಅರ್ಧರಾತ್ರಿಯಾಗಿತ್ತು.

''ಯಾರ್‍ರೀ ಈ ಊರ ಸಾಹಿತಿ ಕಲ್ಲೇಶಿ?! ಅವರಿಗೆ ಸನ್ಮಾನ ಬೇರೆ ಬೇಕೇನ್ರೀ? ಈಗ ಊರಿಗೇ ಅವಮಾನವಾಯ್ತಲ್ಲ? ಈ ಗಲಭೆಗೆ ಕಾರಣ ಕಲ್ಲೇಶಿ ಸಾಹಿತಿ - ಅವರ ಮೇಲೆ ಎಫ್.ಐ.ಆರ್. ಹಾಕಿ'' ಎಂದರು ಇನ್‌ಸ್ಪೆಕ್ಟರ್.


"ಸಾರ್, ನಾನೇನು ಮಾಡಿದೆ? ನಾನು ಹೊಡೆದಾಡಲು ಹೇಳಿದ್ದೆನಾ?" ನಾನು ಕುಯ್‌ಗುಟ್ಟಿದೆ.

"ನಿಮ್ಮದೇ ತಪ್ಪೂರೀ. ಈ ಹಳ್ಳೀಗೆ ಪ್ಯಾಟೆಯಿಂದ ಯಾಕೆ ಬಂದ್ರಿ? ಸರಿ. ಬಂದ್ರೂ, ಹಿಟ್ಟು ಅವರೇಕಾಯಿ ಸಾರು ತಿನ್ಕೊಂಡು ಸುಮ್ನೆ ಇದ್ರಾ? ಇಲ್ವಲ್ಲಾ ಮರ-ಗಿಡ-ಹಕ್ಕಿ-ಎಲ್ಲಾದ್ರಮೇಲೂ ಬರ್ದಿದ್ದು ಬರ್ದಿದ್ದೆ. ನೀವು ಬರ್ದದಕ್ಕೇ ಕಾಗೆ ಸಾಹಿತಿಯಾದ್ರಿ - ಸಾಹಿತಿಯಾಗಿದ್ದಕ್ಕೆ ತಾನೆ ಸನ್ಮಾನ ಮಾಡಬೇಕಾಯ್ತು - ಸನ್ಮಾನ ಮಾಡಕ್ಕೆ ಹೋಗಿತಾನೆ ಈ ಗಲಾಟೆ - ಅದಕ್ಕೇ ಎಲ್ಲಕ್ಕೂ ನೀವೇ ಕಾರಣ. ಇಲ್ಲಾ ಅಂತ ಕೋರ್ಟಿಗೆ ಬಂದು ಹೇಳಿ" ಎಂದು ಗುಡುಗಿದರು.

ಮಾರನೆ ದಿನ ಪತ್ರಿಕೇಲಿ ದೊಡ್ಡ ಅಕ್ಷರಗಳಲ್ಲಿ ಹೀರೋ ಹೇಮಂತ್‌ಕುಮಾರನ ಸನ್ಮಾನದ ವರದಿ ಮತ್ತು ಫೋಟೋ ಬಂದಿತ್ತು. ಒಂದು ಕಾಲಂನ ಮೂಲೆಯಲ್ಲಿ "ಸಾಹಿತಿಯ ಸನ್ಮಾನದ ಸಭೆಯಲ್ಲಿ ಗಲಭೆ" ಎಂಬ ಚಿಕ್ಕ ವರದಿ ಪ್ರಕಟವಾಗಿತ್ತು. ಅದರಲ್ಲೂ ನನ್ನ ಹೆಸರು ಇರಲಿಲ್ಲ.

ಮೂರು ತಿಂಗಳು ಆಸ್ಪತ್ರೆಯಲ್ಲಿದ್ದು ಕುಂಟುತ್ತಾ ಊರುಗೋಲು ಹಿಡಿದು ಊರಿಗೆ ಬಂದ ಛೇರ್ಮನ್ನರು ತುರ್ತು ಸಭೆ ಕರೆದು ಒಂದು ಠರಾವು ಮಂಡಿಸಿದರು "ನಮ್ಮೂರಿನಲ್ಲಿ ಇನ್ನು ಮುಂದೆ ಯಾವ ಸಾಹಿತಿಗೂ ಸನ್ಮಾನ ಮಾಡುವಂತಿಲ್ಲ. ಯಾರಾದರೂ ಸನ್ಮಾನ ಮಾಡಲು ಹೊರಟರೆ ಅವರ ಕಾಲು ಮುರಿಯಲಾಗುತ್ತೆ!" ಠರಾವು ಒಮ್ಮತದಿಂದ ಪಾಸಾಯಿತು. "ಸಾಹಿತಿಗಳಿಗೆ ನಮ್ಮೂರಿನಲ್ಲಿ ಜಾಗಯಿಲ್ಲ" ಎಂದು ಗುಡುಗಿದರು.

ಅಂದು ಹಳ್ಳಿ ಬಿಟ್ಟವನು ಹಲವು ವರ್ಷಗಳೇ ಕಳೆದವು ನಾನಿನ್ನೂ ಹಳ್ಳೀಕಡೆ ಹೋಗಿಲ್ಲ!



ರಾಶಿ-ಕಸ್ತೂರಿ ಈಕ್ವೇಷನ್

✧ ಕೃಷ್ಣ ಸುಬ್ಬರಾವ್

ಸಾವಿರದ ಒಂಬೈನೂರ ನಲವತ್ತೆರಡು (1942) ಭಾರತೀಯರಿಗೆ ಬಹಳ ಮಹತ್ತರವಾದ ಇಸವಿ. ಬ್ರಿಟಿಷರನ್ನು ಭಾರತ ಬಿಟ್ಟು ತೊಲಗಿ (ಕ್ವಿಟ್ ಇಂಡಿಯಾ) ಚಳುವಳಿ ಆರಂಭಿಸಿದ ವರ್ಷ ಕನ್ನಡನಾಡಿನಲ್ಲಿ ಡಾ|| ಎಂ. ಶಿವರಾಂ ಮತ್ತು ನಾ. ಕಸ್ತೂರಿಯವರು ಕೈ ಜೋಡಿಸಿ ಹಾಸ್ಯ ಚಳುವಳಿಯೊಂದನ್ನು ಪ್ರಾರಂಭಿಸಿ ಅನೇಕ ಜನರ ನೋವು ಸಂಕಟಗಳನ್ನು ತೊಲಗಿಸಿ, ಮುಖದಲ್ಲಿ ನಗುವನ್ನು, ಮಂದಹಾಸವನ್ನು ತರಿಸಲು 'ಕೊರವಂಜಿ' ಮಾಸಪತ್ರಿಕೆಯನ್ನು ಹೊರತಂದರು. ಪ್ರಾರಂಭದಲ್ಲಿ ಇಬ್ಬರೇ ಪತ್ರಿಕೆಯ ಪುಟಗಳನ್ನು ಬೇರೆ ಬೇರೆ ಹೆಸರಿನಲ್ಲಿ ಬರೆದರು. ಶ್ರೀಮತಿ ರುದ್ರಮ್ಮ, ಶ್ರೀಮತಿ ಕೇಸರಿ, ಪಾಟಾಳಿ, ನಾ.ಕಾ. ಖಾರಾಂತ ಹೆಸರಿನಲ್ಲಿ ಕಸ್ತೂರಿ ಬರೆದರೆ ಡಾ|| ಶಿವರಾಂ ಅವರು ಶಿವು, ಪ್ರಕಾಶ್, ಕುಮಾರ್ ಅಂತ ತಮ್ಮ ಮಕ್ಕಳ ಹೆಸರಿನಲ್ಲಿ ಅನೇಕ ಲೇಖನಗಳನ್ನು ಬರೆದರು. ಅನಾಮಧೇಯರಾಗಿ ಅದೆಷ್ಟು ನವಿರಾದ ಹಾಸ್ಯಲೇಖನವನ್ನು ಬರೆದರೋ ತಿಳಿದಿಲ್ಲ. ಪತ್ರಿಕೆಗೋಸ್ಕರ ಕಾಯುವ ಪರಿಪಾಟ ಬಹುಶಃ ಪ್ರಾರಂಭವಾಗುವಂತಹ ಆಕರ್ಷಣೆ. ಕೊರವಂಜಿ ಕಟ್ಟಾಭಿಮಾನಿಗಳೊಬ್ಬರು ನೆನಪಿಸಿಕೊಂಡಿದ್ದು ಹೀಗೆ... ಮನೆಮಂದಿಯಲ್ಲಾ ಕೊರವಂಜಿ ಬಂದ ಕ್ಷಣವೇ ಓದುವ ಆತುರದಿಂದ ಮಾಸಪತ್ರಿಕೆಯನ್ನು ಎಳೆದಾಡಿ ಹಾಳೆಗಳು ಹರಿದು, ಒಬ್ಬೊಬ್ಬರು ಒಂದೊಂದು ಪುಟವನ್ನು ಓದಿದ ಘಟನೆಗಳು ಇವೆಯಂತೆ. ಟ್ರೆಂಡ್ ಸೆಟ್ಟರ್ಸ್ ಅಂದ್ರೆ ಕಸ್ತೂರಿ ಹಾಗೂ ರಾಶಿ. ಅಷ್ಟೇ ಅಲ್ಲ ಹಾಸ್ಯದ ಒಂದು ಬ್ರಾಂಡ್ ಈಕ್ವಿಟಿ ಬಂದದ್ದೆ ಕೊರವಂಜಿಯಿಂದ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಕ್ರಾಂತಿಕಾರಕ ಬದಲಾವಣೆಗಳಾದವು - ಅದರಲ್ಲಿ ಹಾಸ್ಯಕ್ಕೆ ಒಂದು ಉತ್ತಮ ಸ್ಥಾನ ದೊರಕುವಂತಾಯಿತು. ಕೈಲಾಸಂ ಹಾಕಿದ ಒಂದು ಅಡಿಪಾಯ ರಾಶಿ - ಕಸ್ತೂರಿಯವರಿಂದ ಹಾಸ್ಯ ಸೌಧವನ್ನು ನಿರ್ಮಿಸಿತು. ಲೇಖಕರ ಬಳಗವನ್ನೇ ಸೃಷ್ಟಿಸಿತು. ಪ್ರಚೋದನೆ ಎಷ್ಟಿತ್ತೆಂದರೆ ಶಿವರಾಮ ಕಾರಂತ ಅಂತಹವರಿಂದಲೂ ಅನೇಕ ಹಾಸ್ಯ ಲೇಖನಗಳನ್ನು ಕೊರವಂಜಿ ಬರೆಸಿತು. ಹಾಗೆ ಜಿ.ಎಸ್. ಶಿವರುದ್ರಪ್ಪನವರಂತಹ ಗಂಭೀರ ಸಾಹಿತಿಗಳಿಂದ ಹಾಸ್ಯಪದ್ಯವನ್ನು ಬರೆಸಿತು. ಎ.ಕೆ. ರಾಮಾನುಜಂ 'ಅಕ್ರೂರ' ಎಂಬ ಕಾವ್ಯನಾಮದಲ್ಲಿ ತಮ್ಮ ಸಾಹಿತ್ಯ ಸೇವೆ ಮಾಡಿದರು ಹಾಗೆ ಟೀಯೆಸ್ಸಾರ್, ಕೇಫ, ಎಸ್.ಎನ್. ಶಿವಸ್ವಾಮಿ, ಅ.ರಾ.ಸೇ.,

ಟಿ. ಸುನಂದಮ್ಮ, ದಾಶರಥಿ ದೀಕ್ಷಿತ್, ರಾಮಿ, ಹಾ.ರಾ. ಮುಂತಾದ ಲೇಖಕರು ಕೊರವಂಜಿಯ ಕೊಡುಗೆಯಾಗಿ ಬಂದವರು. ವಿಶ್ವವಿಖ್ಯಾತ ವ್ಯಂಗ್ಯ ಚಿತ್ರಕಾರ ಆರ್.ಕೆ. ಲಕ್ಷ್ಮಣ್ ರಚಿಸಿದ ಪ್ರಪ್ರಥಮ ರೇಖಾಚಿತ್ರ, ನಾ. ಕಸ್ತೂರಿಯವರ ಉರಿಗಾಳಿಗೆ ಬರೆದದ್ದು. ಅದೇ ಚಿತ್ರವನ್ನು ರಾಶಿಯವರು ಕೊರವಂಜಿಯನ್ನು ಕಾಡಿಗೆ ಕಳುಹಿಸುವಾಗ ಬಳಸಿ ಮಹಿಸೂರ ಕನ್ನಡಿಗನನ್ನು ನಾಮಕರಣ ಮಾಡಿ ''ಹೋಗಿಬಿಟ್ಟು ಬರ್ತೀನಿ ಅಂದೆಯಾ ಕೊರವಂಜಿ! ಇಷ್ಟು ದಿನವೂ ನೀನು ಇದ್ದಿದ್ದೇ ಗೊತ್ತಾಗಲಿಲ್ಲವಲ್ಲೇ'' ಎಂದು ವಿವರಿಸಿ ವಿದಾಯ ಹೇಳಿದರು. ಕೊರವಂಜಿಯನ್ನು ಕಾಡಿಗೆ ಕಳುಹಿಸುವ ಸ್ಥಿತಿ ಬಂದಿದ್ದರ ಬಗ್ಗೆ ಒಂದೇ ವಾಕ್ಯದಲ್ಲಿ ವಿವರಣೆ ನೀಡಿದ್ದರು ಮಾರ್ಮಿಕವಾಗಿ. ಅಭಿಮಾನಿ ಓದುಗರಿದ್ದರೆ ಸಾಲದು, ಆರ್ಥಿಕ ಆಧಾರಸ್ತಂಭವಾಗಿ ನಿಲ್ಲುವವರು ಬೇಕು. ಇಪ್ಪತ್ತೆರಡು ವರ್ಷ ಸಂಪಾದನೆ ಇಲ್ಲದೆಯೆ ಸಂಪಾದಿಸಿದ ಪತ್ರಿಕೆ ನಡೆಸಲು ಸಾಧ್ಯವಾಗಲಿಲ್ಲ. ಆದರೆ ಈಗಿನ ಸ್ಥಿತಿ ನೋಡಿದರೆ ಹಾಸ್ಯೋತ್ಸವಕ್ಕೆ ಪ್ರಾಯೋಜನೆ ಮಾಡಲು ಮುಂದೆ ಬರುವ ಸಂಘಸಂಸ್ಥೆಗಳು ಆ ಕಾಲದಲ್ಲಿ ಇದ್ದಿದ್ದರೆ ಕೊರವಂಜಿಯನ್ನು ಕಾಡಿಗೆ ಕಳುಹಿಸಲು ಬಿಡುತ್ತಿರಲಿಲ್ಲವನೋ ಅಥವಾ ಹೋದ ತಕ್ಷಣ ಅಟ್ಟಿಸಿಕೊಂಡು ಹೋಗಿ ಅದ್ದೂರಿ ವಾಹನದಲ್ಲಿ ಮೆರವಣಿಗೆಯಲ್ಲಿ ಕರೆದುಕೊಂಡು ಬರುತ್ತಿದ್ದರೇನೊ ಅನ್ನಿಸುತ್ತದೆ. ಚಿಂತೆ ಮಾಡುವ ಹಾಗಿಲ್ಲ, ಆಗ ಪಟ್ಟ ಶ್ರಮಕ್ಕೆ ಈಗ ಫಲ ದೊರಕುತ್ತಿದೆ - ಸಮೃದ್ಧಿಯಾಗಿ ಕೊರವಂಜಿ ಒಂದು ಕಲ್ಪವೃಕ್ಷ ನಿರಂತರವಾಗಿ ಫಲ ಕೊಡುತ್ತಿದೆ.

ರಾಶಿ ಮತ್ತು ಕಸ್ತೂರಿ ಭೇಟಿಯಾದದ್ದು ಒಂದು ದೊಡ್ಡ ಆಕಸ್ಮಿಕ. ಕಸ್ತೂರಿಯವರ ಪುತ್ರ ಸೆಂಟ್ರಲ್ ಕಾಲೇಜಿನ ಹಾಸ್ಟಲ್‌ನಲ್ಲಿದ್ದರು. ಆಗ ಡಾ|| ಎಂ. ಶಿವರಾಂ ಹಾಸ್ಟಲ್‌ನ ಅಧಿಕೃತ ವೈದ್ಯರು. ಸಮಾನ ಮನಸ್ಸಿನವರಾದ ಅವರಿಬ್ಬರು ಭೇಟಿಯಾಗಬೇಕೆಂಬ ಆಸೆ ಕಸ್ತೂರಿಯವರ ಮಗ ನಾರಾಯಣಮೂರ್ತಿಯವರಿಗೆ. ಇದರ ಪ್ರತಿಫಲವೇ ಬೆಂಗಳೂರು - ಮೈಸೂರಿಗೆ ಏರ್ಪಟ್ಟ ಹಾಸ್ಯದ ಕಾರಿಡಾರ್ ರಸ್ತೆ ನಿರ್ಮಾಣ. 'ಪಂಚ್' ಪ್ರಿಯರಾದ ಇಬ್ಬರು ಆಲೋಚಿಸಿದ್ದು ಪಂಚ್‌ನ ಪತ್ನಿ 'ಜೂಡಿ'ಗೆ ಸಮಜೋಡಿಯಾಗಿ 'ಕೊರವಂಜಿ' ಕೊರವಿಯನ್ನು ಕನ್ನಡ ನಾಡಿನಲ್ಲಿ ಇಳಿಸಿದ್ದು, ಮೆರೆಸಿದ್ದು. ಇಬ್ಬರು ಎಷ್ಟು ಹೊಂದಾಣಿಕೆಯಿಂದ ಕೆಲಸ ನಿರ್ವಹಿಸಿದರೆಂದು ಕಸ್ತೂರಿಯವರ ಮಾತಿನಲ್ಲೇ ಕೇಳಿ (ಓದಿ)

''ಡಾ|| ಶಿವರಾಂ ಮತ್ತು ನಾನು ಒಂದು ದೇಹಕ್ಕೆ ಎರಡು ಬಲಗೈ ಇವೆಯೇನೋ ಎನ್ನಬೇಕು ಹಾಗೆ ಸೊಗಸಾದ ಜೋಡಿಯಾಗಿ ಕೆಲಸ ಮಾಡಿದೆವು. ರುಚಿಗಟ್ಟಾದ ವ್ಯಂಗ್ಯ ಚಿತ್ರಗಳನ್ನು ರೇಖಿಸಲು ಅಗತ್ಯವಾದ ಹಾಸ್ಯದ ವಕ್ರಗಣ್ಣಿದ್ದ ಆರ್.ಕೆ. ಲಕ್ಷ್ಮಣ್, ನಾಡಿಗ್‌ರಂತಹ ಕೆಲವು ವಿದ್ಯಾರ್ಥಿಗಳ ಪ್ರತಿಭಾ ಪ್ರಕಾಶನ ಮಾಡುವ ಅವಕಾಶವೂ ನಮಗೆ ಲಭಿಸಿತು.''

ಈ ಮೇಲಿನ ಮಾತುಗಳು ಅವರಿಬ್ಬರ ಇಡೀ ವ್ಯಕ್ತಿತ್ವವನ್ನು ಸಾರಿ ಹೇಳುತ್ತವೆ. ತಾವೇ ಮುಖ್ಯ ಎಂದು ಹೊಡೆದಾಡುವ ಈಗಿನ ಕಾಲದಲ್ಲಿ ದೇಹದ ಎರಡು ಬಲಗೈ ಎಂದು ಗುರುತಿಸುವ, ಇನ್ನೊಬ್ಬರ ಪ್ರಾಮುಖ್ಯವನ್ನು ಕಮ್ಮಿಮಾಡುವ ಯಾವ ಮಾತೂ ಆಡದ

ಗುಣ, ಚಿಕ್ಕವರನ್ನು ಪ್ರೋತ್ಸಾಹಿಸುವಾಗ ಅವರ ಪ್ರತಿಭೆ ಪ್ರಕಾಶನ ಮಾಡುವ ಅವಕಾಶ ಸಿಕ್ಕಿತೆಂಬ ಮಾತನ್ನಾಡುತ್ತಾರೆ. 'ತಮ್ಮಿಂದ ಒಬ್ಬ ಬೆಳೆದ' ಎಂಬ ವಾಕ್ಯದ ರಚನೆಯೇ ಈ ಧೀಮಂತರಿಗೆ ಅಹಂಕಾರದ ಮಾತಾಗಿತ್ತು ಅನ್ನುವಷ್ಟು ಸೌಜನ್ಯ, ಸರಳತೆ, ಸಹೃದಯತೆ. ಡಾ|| ಶಿವರಾಂ ಹಾಗೂ ಕಸ್ತೂರಿಯವರು ಚಿಕ್ಕಂದಿನಲ್ಲಿ ಕಡು ಬಡತನ ನೋಡಿದವರು. ವಿದ್ಯಾರ್ಥಿ ದೆಸೆಯಲ್ಲಿ ಕಷ್ಟಪಟ್ಟವರು. ವೃತ್ತಿಯಲ್ಲಿ ಪರಿಣಿತರು. ಕಸ್ತೂರಿಯವರು ಪ್ರಾಧ್ಯಾಪಕರು, ಶಿವರಾಂ ವೈದ್ಯರಾದವರು. ವ್ಯಕ್ತಿ ಬೇರೆ ಪ್ರವೃತ್ತಿ ಬೇರೆ ಅನ್ನಿಸಲಿಲ್ಲ ಇಬ್ಬರಿಗೂ. ಕಾಲೇಜಿನಲ್ಲಿ ಪಾಠ ಮಾಡುವಾಗ, ಹೊರಗೆ ಬಂದಾಗ ಅಧ್ಯಾಪಕರ ಕೊಠಡಿಯಲ್ಲಿ ಎಲ್ಲಾ ಕಡೆಯಲ್ಲೂ ಹಾಸ್ಯ ಚಿಮ್ಮುತ್ತಿತ್ತು. ಡಾ|| ಶಿವರಾಂ ತಮ್ಮ ಕ್ಲಿನಿಕ್‌ಗೆ ಬರುವ ಹಾಗೆ ಮನೆಗೆ ಬರುವ ರೋಗಿಗಳಿಗೆ ಅವರ ಜತೆ ಬರುವ ಚಿಂತಕರನ್ನು (ಚಿಂತೆಯಿಂದ ಮನಸ್ಸು ಖಿನ್ನ ಮಾಡಿಕೊಂಡಿರುವವರು) ನಗಿಸಿ ಕಳುಹಿಸುತ್ತಿದ್ದರು. ರಾಶಿ ಮತ್ತು ಕಸ್ತೂರಿಯವರು ಸೃಷ್ಟಿಸಿದ ವಲಯ ವಿಶಾಲವಾದದ್ದು ವೈಶಿಷ್ಟ್ಯಪೂರ್ಣವಾದದ್ದು. ಅವರು ಬೀಸಿದ ಬಲೆ, ಕಟ್ಟಿದ ಅಖಾಡ ಅದ್ಭುತ ಕೆಲಸ ಮಾಡಿಸಿತು. Ambrose Bierce ಯನ್ನು ಚೆನ್ನಾಗಿ ಓದಿಕೊಂಡವರು. ಅವರ Devil's Dictonary ಪ್ರೇರಿತರಾಗಿ ಕಸ್ತೂರಿಯವರು ಅನರ್ಥಕೋಶ ಹೊರ ತಂದರು. ರಾ.ಶಿ.ಯವರು ಆಗಾಗ್ಗ Ambrose ನ್ನು ಕೋಟ್ ಮಾಡುತ್ತಿದ್ದರು. ಅವರಿಗೆ ಬಹು ಪ್ರಿಯವಾದ ಮಾತು ಅಂದರೆ Mind - The thing with which we think; we think (ಮನಮಂಥನ ಪುಟ 242) ಕಸ್ತೂರಿಯವರು ಅಣಕವಾಡುಗಳನ್ನು ಬೇಕಾದಷ್ಟು ರಚಿಸಿದರೆ ರಾ.ಶಿ.ಯವರು 'ಕೆಣಕೋಣ ಬಾರಾ' ಎಂಬ ಸಂಕಲನ ಪ್ರಕಟಿಸಿದರು. ಪ್ರಚಲಿತ ವಿದ್ಯಮಾನಗಳನ್ನು ಕುರಿತು ಇಬ್ಬರು ಹಾಸ್ಯ ಕೋನದಿಂದ ಪ್ರತಿಕ್ರಿಯಿಸುತ್ತಿದ್ದರು. ಅವರಿಬ್ಬರನ್ನು ಅಜಾತಶತ್ರುಗಳೆಂದರೆ ಬರೀ ಹೊಗಳಿಕೆ ಮಾತಾಗುವುದಿಲ್ಲ. ನಡವಳಿಕೆ ಹಾಗಿರುತ್ತಿತ್ತು. ತಮಗೆ ಮೋಸ ಮಾಡಿದವರ ಬಗ್ಗೆ, ಕೆಟ್ಟದ್ದನ್ನು ಮಾಡಿದವರ ಬಗ್ಗೆ ಕೋಪಗೊಳ್ಳುವ ಬದಲು ಅವನ ಮನಸ್ಸಿನ ವಿಶ್ಲೇಷಣೆಗೆ ರಾ.ಶಿ.ಯವರು ತೊಡಗುತ್ತಿದ್ದರೆಂದು ಅವರ ಮಗಳು ವಿಮಲಾ ಶೇಷಾದ್ರಿ ಬರೆದಿದ್ದಾರೆ. ಕಸ್ತೂರಿಯವರೂ ಕೂಡ ಯಾರ ಬಗ್ಗೆಯೂ ತಲೆಕೆಡಿಸಿಕೊಂಡವರೇ ಅಲ್ಲ. ಎಲ್ಲವನ್ನು ಉತ್ತುಂಗದಲ್ಲಿ ನಿಂತು ನೋಡುವ ಮನೋಭಾವ.

ಕಸ್ತೂರಿಯವರನ್ನು ಕುರಿತು ರಾ.ಶಿ.ಯವರು ಪತ್ರವೊಂದರಲ್ಲಿ "your sense of humour is the golden mean; it can hit without hurting" ಎಂದು ಬರೆದು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ. ಇದೇ ಮಾತು ರಾ.ಶಿ.ಯವರಿಗೂ ನೂರಕ್ಕೆ ನೂರರಷ್ಟು ಅನ್ವಯ.


ಹಾಸ್ಯ ವ್ಯಾಕರಣ ಬರೆದವರು ಕಸ್ತೂರಿ ಮತ್ತು ರಾ.ಶಿ. ಹಾಸ್ಯ ಹೇಗಿರಬೇಕು ಎಂದು ದೀರ್ಘ ಭಾಷಣ ಮಾಡಲಿಲ್ಲ, ಸಂಶೋಧನಾ ಲೇಖನ ಬರೆಯಲಿಲ್ಲ. ತಾವು ಮಾದರಿಯಾಗಿ ತೋರಿಸಿದರು. ಹಾಸ್ಯ ಸಂಕ್ಷಿಪ್ತವಾಗಿರಬೇಕು ಸಾಂಕೇತಿಕವಾಗಿರಬೇಕು ಅಷ್ಟೇ ಸಮೃದ್ಧಿಯಾಗಿರಬೇಕು, 'ಸಮೃದ್ಧಿ' ಎಂದರೆ ಜಾಸ್ತಿಯಲ್ಲ ಕ್ವಾಲಿಟಿಯಲ್ಲಿ ಎಂದು

ಸಾರಿದರು. ಹಾಸ್ಯ ಪ್ರಸಾರದಲ್ಲಿ ಹೇಳಬೇಕಾದಷ್ಟನ್ನು ಮಾತ್ರ, ಹೇಳುವ ಕೌಶಲ್ಯವನ್ನು ತಿಳಿಸಿ, ಓದುಗರ ಕಲ್ಪನೆಗೆ ಬಿಡುವ ಕಲೆಯನ್ನು ಕಲಿಸಿಕೊಟ್ಟರು.

ಗುಂಪು ಕಟ್ಟಿಕೊಂಡು ವಯಸ್ಸಿನ ಅಂತರವೇ ಇಲ್ಲದೆ ಎಲ್ಲರನ್ನು ಬೆಳೆಸುತ್ತಾ ಬಂದರು. ಡಾ|| ಹೆಚ್.ಕೆ. ರಂಗನಾಥ್ ಅಂತಹ ಪ್ರತಿಭಾನ್ವಿತರು ರಾಶಿ ಮತ್ತು ಕಸ್ತೂರಿಯವರನ್ನು ಕುರಿತು ಹೇಳುವ ಮಾತು ಹೀಗಿದೆ:

ಜಿ.ಪಿ. ರಾಜರತ್ನಂ, ಡಾ|| ಶಿವರಾಂ, ಆದ್ಯ ರಂಗಾಚಾರ್ಯ ಕೂಡಿದರೆಂದರೆ ಮಾತೆಲ್ಲ ಮುತ್ತು-ರತ್ನ-ಹವಳ. ಅವರೊಂದಿಗೆ ಅಕಸ್ಮಾತ್ ನಾ.ಕಸ್ತೂರಿಯವರೂ ಸೇರಿದರೆ ಹೊನ್ನ ಸರದಲ್ಲಿ ಕೆಂಪು ಹವಳವನ್ನು ಕೋದಂತೆ ನಗೆಯ ಹೊಳೆ. ಅವರ ಸಂಭಾಷಣೆಯ ಸವಿಯನ್ನು ಉಂಡಿದ್ದೇನೆ; ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದೇನೆ, ತಿಳಿವನ್ನು ಬೆಳೆಸಿಕೊಂಡಿದ್ದೇನೆ.

ಹೇಳೋದಕ್ಕೆ ಬೇಕಾದಷ್ಟಿದೆ ಸ್ಟಾಕು. ಆದರೆ ಸದ್ಯಕ್ಕೆ ಇಷ್ಟು ಸಾಕು.



ಜನಪ್ರಿಯ ನಗೆಗಾರರು:

ಚಾರ್ಲಿ ಚಾಪ್ಲಿನ್

✧ ಶಿವು

ಐವತ್ತರ ದಶಕದ ಆದಿಭಾಗ. ನಾನು ಆಗ ಮಿಡ್ಲ್ ಸ್ಕೂಲಿನಲ್ಲಿ ಓದುತ್ತಿದ್ದೆ. ಊರಿಗೊಂದು ಸರ್ಕಸ್ ಬಂದಿತ್ತು. ಸರ್ಕಸ್ ನೋಡಿ ಬಂದ ಹುಡುಗರೆಲ್ಲಾ ತಾವು ನೋಡಿ ಆನಂದಿಸಿದ ರೋಮಾಂಚಕ ದೃಶ್ಯಗಳನ್ನೆಲ್ಲಾ ಮಿಕ್ಕವರಿಗೆ ಹೊಟ್ಟೆಕಿಚ್ಚು ಬರೋ ಹಾಗೆ ಹೇಳುತ್ತಿದ್ದರು. ಕ್ಲಾಸ್ ಮಾನಿಟರ್ ಡೆಲ್ವಿ ಹೇಳುತ್ತಿದ್ದ:

''ನಿನ್ನೆ ಸರ್ಕಸ್ಸಿನಲ್ಲಿ ಚಾರ್ಲಿ ಮಾಡ್ತಾ ಇದ್ದ ಚೇಷ್ಟೆಗಳನ್ನು ನೋಡಿ ನಕ್ಕೂ ನಕ್ಕೂ ಸಾಕಾಯ್ತು.''

ಸರ್ಕಸ್ಸಿನ ಯಾವ ನಕಲಿ ಶಾಮನಾದರೂ ಅವನ ಹೆಸರು ಏನೇ ಇರಲಿ ನಗಿಸುವವನಾದರೆ ಅವನು ಚಾರ್ಲಿ. ಈ ಶತಮಾನದ ಯಶಸ್ವಿ ನಗೆ ನಟ ಚಾರ್ಲಿ ಚಾಪ್ಲಿನ್‌ನ ಪ್ರಭಾವ, ಕೀರ್ತಿ ಇಷ್ಟು ಮಟ್ಟಿಗೆ ಹರಡಿತ್ತು.

ಚಾರ್ಲ್ಸ್ ಸ್ಪೆನ್ಸರ್ ಚಾಪ್ಲಿನ್ ಹುಟ್ಟಿದ್ದು ಲಂಡನ್ನಿನಲ್ಲಿ (ಏಪ್ರಿಲ್ 16-1889). ತಂದೆ, ತಾಯಿ ಮ್ಯೂಸಿಕ್ ಹಾಲ್ ಕಲಾವಿದರು. ಆಗಿನ ಇಂಗ್ಲೆಂಡಿನಲ್ಲಿ ಜನರ ಮನರಂಜನೆಗೆ ಮೀಸಲಾಗಿದ್ದ ರಂಗಮಂಚ ಈ ಮ್ಯೂಸಿಕ್ ಹಾಲ್. ಗೀತ ನಾಟಕಗಳು ಜಾನಪದ ಸಂಗೀತ ಹೀಗೆ ವಿವಿಧ ಕಾರ್ಯಕ್ರಮಗಳನ್ನು ಮ್ಯೂಸಿಕ್ ಹಾಲ್ ನೀಡುತ್ತಿತ್ತು.

ಚಾರ್ಲಿ ಚಿಕ್ಕವನಾಗಿದ್ದಾಗಲೇ ಅವನ ತಂದೆ ಕುಡಿತದ ಚಟಕ್ಕೆ ಬಲಿಯಾಗಿ, ಮನೆಬಿಟ್ಟು ಹೋಗಿದ್ದ. ಬಾಲ್ಯದಿಂದಲೇ ಚಾರ್ಲಿ ಮತ್ತು ಅವನ ತಮ್ಮ ಸಿಡ್ನಿಗೆ ಕಷ್ಟಕಾರ್ಪಣ್ಯಗಳ ಸುರಿಮಳೆ. ಹತ್ತನೇ ವಯಸ್ಸಿನಲ್ಲಿ ಚಾರ್ಲಿ 'ವೆರಿಟಿ ಸ್ಟೇಜ್' ಎಂಬ ನಾಟಕ ಸಂಸ್ಥೆಗೆ ಸೇರಿದ, ಇದೊಂದು ಮೂಕಾಭಿನಯದಲ್ಲಿ ವಿಶೇಷ ಪರಿಶ್ರಮ ಹೊಂದಿದ್ದ ಸಂಸ್ಥೆ (ಪ್ಯಾಂಟೋಮೈಮ್). 1913 ರಲ್ಲಿ ಈ ಸಂಸ್ಥೆ ಅಮೆರಿಕಾ ದೇಶದಲ್ಲಿ ಪ್ರವಾಸ ಕೈಗೊಂಡಿತು. ಚಾರ್ಲಿಗೆ ಅಲ್ಲಿ ಸುಪ್ರಸಿದ್ಧ ಅಮೆರಿಕನ್ ನಿರ್ದೇಶಕ ಮಾರ್ಕ್ ಸೆನ್ನೆಟ್‌ನ ಭೇಟಿಯಾಯಿತು. ಚಾರ್ಲಿಯ ಪ್ರತಿಭೆಯನ್ನು ಅವನು ಗುರುತಿಸಿ ತನ್ನ ಚಿತ್ರಗಳಲ್ಲಿ ನಟಿಸಲು ಚಾರ್ಲಿಯನ್ನು ಮಾರ್ಕ್ ಆಹ್ವಾನಿಸಿದ. ''ಕೀ ಸ್ಟೋನ್'' ನಗೆ ಚಿತ್ರ ಸರಣಿಯಲ್ಲಿ ಚಾರ್ಲಿ ಚಾಪ್ಲಿನ್‌ನ ಪದಾರ್ಪಣವಾಯಿತು. ಮೊದಲ ವರ್ಷದಲ್ಲೇ ಮೂವತ್ತೈದು ಕೀ ಸ್ಟೋನ್

ನಗೆ ಚಿತ್ರಗಳು ತಯಾರಾಗಿದ್ದು, ಚಾರ್ಲಿಗೆ ಅತಿ ಯಶಸ್ವಿ ನಗೆ ನಟನೆಂಬ ಖ್ಯಾತಿ ದೊರಕಿತು. ಚಾರ್ಲಿಗೆ ಮೊದಲಿನಿಂದಲೂ 'ಟ್ರಾಂಪ್' ಪಾತ್ರವನ್ನು ಸೃಷ್ಟಿಸಿ, ಅದರ ಉತ್ತಮ ಹಾಸ್ಯ ಸಾಧ್ಯತೆಗಳನ್ನು ಸಂಪೂರ್ಣವಾಗಿ ಬಳಸುವ ಆಶೆಯಿತ್ತು. ಈ ಟ್ರಾಂಪ್ ಒಬ್ಬ ಸಾಮಾನ್ಯ ಮನುಷ್ಯ. ನಮ್ಮ ಆರ್.ಕೆ. ಲಕ್ಷ್ಮಣ್ ಸೃಷ್ಟಿಸಿರುವ ಮಿ. ಸಿಟಜನ್ ತರಹ. ಚಿಕ್ಕ ಪೊರಕೆ ಮೀಸೆ. ದೊಗಳೆ ಪ್ಯಾಂಟ್ ಇಸ್ತ್ರಿ ಇಲ್ಲದ ಕೋಟು. ಸುಕ್ಕು ಸುಕ್ಕಾದ ಬೋ ಟೈ, ತಲೆ ಮೇಲೆ ಒಂದು ಕರೀ ಟೋಪಿ, ಕೈಯ್ಯಲ್ಲೊಂದು ಬೆತ್ತ, ಇಷ್ಟು ಟ್ರಾಂಪ್‌ನ ವೇಷಭೂಷಣ. ಸೌಜನ್ಯಪೂರ್ಣ ನಡವಳಿಕೆ, ಕರುಣೆ ಇವೆಲ್ಲಾ ಇದ್ದರೂ ಈತ ಮಾಡಿದ್ದೆಲ್ಲಾ ಎಡವಟ್ಟು, ಈ ಎಡವಟ್ಟು ವ್ಯವಹಾರ ಮಕ್ಕಳಿಗೆ ಬಿದ್ದು ಬಿದ್ದು ನಗುವಂತಹ ಅವಕಾಶ. ಹಾಸ್ಯದೊಂದಿಗೆ ನೋಟಕರಲ್ಲಿ ಸಹಾನುಭೂತಿಯನ್ನು ಉಕ್ಕಿಸುವ ಈ ಟ್ರಾಂಪ್, ಚಾರ್ಲಿಯ ಅಭಿನಯ ಕುಶಲತೆಗೆ ಉತ್ತಮ ಉದಾಹರಣೆ. ಕಾಲು ಜಾರಿಸುವ ನಡಿಗೆ, ಅಳತೆ ಮೀರಿದ ಷೂಗಳು. ಮುಟ್ಟಿದ್ದನ್ನೆಲ್ಲಾ ಬೀಳಿಸುವ ಅಪಘಾತ ಪ್ರವೃತ್ತಿಯಲ್ಲೂ ಆಸಕ್ತಿ ಮೂಡಿಸುವ ನಟನೆ, ಹೃದಯವಂತಿಕೆಯನ್ನು ಹೊರಸೂಸುವ ಮುಖಭಾವ ಇವು ಟ್ರಾಂಪ್‌ನ ಜನಪ್ರಿಯತೆಗೆ ಮುಖ್ಯ ಕಾರಣ.

ಚಾರ್ಲಿ ಚಾಪ್ಲಿನ್ ನಟಿಸಿರುವ ಅನೇಕ ಜನಪ್ರಿಯ ಚಿತ್ರಗಳಲ್ಲಿ ಎರಡನ್ನು ಉಲ್ಲೇಖಿಸಬೇಕಾದರೆ ನನ್ನ ಆಯ್ಕೆ 'ಮಾಡರ್ನ್ ಟೈಂಮ್ಸ್' ಮತ್ತು 'ದ ಗ್ರೇಟ್ ಡಿಕ್ಟೇಟರ್' ಆಧುನಿಕ ಯಾಂತ್ರಿಕ ಜೀವನದಲ್ಲಿ ಮನುಷ್ಯ ಹೇಗೆ ಯಂತ್ರಗಳ ಗುಲಾಮನಾಗಿದ್ದಾನೆಂಬುದನ್ನು ಹಾಸ್ಯ ಶೈಲಿಯಲ್ಲಿ ಮೂಡಿಸುವ ಚಿತ್ರ ಮಾಡರ್ನ್ ಟೈಂಮ್ಸ್ ಯಂತ್ರ ಜೋಡಣೆ ಸಾಲಿನಲ್ಲಿ, ಚಲಿಸುತ್ತಿರುವ ಪಟ್ಟಿಯ ಮುಂದೆ ಯಾಂತ್ರಿಕವಾಗಿ ಕೆಲಸ ಮಾಡುತ್ತಿದ್ದ ಚಾರ್ಲಿ, ಪಟ್ಟಿಯ ವೇಗ ಹೆಚ್ಚಿದಂತೆ. ತಾನೂ ತನ್ನ ವೇಗವನ್ನು ಹೆಚ್ಚಿಸುವ ಮೂಕಾಭಿನಯ ಮೇಲು ನೋಟಕ್ಕೆ ನಗೆ ತರಿಸಿದರೂ, ಅದು ನಮ್ಮ ಆಧುನಿಕ ಜೀವನದ ವಿಮರ್ಶೆ ಎಂಬ ಸತ್ಯ ಹೊಳೆದಾಗ ನಗೆ, ಅರಿವನ್ನು ಮೂಡಿಸುವ ಉಪಕರಣವಾಗುತ್ತದೆ. ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ಯೆಹೂದ್ಯರ ಮೇಲೆ ನಡೆಸಿದ ಅತ್ಯಾಚಾರ ಹೇಗೆ ಹಾಸ್ಯ ಚಿತ್ರಕ್ಕೆ ಗ್ರಾಸವಾಗಬಲ್ಲುದೆಂಬುದಕ್ಕೆ ''ದ ಗ್ರೇಟ್ ಡಿಕ್ಟೇಟರ್'' ಉತ್ತಮ ಉದಾಹರಣೆ.

ಚಾಪ್ಲಿನ್‌ಗೆ ಮೂಕಾಭಿನಯದತ್ತ ಹೆಚ್ಚು ಒಲವು. ಮಾತು ತಿಳಿಸುವುದಕ್ಕಿಂತ ಹೆಚ್ಚು ಪ್ರಬಲವಾಗಿ ಅಭಿನಯ ವ್ಯಕ್ತಪಡಿಸುತ್ತದೆ ಎಂಬುದು ಅವನ ನಂಬಿಕೆ. ಹಾಗಾಗಿ ಮೂವತ್ತರ ದಶಕದ ಉತ್ತರಾರ್ಧದಲ್ಲಿ ಧ್ವನಿ ಚಿತ್ರಗಳು ತಯಾರಾಗುತ್ತಿದ್ದರೂ ಚಾರ್ಲಿ ತನ್ನ ಚಿತ್ರಗಳಲ್ಲಿ ಸಂಭಾಷಣೆಯನ್ನು ತೀರಾ ಮಿತವಾಗಿ ಬಳಸುತ್ತಿದ್ದ.


ಚಾರ್ಲಿಯ ಸಾಮಾಜಿಕ ನ್ಯಾಯ ಪ್ರಜ್ಞೆಯನ್ನು, ಸಮಾಜವಾದಿ ಒಲವು ಎಂದು ತಪ್ಪಾಗಿ ತಿಳಿದುಕೊಂಡು 1952 ರಲ್ಲಿ ಅಮೆರಿಕಾ ಚಾರ್ಲಿಯನ್ನು ತನ್ನ ದೇಶದಲ್ಲಿ ನೆಲೆಸಲು ಬಿಡಲಿಲ್ಲ. ಚಾರ್ಲಿ ತನ್ನ ನಾಲ್ಕನೆಯ ಪತ್ನಿ ಊನಾ ಓ ನೀಲ್‌ಳೊಂದಿಗೆ ಸ್ವಿಟ್ಜರ್ಲೆಂಡಿನಲ್ಲಿ ನೆಲೆಸಿದ.

1972 ರಲ್ಲಿ ಅಮೆರಿಕದ ಚಿತ್ರ ನಿರ್ಮಾಪಕರ ಸಂಘ ಚಾರ್ಲಿಗೆ ಗೌರವ ಪ್ರಶಸ್ತಿ ನೀಡಿತು. ವೇದಿಕೆಯ ಮೇಲೆ ಬಂದು ಆ ಪ್ರಶಸ್ತಿಯನ್ನು ಸ್ವೀಕರಿಸುವ ಸಮಯದಲ್ಲಿ ಮೂಕಾಭಿನಯಪಟು ಚಾರ್ಲಿ ಚಾಪ್ಲಿನ್.

''ಮಾತು ಎಷ್ಟು ದುರ್ಬಲ, ಎಷ್ಟು ನಿರರ್ಥಕ'' ಎಂದು ಹೇಳಿದ್ದು, ಒಮ್ಮೆಲೇ ಚಾರ್ಲಿಯ ಸಮಗ್ರ ಯಶಸ್ಸನ್ನು ಸಭಿಕರ ಕಣ್ಣ ಮುಂದೆ ನಿಲ್ಲಿಸಿತು.

1975 ರಲ್ಲಿ, ಬ್ರಿಟಿಷ್ ಸರಕಾರ ಚಾರ್ಲಿ ಚಾಪ್ಲಿನ್‌ಗೆ ನೈಟ್ ಹುಡ್ ನೀಡಿತು. ಈ ಗೌರವ ಸಂದ ಎರಡು ವರ್ಷಕ್ಕೆ 1977ರ ಕ್ರಿಸ್‌ಮಸ್ ದಿನ (ಡಿಸೆಂಬರ್ 25) ಚಾರ್ಲಿ ಸ್ವಿಟ್ಜರ್ಲೆಂಡಿನ ವೇವಿಯಲ್ಲಿ ನಿಧನ ಹೊಂದಿದ.

ತೀವ್ರ ಸಂವೇದನೆಯಿಂದ ಸಮಾಜದ ನೋವುಗಳಿಗೆ ಸ್ಪಂದಿಸಿ ಚಾರ್ಲಿ ನಗೆಯ ಚೌಕಟ್ಟಿನಲ್ಲಿ ಚಿತ್ರಗಳನ್ನು ನಿರ್ಮಿಸಿದ್ದರೂ. ಈಗ ಚಾರ್ಲಿಯ ಕ್ಯಾಸೆಟ್ಟುಗಳೆಂದರೆ, ಶ್ರೀಮಂತ ಮಕ್ಕಳ ಹುಟ್ಟು ಹಬ್ಬದಂದು ಮಕ್ಕಳನ್ನು ಟಿ.ವಿ. ಮುಂದೆ ಕೂರಿಸಿ ನಗಿಸುವ ಸಾಧನ ಎಂಬ ಭಾವನೆ ಪ್ರಚಲಿತವಾಗಿದೆ. ಮಕ್ಕಳನ್ನು ಹೊಟ್ಟೆ ತುಂಬಾ ನಗಿಸುವುದರ ಜೊತೆಗೆ ಹಿರಿಯರನ್ನೂ ಚುಚ್ಚಿ ಎಬ್ಬಿಸುವುದು ಚಾರ್ಲಿ ಚಿತ್ರಗಳ ಹೆಗ್ಗಳಿಕೆ. ಚಾರ್ಲಿಯ ನಟನೆ ನೋಡುವುದಕ್ಕೆ ಬಹು ಸುಲಲಿತವಾಗಿ ಕಂಡರೂ ಅದರ ಹಿಂದಿನ ಪರಿಶ್ರಮ, ಪ್ರತಿಭೆ, ಸಂವೇದನೆ ಇವುಗಳನ್ನು ಚೆನ್ನಾಗಿ ಮನಗಂಡರೆ ಮಾತ್ರ ಕನ್ನಡ ಚಿತ್ರ ರಂಗದಲ್ಲೂ ಒಬ್ಬ ಚಾರ್ಲಿಯನ್ನು ಕಾಣಬಹುದು. ಅಂತಹ ದಿನ ಬೇಗನೆ ಬರಲಿ.



'ಬುದ್ಧೋಜಿ' - ಒಂದು ವಿನೂತನ ಪ್ರಯೋಗ

✧ ಗೌತಮ

ವೈದ್ಯಕೀಯ, ಆಧ್ಯಾತ್ಮ, ಕಥೆ ಕವನ, ಅಣಕವಾಡು. ಐತಿಹಾಸಿಕ ಕಾದಂಬರಿ, ವೈಜ್ಞಾನಿಕ ಸಾಹಿತ್ಯ, ಮನೋವೈಜ್ಞಾನಿಕ ಸಾಹಿತ್ಯ, ಪ್ರಮುಖವಾಗಿ ಹಾಸ್ಯ ಸಾಹಿತ್ಯ ಮುಂತಾದ ಅನೇಕ ಪ್ರಕಾರಗಳಲ್ಲಿ ಕೃಷಿ ನಡೆಸಿ ಸಾಹಿತ್ಯ ಕ್ಷೇತ್ರವನ್ನು ಸಮೃದ್ಧವಾಗಿ ಬೆಳೆಸಿರುವ 'ರಾಶಿ'ಯವರ, 'ಇಂಥವನ್ನೂ ಇವರು ಬರೆದಿರುವರೇ?!' ಎಂದು ಆಶ್ಚರ್ಯ ಪಡುವಂತೆ ಮಾಡುವ, ಮೊದಲ ಓದಿಗೇ ಅರ್ಥವಾಗದ ಹಾಗೆ ರಚಿಸಿರುವ 'ಬುದ್ಧೋಜಿ' ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆನ್ನುವುದನ್ನು ನಿರ್ಧರಿಸುವುದು ಕೊಂಚ ಕಷ್ಟವೇ ಆದರೂ, ಅದನ್ನು ಓದಿದ ನಂತರ ಅದು ನೀಡುವ ಮುದವೇ ವಿಶಿಷ್ಟವಾದದ್ದು.

ಅಧಿಕಾರದಲ್ಲಿರುವವರು, ಜನ ಸೇವಕರು, ಸಮಾಜದ ಹಿತಚಿಂತಕರು, ಪ್ರತಿಷ್ಠಿತರು, ಪೂಜ್ಯರು ಎಂದೆಲ್ಲಾ ಖ್ಯಾತರಾದವರು ಸಭ್ಯತೆಯ ಸೋಗಿನಲ್ಲೇ ಸಮಾಜಕ್ಕೆ ಹೇಗೆ ದ್ರೋಹ ಬಗೆಯುತ್ತಾರೆಂಬುದನ್ನು ತುಂಬ ಚಮತ್ಕಾರದಿಂದ ಬಯಲಿಗೆಳೆಯುವ ಈ 'ಬುದ್ಧೋಜಿ'ಯಲ್ಲಿನ ಎಪಿಸೋಡುಗಳು ಒಂದಕ್ಕಿಂತಲೂ ಒಂದು ಕುತೂಹಲಕಾರಿಯಾಗಿದ್ದು, ಇದರಲ್ಲಿನ ವಸ್ತು ಹಿಂದೆಂದಿಗಿಂತಲೂ ಇಂದಿಗೇ ಹೆಚ್ಚು ಪ್ರಸ್ತುತವೆನ್ನಿಸುತ್ತದೆ.

ರಾಮೋಜಿ, ಮಾಲತೀಜಿ, ಬಿಡ್ಡಣ್ಣ, ಅಹ್ಮದ್ ಕಾಕಾ, ನಂಜಿ, ಟಾಮಿ, ಇವರುಗಳದ್ದೇ ಒಂದು ಟೀಮು. 'ಮಜೇಂದ್ರ ವಿಲಾಸ'ವೂ ಆ ಟೀಮಿನ ಒಂದು ಅಂಗವೇ. ಆ ಟೀಮನ್ನು ಉಪಯೋಗಿಸಿಕೊಂಡು, ಅವ್ಯವಹಾರ ನಡೆಯುವ ತಾಣಗಳನ್ನು ಪತ್ತೆ ಹಚ್ಚಿ, ನಾನಾ ರೀತಿಯ ಬಲೆಗಳನ್ನು ಹೆಣೆದು, ಭ್ರಷ್ಟರು ಅದರಲ್ಲಿ ಬೀಳುವಂತೆ 'ಬುದ್ದು'ಗಳನ್ನಾಗಿ ಮಾಡಿ, ಅವರು ಲಪಟಾಯಿಸಿದ್ದನ್ನ ಅವರಿಂದಲೇ ಕಕ್ಕಿಸುವ, ಬ್ರಹ್ಮ, ಬುರುಡೆಯ ಬುದ್ಧೋಜಿಯೇ ಈ 'ಬುದ್ಧೋಜಿ', ಜಗ್ಗೋಜಿ ಕನ್ನೋಜಿಯರ ಕುಲಸ್ತ, ಕಂಡದ್ದನ್ನ, ಕಂಡುಹಿಡಿದದ್ದನ್ನ ಜಗತ್ತಿಗೆ ತಿಳಿಸುವ 'ಬುದ್ಧ'.

ಮೊದಲ ಎಪಿಸೋಡಾದ 'ಕಾಫಿ ಕುಡಿದು ಬರ್ತೀನಿ'ಯಲ್ಲಿನ ರಾಮೋಜಿ ಮಾಲತೀಜಿಯರು, ಬಿಡ್ಡಣ್ಣ ನಂಜಿಯರಿಗೆ ಇಲ್ಲೇನು ಕೆಲಸ, ಭೀಮಾ ಜೋಷಿ ಏತಕ್ಕೆ ಬಂದ, ಒಂದಕ್ಕೊಂದಕ್ಕೆ ಎಂಥ ಸಂಬಂಧ ಎಂದೆಲ್ಲ ತಲೆ ಕೆರೆದುಕೊಳ್ಳುತ್ತಿರುವಷ್ಟರಲ್ಲೇ

ಎಪಿಸೋಡಿನ ಕೊನೆಯ ಅಧ್ಯಾಯಕ್ಕೆ ಬಂದಿರುತ್ತೇವೆ. ಬೆಂದ ಮನೆಗೇ ಹಿರಿಯಲು ಹವಣಿಸುವ ಭೀಮಾ ಜೋಷಿ ತಂತಾನೇ ತನ್ನ 'ಒಳಜೇಬ'ನ್ನು ತೆರೆಯುವಂತೆ ಮಾಡುವ 'ಟೀಮಿ'ನವರ ಕಾರ್ಯತಂತ್ರಕ್ಕೆ ಮೂಕವಿಸ್ಮಿತರಾಗುತ್ತೇವೆ. ಏನು ನಡೆಯುತ್ತಿದೆ ಎಂಬುದರ ಸುಳಿವೂ ಸಿಕ್ಕದೆ, ಕೊನೆಯ ಅಧ್ಯಾಯಕ್ಕೆ ಬಂದಾಗಲಷ್ಟೇ ಸ್ಫೋಟಗೊಳ್ಳುವ 'ಬುದ್ಧೋಜಿ'ಯ ಕಾರ್ಯತಂತ್ರ ದಂಗು ಬಡಿಸುತ್ತದೆ. ತಲೆ ಬುಡ ತಿಳಿಯದಂತಹ ಸಣ್ಣ ಸಣ್ಣ ಅಧ್ಯಾಯಗಳನ್ನು ಅಂತಿಮವಾಗಿ ಒಟ್ಟೈಸುವ ಪರಿಯಂತೂ ಅನನ್ಯ, ಅದ್ಭುತ, ರೋಮಾಂಚಕಾರಿ.'ಅಬ್ಬ' ಎನ್ನುವ ಉದ್ಗಾರ ತಂತಾನೇ ಓದುಗನ ಬಾಯಿಂದ ಹೊರಹೊಮ್ಮುವುದರಲ್ಲಿ ಸಂಶಯವೇ ಇಲ್ಲ.

'ಬುದ್ಧೋಜಿ'ಯಲ್ಲಿನ ಒಂದು ವಿಶೇಷವೆಂದರೆ, 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ, ಭ್ರಷ್ಟರಿಂದ ಕಕ್ಕಿಸಿದ್ದನ್ನು ಕೊಂಡೆನಪಲ್ಲಿಯ ಭೈರವನ ಗುಡಿಯ ಪೂಜಾರಪ್ಪನಿಗೆ ಅರ್ಪಿಸಿ, ಆ ಮೂಲಕ, ಯಾವ ಸಮಾಜದಿಂದ ಕೊಳ್ಳೆ ಹೊಡೆಯಲ್ಪಟ್ಟಿತ್ತೋ, ಆ ಸಮಾಜಕ್ಕೆ ಆ ಹಣ ಸೇರಬೇಕೆನ್ನುವ ಉದಾತ್ತವಾದ ಧ್ಯೇಯ.

'ಬುದ್ಧೋಜಿ'ಯಲ್ಲಿನ ಇನ್ನೊಂದು ವಿಶೇಷ, ಅದರ 'ಮಿಂಚಿನ ಓಟ'. 'ಇವರೆಲ್ಲ ಯಾರು, ಈ ಘಟನೆಯಲ್ಲಿ ನಡೆಯುವ ಮೋಸವೇನು' ಎಂದೆಲ್ಲ ಯೋಚಿಸುತ್ತಲೇ ಓದುತ್ತಿರುವಾಗ, 'ಹೀಗಾಗಲು ಸಾಧ್ಯವೇ?' ಅಂತ ಪ್ರಶ್ನೆಯನ್ನು ಹಾಕಿಕೊಳ್ಳಲೂ ವ್ಯವಧಾನವಿಲ್ಲದಷ್ಟು ವೇಗವಾಗಿ 'ಕಥೆ' ಓಡುತ್ತದೆ. ಹಾಗಾಗಿ ಕಥೆಯ ಕೊನೆ ಮುಟ್ಟಿದಾಗ, ಬೆರಗಾಗುವುದಷ್ಟೇ ಓದುಗನ ಕೆಲಸವಾಗುತ್ತದೆ.

ಒಂದೆರಡು ಎಪಿಸೋಡುಗಳನ್ನು ಓದುತ್ತಿದ್ದಂತೆಯೇ 'ಬುದ್ಧೋಜಿ'ಯ ಉದ್ದೇಶ ಸ್ಪಷ್ಟವಾಗುತ್ತದೆಯಾದರೂ, ಆ ಉದ್ದೇಶ ಸಾಧನೆ ಹೇಗಾಗುತ್ತದೆಂಬ ಕುತೂಹಲವೇ ಮುಂದಿನ ಎಪಿಸೋಡುಗಳನ್ನು ಓದಲು ದಾಪುಗಣ್ಣು ಹಾಕುವಂತೆ ಮಾಡುತ್ತದೆ. ಹಾಗಾಗಿ, ಪುಸ್ತಕವನ್ನು ಒಮ್ಮೆ ಕೈಗೆತ್ತಿಕೊಂಡರೆ, ಕೆಳಗಿಡುವುದು, ಕೊನೆಯ ಪುಟ ಓದಿದ ನಂತರವಷ್ಟೇ.

ಇಂದಿನ ಕಿರುತೆರೆಯ ಧಾರಾವಾಹಿಯ ನಿರ್ಮಾಪಕರಿಗೆ ಒಂದು ಕಿವಿಮಾತು. 'ಬುದ್ಧೋಜಿ'ಯನ್ನು ಒಮ್ಮೆ ಓದಿ ನೋಡಿ. ನಮ್ಮ ಸಮಾಜದಲ್ಲಿರುವ ವಿಪುಲವಾದ ವಸ್ತು ವೈವಿಧ್ಯತೆಯನ್ನು ಕಂಡು, ಸಾವಿರ ಎಪಿಸೋಡುಗಳನ್ನು ನಿರ್ಮಿಸುವ ಯೋಚನೆಯ ಹುಳ ನಿಮ್ಮ ತಲೆಯೊಳಗೆ ನುಸುಳದಿರಲಾರದು.

ಬೆನ್ನುಡಿಯಲ್ಲಿ 'ಕಾಲಕಲಕ್ಕೆ ತಕ್ಕಂತೆ ಇಂತಹ ವರದಿಗಳನ್ನು ಜಗ್ಗೋಜಿಯ ವಂಶದವರು ಮುಂದೆಯೂ ಮಾಡುವರೆಂದು ನಂಬಿದ್ದೇನೆ' ಎಂದಿರುವ 'ರಾಶಿ'ಯವರ ನಂಬಿಕೆ ಹುಸಿಯಾಗುತ್ತಿದೆಯೇನೋ ಎನ್ನುವುದಷ್ಟೇ ವಿಷಾದದ ಸಂಗತಿ.

'ಬುದ್ಧೋಜಿ' ಕನ್ನಡದಲ್ಲಿ ಒಂದು ವಿನೂತನ ಪ್ರಯೋಗದ ವಿರಳಾತಿ ವಿರಳ ಪ್ರಕಾರದ ಪುಸ್ತಕ.

ಹಣದ ಉಳಿತಾಯಕ್ಕೆ ಹಲವು ಸೂತ್ರಗಳು

✧ ಕುಮುದಾ ಪುರುಷೋತ್ತಮ್

ಈಚೆಗೆ ನಾನು ಓದಿದ "ಹಣ ಉಳಿತಾಯ ಹೇಗೆ?" ಎಂಬ ಲೇಖನ ನನ್ನನ್ನು ಆಳವಾದ ಚಿಂತನೆಗೀಡು ಮಾಡಿತು. ದೀರ್ಘ ಮನಮಂಥನ, ಚಿಂತನ, ಅಧ್ಯಯನದ ನಂತರ ನಾನು ಹಣ ಉಳಿತಾಯದ ಈ ಸೂತ್ರಗಳನ್ನು ರೂಪಿಸಿದ್ದು. ಇದನ್ನು ತಾವೆಲ್ಲರೂ ಪಾಲಿಸಿದಲ್ಲಿ ಬಹು ಬೇಗನೆ ಕೋಟ್ಯಾಧಿಪತಿಗಳಾಗಲು ಸಾಧ್ಯ. ಇದರ ಮೊದಲ ಹೆಜ್ಜೆ ಆತ್ಮಗೌರವ, ಸ್ವಾಭಿಮಾನ, ಮರ್ಯಾದೆ ಇಂತಹ ಸ್ವಘಾತಕ ಭಾವನೆಗಳನ್ನು ತ್ಯಾಗ ಮಾಡಿಬಿಡುವುದು. ನಂತರ ಈ ಸೂತ್ರಗಳನ್ನು ನಿಮ್ಮ ಜೀವನ ಧರ್ಮವಾಗಿರಿಸಿಕೊಳ್ಳಿ. ಆಗ ನಿಮ್ಮ ಉಳಿತಾಯದ ಗ್ರಾಫಿಗೆ ಸ್ಕೈ ಈಸ್ ದಿ ಲಿಮಿಟ್.

ಇಕೋ ಇಲ್ಲಿವೆ ಈ ಸೂತ್ರಗಳು.

1. ಹಣ ಉಳಿತಾಯಕ್ಕೆ ಮೊದಲು ಹಣ ಗಳಿಕೆ ಇರಬೇಕು. ಇದಕ್ಕೆ ಹಲವಾರು ಮಾರ್ಗಗಳುಂಟು. ಹಲವು ನೇರ, ಮಿಕ್ಕವು ವಕ್ರ. ಮಾರ್ಗ ಯಾವುದಾದರೂ ಹೇಳಿಕೊಳ್ಳಲು ಒಂದು ಉದ್ಯೋಗ ಬೇಕು. ಎಲ್ಲದಕ್ಕಿಂತ ಸರ್ಕಾರಿ ಉದ್ಯೋಗ ಬಿಟ್ಟರಿಲ್ಲ. ಒಮ್ಮೆ ದೊರಕಿಬಿಟ್ಟರೆ ತೀರಿತು. ನಿವೃತ್ತಿ ವರೆಗೂ ನಿವೃತ್ತ ಜೀವನ ನಡೆಸಿ ಸುಖಿಸಬಹುದು. ಅದು ಸಿಗಲು ಹಲವರ ಕೈ ಬೆಚ್ಚಗೆ ಮಾಡಬೇಕಾದರೂ ಚಿಂತಿಸದೆ ನಿಮ್ಮ ಸ್ಥಿರ ಚರಾಸ್ತಿಯನ್ನು ಒತ್ತೆ ಇಟ್ಟಾದರೂ ಮುನ್ನಡೆ ಇಡಿ. ಒಮ್ಮೆ ಉದ್ಯೋಗ ಎಂಬುದೊಂದು ನಿಮ್ಮದಾದರೆ ನಿಮ್ಮ ಕೈ ಸದಾ ಬೆಚ್ಚಗಿರುವುದು. (ಸಂಶಯವಿದ್ದರೆ ವೆಂಕಟಾಚಲರನ್ನು ಕೇಳಿ!) ನೌಕರ ಎಂದೊಡನೆ ನೌಕರಿ ಮಾಡಲೇ ಬೇಕೆಂದೇನಿಲ್ಲ. ಕ್ಯಾಂಟೀನಿನಲ್ಲಿ ಅರ್ಧವೇಳೆ, ಹರಟೆ ಹೊಡೆಯುತ್ತಾ ರಾಜಕೀಯ ಮಾಡುತ್ತಾ ಇನ್ನರ್ಧ ವೇಳೆ ಕಳೆಯಬಹುದು. ಏಕತಾನತೆ ನಿವಾರಿಸಲು ಆಗಾಗ ಮುಷ್ಕರ, ಬಂದ್ ಇತ್ಯಾದಿ ಯೂನಿಯನ್ನಿನ ಮುಖಾಂತರ ಮಾಡುತ್ತಾ ಮಾಧ್ಯಮಗಳಿಗೆ ಹೇಳಿಕೆ ನೀಡುತ್ತಾ ಕಿರುತೆರೆಯಲ್ಲಿ ಮಿಂಚಬಹುದು.

2. ನೀವು ವಾಸಿಸುತ್ತಿರುವುದು ಸ್ವಂತ ಮನೆಯೇ? ಮೊದಲು ಗೌರವಸ್ಥರಿಗೆ ಬಾಡಿಗೆ ಕೊಟ್ಟು ನೀವು ಬಾಡಿಗೆ ಮನೆ ಹಿಡಿಯಿರಿ. ಹೋಗುವ ಮುನ್ನ ಮುಂಗಡವೆಂದು

ಎಷ್ಟು ಕೊಡುತ್ತಿರೋ ಅಷ್ಟೇ ನೀವು ಖರ್ಚು ಮಾಡಬೇಕಾಗಿರುವುದು. ಮುಂದೆಂದೂ ಬಾಡಿಗೆ ಕೊಡಬೇಡಿ. ಮೊದಮೊದಲು ತಾಪತ್ರಯಗಳ ಪಟ್ಟಿ ಮಾಡುತ್ತಾ ಮಾಲಿಕನಲ್ಲಿ ದೀನತೆಯಿಂದಿರಿ. ಸಾಮ, ದಾನ, ಭೇದದ ನಂತರ ದಂಡಕ್ಕೆ ಬಂದಾಗ ಕಠಿಣರಾಗಿ ''ಹೋಗಯ್ಯ ಬಾಡಿಗೆ ಕೊಡೋದಿಲ್ಲ. ಮನೇನೂ ಕಾಲಿ ಮಾಡೊಲ್ಲ. ನಿನ್ನ ಈ ಕೋಳಿಗೂಡಿಗೆ ಬಾಡಿಗೆ ಯಾವೋನು ಕೊಡ್ತಾನೆ? ಇಲ್ಲಿ ದೀಪ ಹಚ್ಕೊಂಡು ಇದ್ದೀವಲ್ಲ ಅಂತ ನೀನೇ ನಮಗೆ ಬಾಡಿಗೆ ಕೊಡ್ಬೇಕು'' ಎಂದು ಜೋರು ಮಾಡುತ್ತಾ ಕಾಲ ತಳ್ಳಿ. ದಾರಿ ಕಾಣದ ಪಾಪದ ಪ್ರಾಣಿ ಕೋರ್ಟಿನಲ್ಲಿ ದಾವಾ ಹಾಕುತ್ತಾನೆ. ಅಲ್ಲಿಗೆ ಅಲೆದು ಅಲೆದು ಅಲೆದು ಸತ್ತು ಸುಣ್ಣವಾಗಿ ಲಾಯರ್ ಎಂಬ ಕಪ್ಪು ಕೋಟಿನ ಬಿಳಿ ಆನೆಗೆ ಮೇವು ಒದಗಿಸಿ ಬಡಕಲಾದಾಗ ನೀವು ಕರುಣೆ ತೋರಿ. ಮುಂಗಡದ ಜೊತೆ ಎರಡು ಲಕ್ಷ ಕೊಡುವುದಾದರೆ ಮನೆ ಖಾಲಿ ಮಾಡುವುದಾಗಿ ಹೇಳಿ. ಹಣ ಕೈಸೇರಿದ ಕೂಡಲೇ ನಿಮ್ಮ ಪೂರ್ವೋತ್ತರ ಕಾಯ್ದಿರಿಸಿಕೊಂಡು ದೂರದ ಬೇರೊಂದು ಬಡಾವಣೆಯಲ್ಲಿ ಬಾಡಿಗೆ ಮನೆ ಹಿಡಿಯಿರಿ. ಹೀಗೆ ಮನೆ ಬದಲಾಯಿಸಿದಾಗಲೆಲ್ಲಾ ಬಾಡಿಗೆ ಇಲ್ಲದೆ ಎರಡೆರಡು ಲಕ್ಷಗಳು ನಿಮ್ಮದಾಗುವುದು.

3. ದೊಡ್ಡಸ್ತಿಕೆ ತೋರಲೆಂದೋ, ಅವರಿವರು ಹೇಳಿದರೆಂದೋ ಫ್ರಿಜ್ಜು, ಮಿಕ್ಸಿ, ಟಿ.ವಿ.ಯಂತಹ ವಸ್ತುಗಳನ್ನು ಮನೆಗೆ ತಂದು ಗಿಂದೀರಿ. ದೊಡ್ಡ ಬಂಡವಾಳದ ಜೊತೆಗೆ ತಿಂಗಳು ತಿಂಗಳೂ ಅವು ನುಂಗುವ ಬಿಲ್ ನಿಮ್ಮ ತಲೆ ನುಣ್ಣಗಾಗಿಸುತ್ತವೆ. ಹಾಗೆಂದೊಡನೆ ಅವುಗಳ ಸವಲತ್ತು ಬೇಡವೆಂದಲ್ಲ. ಇಷ್ಟಕ್ಕೂ ನೆರೆಹೊರೆ ಇರುವುದ್ಯಾತಕ್ಕೆ? ನೀವು ನೆರೆಗೆ ಹೊರೆಯಾಗಲು ತಾನೇ? ಅಕ್ಕ ಪಕ್ಕದವರ ಫ್ರಿಜ್ಜು, ಮಿಕ್ಸಿ ನಿಸ್ಸಂಕೋಚವಾಗಿ ಬಳಸಿಕೊಳ್ಳಿ. ಮಕ್ಕಳ ಕಾಟ ಹೆಚ್ಚಾದಾಗ ಸಹಪಾಠಿಗಳ ಮನೆಯಲ್ಲಿ ಟಿ.ವಿ. ನೋಡಿ ಬರಲು ಪ್ರೋತ್ಸಾಹಿಸಿ. ನಿಮ್ಮ ನೆಚ್ಚಿನ ಧಾರಾವಾಹಿ ಬಂದಾಗ ಬೇರೆಯೇ ನೆಪ ಮಾಡಿ ಬೇರೊಬ್ಬರ ಮನೆಗೆ ಹೋಗಿ ನೋಡಿ ಬನ್ನಿ. ಭಾನುವಾರ ಮಧ್ಯಾನ್ಹದ ಚಲನಚಿತ್ರವನ್ನೂ ಮನೆ ಮಂದಿಯೆಲ್ಲಾ ಪಕ್ಕದ ಮನೆಯಲ್ಲಿ ನೋಡಿ ಬನ್ನಿ. ಅವರು ಮುಜುಗರಿಸಿದರೆ ಕೇರ್ ಮಾಡಬೇಡಿ. ಟಿ.ವಿ.ಯಲ್ಲಿ ಚಿತ್ರವನ್ನು ಇಬ್ಬರು ನೋಡಿದರೂ, ಹತ್ತು ಮಂದಿ ನೋಡಿದರೂ ವಿದ್ಯುತ್ ವೆಚ್ಚ ಒಂದೇ ಎಂದು ಹೇಳಿ ನಿಮ್ಮ ಭಂಡತನ ತೋರಿಸಿ ಹಾಗೆಯೇ ಅವರ ದಿನಪತ್ರಿಕೆ, ವಾರಪತ್ರಿಕೆ ಎರವಲು ತಂದು ಓದಿ ನಿಮ್ಮ ಜ್ಞಾನ ಭಂಡಾರ ವೃದ್ಧಿಸಿಕೊಳ್ಳಿ.

4. ಹಬ್ಬ ಹರಿದಿನ ಮಣ್ಣು ಮಸೀಂತ ಹೆಚ್ಚಿನ ಖರ್ಚಿಗೆ ಹೋಗಬೇಡಿ. ಹಬ್ಬದ ನಸುಕಿನಲ್ಲೇ ಮನೆಗೆ ಬೀಗ ಜಡಿದು ನೆಂಟರ ಮನೆಗೆ ದಾಳಿ ಇಡಿ. ಹೋಗಿ ಬಂದು ಮಾಡ್ದಿದ್ರೆ ನೆಂಟಸ್ತನ ಬಿಟ್ಟು ಹೋಗುತ್ತೆ, ಆದಕ್ಕೇ ಬಂದೆವು ಎಂದು ವಿವರಿಸಿ. ಊಟ ಉಪಚಾರದ ಸತ್ಕಾರ ಪಡೆದು ಹಿಂದಿರುಗುವಾಗ ಮರೆಯದೆ ಅವರನ್ನೂ ನಿಮ್ಮಲ್ಲಿಗೆ

ಆಹ್ವಾನಿಸಿ. ಆಹ್ವಾನದ ಸಂಗಡ ಈ ಬಾಲಂಗೋಚಿ ಇರಲಿ. ''ನಾನೇನೋ ನಿಮ್ಮತ್ರ ಬನ್ನಿ ಅಂದ್ಬಿಟ್ಟೆ, ಆದ್ರೆ ನಮ್ಮ ಮನೆ ಹುಡುಕೋದೇ ಶಾನೆ ತಾಪತ್ರಯ ಕಣ್ರೀ. ಸಂದುಗೊಂದಿ. ರಸ್ತೆಯೇ ಇಲ್ಲ. ಎರಡು ಬಸ್ಸು ಬದಲಾಯಿಸಿ ಸ್ಟಾಪಿನಿಂದ ಒಂದು ಮೈಲಿ ನಡೀಬೇಕು. ಎರಡೂ ಕಡೆ ಗೊಬ್ಬರದ ಗುಂಡಿ, ದುರ್ನಾತ. ಸುತ್ತ ನಾಯಿ, ಹಸು ಕತ್ತೆ ಹಂದಿಗಳು, ಅಲ್ಲಿ ಬರೀ ಗೂಂಡಾಗಳದ್ದೇ ರಾಜ್ಯ. ಬಿಹಾರ, ಉತ್ತರ ಪ್ರದೇಶದ ಲೀಡರ್‌ಗಳು ಚುನಾವಣೆ ಬಂದಾಗ ಗಲಭೆ ಎಬ್ಬಿಸಬೇಕಾದ್ರೆ ಇಲ್ಲಿಂದ ಗೂಂಡಾಗಳ್ಗೆ ಕಾಂಟ್ರಾಕ್ಟ್ ಕೊಟ್ಟು ಕರ್ಕೊಂಡ್ ಹೋಗ್ತಾರೆ. ನಿಮ್ಮನ್ನು ಬರ್ಬೇಡಿ ಅಂತ ಹೇಳೊಲ್ಲ. ಆದ್ರೆ ಅಂಗೈನಲ್ಲಿ ಜೀವ ಹಿಡ್ಕೊಂಡು ಬನ್ನಿ'' ಎನ್ನಿ. ಇದಾದ ಮೇಲೆ ಯಾವೋನಾದ್ರೂ ನಿಮ್ಮ ಮನೆಗೆ ಕಾಲಿಟ್ರೆ ಭೂಮಿತಾಯಾಣೆ.

5. ಪರಿಚಿತರಿಗೆಲ್ಲಾ ಪಕ್ಕದ ಮನೆಯ ಫೋನ್ ನಂಬರನ್ನು ನಿಮ್ಮದೇ ಎನ್ನುವಷ್ಟು ಸಲೀಸಾಗಿ ಕೊಡಿ, ಯಾರಾದರೂ ಸಂಪರ್ಕಿಸಿದರೆ ಅರ್ಧಗಂಟೆಯಷ್ಟಾದರೂ ಹರಟೆ ಹೊಡೆದು ಸಂತೋಷ ಪಡಿ. ನೀವು ಮಾತ್ರ ಯಾರಿಗೂ ಫೋನ್ ಮಾಡಬೇಡಿ. ಮದುವೆ, ಮುಂಜಿ ಇತ್ಯಾದಿಗಳಿಗೆ ಸಕುಟುಂಬವಾಗಿ ಹೋಗಿ ಮೂಗಿನ ತನಕ ಮೂರು ಬಾರಿ ಉಂಡು ಬನ್ನಿ. ಉಡುಗೊರೆ ನೀಡುವ ಸಂದರ್ಭ ಬಂದಾಗ ಕಳ್ಳ ನೆವ ಹೇಳಿ ಜಾಗ ಖಾಲಿ ಮಾಡಿ. ಸಾಧ್ಯವಾಗದಿದ್ದಲ್ಲಿ ಉಡುಗೊರೆ ನೀಡುವ ಅಥವಾ ಸ್ವೀಕರಿಸುವುದನ್ನು ನೀವು ತಾತ್ವಿಕವಾಗಿ ವಿರೋಧಿಸುವುದಾಗಿ ಹೇಳಿ ನೀವೆಂತಹ ಚಿಂತಕರು ಎಂಬುದನ್ನು ಸಾಬೀತುಪಡಿಸಿ.


6. ಆಫೀಸಿಗೆ ಹೋಗಿ ಬರಲು ಪರಿಚಿತರು ಹೊರಡುವುದನ್ನೇ ಕಾಯುತ್ತಿದ್ದು, ಅಕಸ್ಮಾತ್ ಕಂಡಂತೆ ನಟಿಸಿ ಅವರ ಸಂಗಡ ಅವರ ವಾಹನದಲ್ಲಿ ಹೊರಡಿ. ಹಿಂತಿರುಗುವಾಗ ಸಹೋದ್ಯೋಗಿಗಳು ಇದ್ದೇ ಇರುತ್ತಾರಲ್ಲ. ಲಿಫ್ಟ್ ಕೇಳುವುದರಲ್ಲಿ ಪರಿಚಿತರು, ಅಪರಿಚಿತರು ಎನ್ನುವ ತಾರತಮ್ಯ ಮಾಡಬೇಡಿ. ದಾಕ್ಷೀಕವಾಗಿ ಎಲ್ಲರ ವಾಹನ ಬಳಸಿ ಎಂದಾದರೊಮ್ಮೆ ಯಾವ ಬಕರಾನೂ ಸಿಗದೆ ಬಸ್‌ನಲ್ಲೇ ಹೋಗಬೇಕಾದಾಗ ಟಿಕೆಟ್ ಬೆಲೆಯ ಅರ್ಧದಷ್ಟನ್ನು ನಿರ್ವಾಹಕನ ಜೇಬಿಗೆ ತುರುಕಿ ''ಟಿಕೆಟ್ ಬೇಡಣ್ಣಾ ನೀನೇ ಮಡಿಕ್ಕೊ'' ಎಂದು ಅವನ ವಿಶ್ವಾಸ ಗಳಿಸಿ. ಮತ್ತೊಮ್ಮೆ ರಸ್ತೆಯಲ್ಲಿ ನಿಮ್ಮನ್ನು ಕಂಡಾಗ ಹೋಲ್ಡಾನ್ ಹೇಳಿ 'ಹತ್ರಣ್ಣಾ' ಎಂದು ತಾನೇ ಆಹ್ವಾನಿಸುತ್ತಾನೆ.

7. ಇನ್ನು ಉಡುಗೆ ಕೊಡುಗೆಗಾಗಿ ಹಣ ವ್ಯಯ ಮಾಡೀರಿ ಜೋಕೆ. ಭಾರತ ವರ್ಷವೆಂದು ಈ ಕರ್ಮ ಭೂಮಿಯಲ್ಲಿ ವರ್ಷದಲ್ಲಿ ಎರಡು ಮೂರು ಬಾರಿಯಾದರೂ ಪ್ರಕೃತಿ ಕೆರಳಿ ಭೂಕಂಪ, ನೆರೆ, ಬರ ಸಾಮಾನ್ಯ. ಆಗ ನಿಮಗೆ ಸುವರ್ಣಾವಕಾಶ. ದೂರದ ಬಡಾವಣೆಗಳಿಗೆ ತೆರಳಿ ಪ್ರಸಿದ್ಧ ಸಂಸ್ಥೆಯ ಸ್ವಯಂ ಸೇವಕನೆಂದು ಪರಿಚಯಿಸಿಕೊಂಡು ಸಂತ್ರಸ್ತರಿಗಾಗಿ ಉಡುಗೆ ತೊಡಿಗೆ ಸಂಗ್ರಹಣೆಗಾಗಿ ಬಂದವನೆಂದು ಹೇಳಿಕೊಳ್ಳಿ. ಅಲ್ಲೊಂದಿಲ್ಲೊಂದು ಸಂಶಯ

ಪಿಶಾಚಿಗಳಿದ್ದರೂ ಹೆಚ್ಚಿನವರು ನೀವು ತೋಡಿದ ಹಳ್ಳಕ್ಕೆ ಕಣ್ತೆರೆದುಕೊಂಡೇ ಬೀಳುವರು. ಒಂದು ಬಾರಿ ಮುಖ ತೋರಿಸಿದ ಬಡಾವಣೆಗೆ ಮತ್ತೊಮ್ಮೆ ಮುಖ ತೋರಿಸಿಗೀರಿಸೀರಿ. ಕೈಕಾಲು ಮುರಿದು ಒಲೆಗೆ ತುರಕಿ ಕಾಫಿಕಾಸಿ ಕುಡಿದುಬಿಟ್ಟಾರು ಜೋಕೆ!

8. 'ಸಾಲವನು ಕೊಂಬಾಗ ಹಾಲೋಗರುಂಡಂತೆ....' ಎಂಬುದನ್ನು ಎಲ್ಲಾದರೂ ನಂಬಿಗಿಂಬಿ ಬಿಟ್ಟೀರಿ. ಸರ್ವಜ್ಞ ಕೋಟ್ಯಾಧಿಪತಿಯಾಗಲಿಲ್ಲ ಎನ್ನುವುದನ್ನು ನೆನಪಿಡಿ. ಇವೆಲ್ಲಾ ವಚನಕಾರರಿಗೇ ಸರಿ. ನಾವೂ ಪಾಲಿಸ ಹೋದರೆ ತಾಳ ತಂಬೂರಿಯೇ ಗತಿ. ಅವಕಾಶ ಸಿಕ್ಕಾಗಲೆಲ್ಲಾ ಸಿಕ್ಕವರಲ್ಲಿ ಸಾಲ ತಂದು ಬಡ ಮಂದಿಗೆ ಬಡ್ಡಿಗೆ ಸಾಲ ನೀಡಿ. ನೀವು ಮಾತ್ರ ಸಾಲ ಕೊಟ್ಟವರ ಕಣ್ತಪ್ಪಿಸಿ ಓಡಿಯಾಡಿ. ಆಕಸ್ಮಾತ್ ಸಿಕ್ಕಿ ಬಿದ್ದರೆ ಕೆರಳಿದ ನಾಗರದಂತೆ ಮೇಲೆರಗಿ. ''ಹೌದು ಕಣ್ರೀ. ಸಾಲ ತಗೊಂಡೆ. ತಿರುಗಿ ಕೊಡೋಕ್ಕೆ ನನ್ನ ಹತ್ರ ಒಂದು ದಂಬ್ಡಿ ಇಲ್ಲ. ಬೇಕಿದ್ರೆ ಮನೆಗೆ ಬಂದು ನೋಡಿ. ಬೆಲೆ ಬಾಳೋ ವಸ್ತು ಇದ್ರೆ ಧಾರಾಳವಾಗಿ ಜೊತೆಗೊಯ್ರಿ'' ಎಂದು ಹೇಳಿ. ನಾನು ಮೊದಲೆ ಜಾಣತನದಿಂದ ಟಿ.ವಿ. ಫ್ರಿಜ್ಜು ಇತ್ಯಾದಿ ನಿಮಗೆ ಬೇಡ ಎಂದಿದ್ದೆ. ಏಕೆಂದು ಈಗ ಅರ್ಥವಾಗಿದೆಯಷ್ಟೆ?

ಮೇಲಿನ ಎಂಟೂ ಸೂತ್ರಗಳನ್ನು ಚಾಚೂ ತಪ್ಪದೆ ಪಾಲಿಸಿ ಕೋಟ್ಯಾಧೀಶ್ವರರಾಗಿ. ಹಾಗಾದಾಗ ನನಗೆ ಹೇಳಲು ಮರೆಯಬೇಡಿ. ಹಾಗೇ ಕಿಂಚಿತ್ ಗುರುದಕ್ಷಿಣೆ ನೀಡಲೂ ಸಹ.



ತುಂತುರು

✧ ದಂನಿಆ

- ಭಾರತಮಾತೆ ಈಗ ವಿಶ್ವಸುಂದರಿ ಆಗುತ್ತಿದ್ದಾಳೆ.
- ಭಾರತೀಯರು ಸ್ವಾಭಾವಿಕವಾಗಿ ವಾದಪ್ರಿಯರು. ಆದರೆ ವಾದದಲ್ಲಿ ತಪ್ಪು ಎತ್ತಿ ತೋರಿಸುವದನ್ನು ಇಷ್ಟಪಡರು.
- ಮರೆಯುವ ಕಲೆಯನ್ನೇ ನಾವು ಮರೆತಿರುವದರಿಂದ ನಾವು ಗತಕಾಲವನ್ನು ಬಾಚಿ ಗುಡ್ಡೆ ಹಾಕೊಳ್ಳುತ್ತಲೇ ಇರುತ್ತೇವೆ.
- ಟೆಲೆಗ್ರಾಂ ಸಿರಿಯಸ್.....ಸೆಂಡ್ ಇಮ್ಮೀಡಿಯಟ್ಲಿ (ತಾರು ವಿಭಾಗವನ್ನು ಈಗ ಯಾರೂ ಬಳಸುತ್ತಿಲ್ಲ ಎಂದು ಕೇಳಿದಾಗ)
- ತೆರಿಗೆ ಅನೀತಿಯದ್ದಲ್ಲ. ಕಟ್ಟದೇ ಇರುವುದು (ಇಲಾಖೆಯ ಜಾಹೀರಾತು)
- ಗಂಡಸರೇಕೆ ವಯಸ್ಸಿನ ಬಗ್ಗೆ ಹೆಂಗಸರಷ್ಟು ಸುಳ್ಳು ಹೇಳುವುದಿಲ್ಲ. ಉತ್ತರ ಸಿಂಪಲ್ಲು. ಅವರ ಕೆಲಸಕ್ಕೆ ರಿಟೈರ್‌ಮೆಂಟ್ ಇದೆ. ಹೆಂಗಸರಿಗೆ ನಿವೃತ್ತಿ ಎಲ್ಲಿದೆ?
- ರಾತ್ರಿ 11.30ರ ನಂತರ ಪೊಲೀಸಪ್ಪ ವಿಷಲ್ ಊದಿದರೆ ಅದು ಲೈವ್ ಮ್ಯೂಸಿಕ್ ಎಂದು ಪರಿಗಣಿಸಬಹುದೆ?
- ಈ ಯೋಗ ಕ್ಲಾಸ್ ತುಂಬಾ ಸ್ಟ್ರೆಸ್‌ಫುಲ್ ಯಾರ್.....
- ನಾನು ಹಣಕ್ಕಾಗಿ ಮಾತ್ರ ದುಡಿಯುವೆ. ಸ್ವಾಮಿನಿಷ್ಠೆ ಬೇಕಿದ್ದರೆ ನಾಯಿಯನ್ನು ನೇಮಿಸಿಕೊಳ್ಳಿ.
- ಹಬ್ಬ ಅಥವಾ ಇತರ ಕಾರಣಗಳಿಂದಾಗಿ ನ್ಯೂಸ್ ಪೇಪರ್ ಬಾರದ ಕೆಲವು ದಿನಗಳು ಅದೃಷ್ಟದ ದಿನಗಳು. ಈ ದಿನಗಳನ್ನು ಪತ್ರಿಕೆಯಿಂದ ಸ್ವಾತಂತ್ರ್ಯ ದಿನಗಳು ಎಂದು ಘೋಷಿಸಬೇಕು.
- ಮೊಬೈಲ್ ಫೋನ್‌ನನ್ನು ಈ ದಶಕದ ಸಿಗರೇಟ್ ಎಂದು ಕರೆಯಬಹುದು. ಅದು ಅಷ್ಟೇ ಚಟ ಬರಿಸುವಂತಹದು ಮತ್ತು ಇತರರಿಗೆ ಕಿರಿಕಿರಿ ಉಂಟು ಮಾಡುವಂತಹದು....ಮೊಬೈಲ್ ಫೋನ್ ನಿಷಿದ್ಧ ಅಸಾಧ್ಯವಾಗಿರುವದರಿಂದ ಧೂಮಪಾನಿಗಳಿಗೆ ಮಾಡಿರುವಂತೆ ಇವರ ಮೇಲೂ ನಿಷೇಧ ಹೇರಬಹುದು: ಮೊಬೈಲ್‌ನಲ್ಲಿ ಮಾತನಾಡಬೇಕೆ? ಸಂಭಾಷಣಾ ಕೊಠಡಿಗೆ ಹೋಗಿ.
- ಈಗಿನ ಕನ್ನಡ ಚಿತ್ರಗಳು ಚಾಕೂ ಚೂರಿ ನೆತ್ತರಿಗೇ ಮಹತ್ವ ಕೊಡುವುದರಿಂದ ನಿಮ್ಮ ಮೆಚ್ಚಿನ ಚಿತ್ರಗೀತೆಗಳನ್ನು 'ನಿಮ್ಮ ಮಚ್ಚಿನಚಿತ್ರಗೀತೆ'ಗಳು ಎಂದು ಕರೆಯಬಹುದು.

'ಕಾಲ' - ರಾಶಿಯವರ ಮಹತ್ವದ ಕೃತಿಯ ಪರಿಚಯ

✧ ಸಂಪಟೂರು ವಿಶ್ವನಾಥ್

ರಾಶಿ ಕಾವ್ಯನಾಮದ ಡಾ|| ಎಂ. ಶಿವರಾಂ, ಹಾಸ್ಯ ಲೇಖಕರಾಗಿ ಕನ್ನಡ ನಾಡಿನ ಉದ್ದಗಲಕ್ಕೆ ಪ್ರಖ್ಯಾತಿ ಪಡೆದರೂ, ಸಾರಸ್ವತ ಲೋಕದಲ್ಲಿ ಮೇಲ್ಮಟ್ಟದ ಚಿಂತಕರು ಎಂದೇ ಪರಿಚಿತರಾಗಿದ್ದರು. ಇವರು ರಚಿಸಿದ ಮೌಲಿಕ ಗ್ರಂಥಗಳ ಪೈಕಿ 'ಕಾಲ' ವೈಜ್ಞಾನಿಕ ವಿಚಾರ ಶ್ರೇಣಿಯ ಫಲ.

'ಕಾಲ'ದಲ್ಲಿ ವಿಜ್ಞಾನ ಶಾಸ್ತ್ರಗಳ ಸಮನ್ವಯ, ವೈದ್ಯಕೀಯ-ಧ್ಯಾನ, ಪ್ರಾರ್ಥನೆಗಳ ಏಕಸ್ವಭಾವ, ವಿಜ್ಞಾನ ಸಂಶೋಧನೆಗಿಂತ ಶಾಸ್ತ್ರಾನ್ವೇಷಣೆಯ ದೃಷ್ಟಿಯಲ್ಲಿ ಕಂಡುಬರುವ ನೈಜ ಮತ್ತು ಖಚಿತ ಸಮೀಕ್ಷೆ ಕಂಡುಬರುತ್ತದೆ. ಆದ್ದರಿಂದ ಕಾಲವನ್ನು ಕುರಿತು, ಡಾ|| ಶಿವರಾಂ ರವರು ಒದಗಿಸಿಕೊಟ್ಟಿರುವ ಮಾಹಿತಿಯನ್ನು ಸಂಗ್ರಹಿಸಿಕೊಟ್ಟಿದ್ದೇನೆ. ನೀವು ಓದಲಿರುವ, ಮನನ ಯೋಗ್ಯ, ಸಾರವತ್ತಾದ ವಸ್ತುನಿಷ್ಟ ವಿಷಯಗಳು, ಸಮಯದ ಬಗ್ಗೆ ಕಣ್ತೆರೆಸುವುದರಲ್ಲಿ ಸಂದೇಹವೇ ಇಲ್ಲ.

1. ಎರಡು ಘಟನೆಗಳ ಅಂತರವೇ ಕಾಲ. ಲಕ್ಷಾಂತರ ವರ್ಷಗಳಿಂದ ತಪ್ಪದೆ ನಡೆಯುವ ಘಟನೆಗಳ ಅಂತರವನ್ನು 24 ತಾಸುಗಳು ಅಥವಾ ಗಂಟೆಗಳು ಎಂದು ವಿಭಾಗಿಸಿದರು. ಒಂದೊಂದು ತಾಸನ್ನು 60 ನಿಮಿಷಗಳು ಎಂದು ಮರು ವಿಭಾಗ ಮಾಡಿದರು. ಒಂದೊಂದು ನಿಮಿಷವನ್ನೂ 60 ಸೆಕೆಂಡುಗಳು ಎಂದು ಇನ್ನೂ ಸೂಕ್ಷ್ಮವಾದ ವಿಭಾಗವನ್ನು ಮಾಡಿದರು.
2. ಇಂದು, ವಿಜ್ಞಾನದಲ್ಲಿ ಸೆಕೆಂಡಿನ ನೂರನೇ ಒಂದು ಭಾಗ, ಹತ್ತು ಸಾವಿರದಲ್ಲಿ ಒಂದು ಭಾಗ, ಇಂತಹ ಸೂಕ್ಷ್ಮವಾದ ಅಳತೆಗಳನ್ನು ಮಾಡುವ 'ಗಡಿಯಾರ'ಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಲಕ್ಷಾಂತರ ವರ್ಷಗಳನ್ನು ಅಳೆಯುವ ಅಗತ್ಯವೂ ವಿಜ್ಞಾನಿಗಳಿಗೆ ಇದೆ. ಆದುದರಿಂದಲೇ Light year (ಜ್ಯೋತಿರ್ವರ್ಷ) ಇತ್ಯಾದಿ ಅಳತೆಗೋಲುಗಳನ್ನು ನಿರ್ಮಿಸಿಕೊಂಡಿದ್ದಾರೆ.
3. ಕಾಲದ ಅಳತೆಗೆ ನಮ್ಮ ಪೂರ್ವಜರು ಸೃಷ್ಟಿಸಿಕೊಂಡಿದ್ದ ಅಳತೆಗಳಲ್ಲಿ ಎರಡನ್ನು ನಾವು ಗಮನಿಸಬೇಕು. ಅತಿ ಪುಟ್ಟ ಕಾಲದ ಅಳತೆ 'ತ್ರುಟಿ' ಸೆಕೆಂಡಿನ 33,750ರ ಭಾಗಗಳಲ್ಲಿ ಒಂದನ್ನ 'ತ್ರುಟಿ' ಎಂದಿದ್ದರು. ಬಹಳ ದೀರ್ಘವಾದ ಕಾಲದ ಅಳತೆಯಲ್ಲಿ 'ಕಲ್ಪ'

ಎಂಬುದು ಒಂದು 43 ಲಕ್ಷ 20 ಸಾವಿರ ವರ್ಷಗಳು ಒಂದು 'ಕಲ್ಪ'.

ದೇಹ ಮತ್ತು ಕಾಲ. ನಮ್ಮ ದೇಹದಲ್ಲಿ ಹಲವಾರು ಅಂಗಗಳಿವೆ. ಒಂದೊಂದಕ್ಕೂ ಒಂದೊಂದು ಕಾಲಗತಿ ಇದೆ. ಹೃದಯವು 72 ಬಾರಿ ಮಿಡಿಯುತ್ತದೆ. ಇದರ ಪರೀಕ್ಷೆಯೇ ನಾಡಿ ಪರೀಕ್ಷೆ. ಉಸಿರಾಡುವ ಗತಿಯು ನಿಮಿಷಕ್ಕೆ 18. ನಾಡಿ ಬಡಿತಕ್ಕೂ ಉಸಿರಾಡುವ ಗತಿಗೂ ಅತಿ ನಿಕಟ ಸಂಬಂಧವಿದೆ.

ಹೊಟ್ಟೆಯೂ ಹೃದಯದಂತೆ ಮಾಂಸಖಂಡದ ತುತ್ತಿನ ಚೀಲ, ಸಾಮಾನ್ಯವಾಗಿ ತುತ್ತಿನ ಚೀಲವು ನಾಲ್ಕು ತರಹ ತಾಳಗಳನ್ನು ಹಾಕುತ್ತದೆ. ಇವುಗಳಲ್ಲಿ ಒಂದು ನಾಡಿಯ ಮಿಡಿತಕ್ಕೆ ಅನ್ವಯಿಸುತ್ತದೆ; ಇನ್ನೊಂದು ಉಸಿರಾಟದ ಗತಿಗೆ ಅನ್ವಯಿಸುತ್ತದೆ. ಮೂರನೆಯದು 20 ಸೆಕೆಂಡುಗಳಿಗೊಮ್ಮೆ, ನಾಲ್ಕನೆಯದು 30 ಸೆಕೆಂಡುಗಳಿಗೊಮ್ಮೆ.

28 ದಿನಗಳಿಗೊಮ್ಮೆ ಸ್ತ್ರೀಯರು ಬಹಿಷ್ಠೆಯಾಗುತ್ತಾರೆ. ಗರ್ಭಾಂಗಗಳ ಪ್ರಕೃತಿ ಸಹಜವಾದ ತಾಳವು 28 ದಿನಗಳಿಗೊಮ್ಮೆ ಎನ್ನಬಹುದು.

ಮೆದುಳಿನಲ್ಲಿ ಕೂಡ, ಇದೇ ರೀತಿ ಒಂದೊಂದು ಕಡೆ ಒಂದೊಂದು ತಾಳ ಹಾಕುತ್ತಿರುವುದನ್ನು ವಿವರಿಸಿದ್ದಾರೆ, The Brain clocks ಎಂಬ ಲೇಖನದಲ್ಲಿ.

ಹೃದಯದ ಮಿಡಿತದ ವಿವರಗಳು:

ತಾಯಗರ್ಭದಲ್ಲಿರುವ ಮಗುವಿನ ಹೃದಯವು ನಿಮಿಷಕ್ಕೆ 140-150 ಬಾರಿ

ಆಗತಾನೇ ಹುಟ್ಟಿದ ಮಗುವಿನ ಹೃದಯವು ನಿಮಿಷಕ್ಕೆ 130-140 ಬಾರಿ

ಒಂದು ವರ್ಷದ ಮಗುವಿನ ಹೃದಯವು ನಿಮಿಷಕ್ಕೆ 115-130 ಬಾರಿ

ಎರಡು ವರ್ಷದ ಮಗುವಿನ ಹೃದಯವು ನಿಮಿಷಕ್ಕೆ 100-115 ಬಾರಿ

ಮೂರು ವರ್ಷ ತುಂಬಿದ ಮಗುವಿನ ಹೃದಯವು ನಿಮಿಷಕ್ಕೆ 95-105 ಬಾರಿ

7 ರಿಂದ 14 ವರ್ಷದ ಅಂತರದಲ್ಲಿ ಬಾಲಕ ಬಾಲಕಿಯರ ಹೃದಯವು 80-90 ಬಾರಿ

14 ರಿಂದ 21 ವರ್ಷದ ವರೆಗೆ ಹೃದಯವು ಪ್ರತಿ ನಿಮಿಷಕ್ಕೆ 75-85 ಬಾರಿ ಮಿಡಿಯುತ್ತದೆ.

ಅನಂತರ 70 ರಿಂದ 80ರ ತನಕ ಹೃದಯದ ಬಡಿತವು ಸ್ಥಿರವಾಗಿರುತ್ತದೆ.

ಹೃದಯದಲ್ಲಿ ನಡೆಯುವ ಎರಡು ಘಟನೆಗಳ ಅಂತರವೇ ಕಾಲ. ಗಡಿಯಾರದ ಕಾಲದ ದೃಷ್ಟಿಯಿಂದ ನೋಡಿದರೆ, ಶೈಶವ ಹೃದಯವು ಅತಿ ವೇಗವಾಗಿ ನಡೆಯುತ್ತಿದೆ. ಅಂದರೆ 'ಕಾಲವೂ' ಬಲು ರಭಸದಿಂದ ಸಾಗುತ್ತಿದೆ.

ಸಮಾಧಿ ಸ್ಥಿತಿಯಲ್ಲಿರುವ ಯೋಗಿಗೆ 'ಕಾಲ'ವು ಅತಿ ಮಂದವಾಗಿ ಪ್ರವಹಿಸುತ್ತದೆ ಎನ್ನಬಹುದು. ಛಳಿ ಪ್ರದೇಶದ ಹಿಮಕರಡಿಗಳೂ, ಮುಳ್ಳು ಹಂದಿಗಳೂ, ಕೆಲವು ತೆರನ ಬಾವುಲಿಗಳೂ 'ಶಿಶಿರ ನಿದ್ರೆ' ಅಥವಾ Hibernationನ್ನು ಅನುಸರಿಸಿ 'ಕಾಲ'ದ ಗತಿಯನ್ನು ನಿಧಾನಿಸುತ್ತದೆ.

ಮನುಷ್ಯರಿಗೆ ತಗಲುವ ಕೆಲವು ಬೇನೆಗಳೂ 'ಕಾಲ'ದ ಗತಿಯನ್ನು ನಿಧಾನಿಸುತ್ತವೆ,

ಉದಾಹರಣೆಗೆ ಥೈರಾಕ್ಸಿನ್ ಹಾರ್ಮೋನಿನ ಕಡಿಮೆ ಸ್ರಾವದಿಂದ ಉಂಟಾಗುವ ಹೈಪೊಥೈರಾಯಿಡಿಸಂ ಬೇನೆ. ಈ ರೋಗಿಗಳಲ್ಲಿ ನಾಡಿಯ ಮಿಡಿತ 40 ಅಥವಾ 50 ರಷ್ಟಿರುತ್ತದೆ. ಇಂತಹವರಲ್ಲಿಯೂ 'ಕಾಲ'ವು ನಿಧಾನವಾಗಿ ನಡೆಯುತ್ತದೆ ಎನ್ನಬಹುದು.

ಜ್ವರವು ಯಾವುದೇ ಕಾರಣಕ್ಕೆ (ವೈರಸ್ಸು, ಬ್ಯಾಕ್ಟೀರಿಯ ಇತ್ಯಾದಿ) ಉಂಟಾದರೂ ನಾಡಿಯ ಬಡಿತ ಹೆಚ್ಚುತ್ತದೆ, ಜ್ವರವು ಏರಿದಾಗ, ಇದರಿಂದ ನಾಡಿಯು ಬಲು ವೇಗವಾದಾಗ, 'ಕಾಲ'ದ ಗತಿಯೂ ಅವಸರಿಸಿದಂತೆ. ನಾಡಿ ಬಡಿತವು ವೇಗವಾದಾಗ, 'ಕಾಲ'ವೂ ಬೇಗ ಬೇಗ ಹರಿದಂತೆಯೇ ಸರಿ.

★ ದೇಹದ ದೃಷ್ಟಿಯಲ್ಲಿ ಕಾಲವನ್ನು ಹಿಂದಿರುಗಿಸುವುದು ಸಾಧ್ಯವಿಲ್ಲ, ಈಗಿನ ವೈಜ್ಞಾನಿಕ ಹಂತದಲ್ಲಿ.

5. ಮನಸ್ಸು ಮತ್ತು ಕಾಲ:

ದೇಹದ ಕಾಲವು ಸುಹೃದಯ ಸ್ನೇಹಿತನಿದ್ದಂತೆ. ತನ್ನ ಪಾಡನ್ನು ತಾನು ನೋಡಿಕೊಂಡರೂ ಅಗತ್ಯ ಬಿದ್ದಾಗ ನಮ್ಮ ನೆರವಿಗೆ ಬಂದು ಸಹಾಯ ಮಾಡುತ್ತದೆ; ಕಷ್ಟದಲ್ಲಿ ಭಾಗಿಯಾಗುತ್ತದೆ, ಕಷ್ಟವನ್ನು ಕಡಿಮೆ ಮಾಡುತ್ತದೆ, ಸುಖದಲ್ಲಿ ಕೂಡ ಭಾಗಿಯಾಗಿ, ಸುಖವನ್ನು ಇಮ್ಮಡಿಗೊಳಿಸುತ್ತದೆ. ದೇಹದ ಕಾಲ ಮತ್ತು ನೆಮ್ಮದಿಯು ನಿಕಟ ಸ್ನೇಹವನ್ನು ಪಡೆದಿವೆ.

ಮನಸ್ಸಿನ ಕಾಲವಾದರೋ ಅಂತಃಪುರವಿದ್ದಂತೆ. ಅಲ್ಲಿ ಕಾಲವು ನಮ್ಮ ಭಾವ ರಾಗಗಳಿಗೆ ಅನ್ವಯವಾಗುತ್ತದೆ. ಸುಖದ ಅನುಭವವಾಗುತ್ತಿದ್ದರೆ ಕಾಲವು ಹಗೂರಾಗಿ ತ್ವರಿತದಿಂದ ಹರಿದಂತೆ ಭಾಸವಾಗುತ್ತದೆ. ದುಃಖದ ಅಥವಾ ಬೇಸರದ ಅನುಭವವಾಗುತ್ತಿದ್ದರೆ ಕಾಲವು ಭಾರವಾಗಿ, ಅತಿ ನಿಧಾನವಾಗಿ ನಡೆದಂತೆ ತೋರುತ್ತದೆ. ಮನಸ್ಸಿನ ಕಾಲಕ್ಕೂ, ದೇಹ ಮತ್ತು ಪಂಚಾಂಗದ ಕಾಲಕ್ಕೂ, ನಿಕಟವಾದ ಸಂಬಂಧವೇ ಇದ್ದಂತಿಲ್ಲ.

ನಮ್ಮ ಹಿತವನ್ನು ಬಯಸುವವರು ಎಂದೆನಿಸಿಕೊಂಡವರು, ಅನಿರೀಕ್ಷಿತವಾಗಿ ಅವಮಾನವನ್ನು ಮಾಡಿದರೆ, ಅನಂತರ ಕಾಲವು ಬಲು ನಿಧಾನವಾಗಿ ಹರಿದಂತೆ ಭಾಸವಾಗುತ್ತದೆ. ಎರಡು ಮೂರು ನಿಮಿಷಗಳಷ್ಟು ಹಿಂದೆ ತಾನೇ ಅವಮಾನವನ್ನು ಅನುಭವಿಸಿದಂತಿರುತ್ತದೆ.

ಉಗ್ರ ಹಲ್ಲುನೋವಿನಿಂದ ನರಳುತ್ತಿರುವವನಿಗೆ, ಒಂದು ಘಂಟೆ ಒಂದು ದಿನದಂತೆ ಅನ್ನಿಸುತ್ತದೆ. ಕಾಲವು ಅತಿ ನಿಧಾನವಾಗಿ ಹರಿದಂತೆ ಅವನಿಗೆ ಭಾಸವಾಗುತ್ತದೆ. ಅಂತೆಯೇ ಹೊಟ್ಟೆಯು ತುಂಬಾ ಹಸಿದಾಗ ಅಥವಾ ಬಾಯಾರಿಕೆಯು ಅತಿಯಾದಾಗ, ಮನೋಕಾಲವು ತುಂಬಾ ನಿಧಾನವಾದಂತೆ ಭಾಸವಾಗುತ್ತದೆ. ಯಾವುದಾದರೂ ಒಂದು ಕೆಲಸವನ್ನು ಮಾಡಬೇಕಾದಾಗ, ಹಾಗೂ ನಿಖರವಾದ ವೇಳೆಯಲ್ಲಿ ಮುಗಿಸಬೇಕಾದಾಗ ತುಸು ಆತಂಕವು ಮನಸ್ಸನ್ನು ಮುತ್ತುವುದು ಸ್ವಾಭಾವಿಕ, ಸ್ವಲ್ಪ ಆತಂಕವಿದ್ದರೆ ಮಾಡುವ

ಕೆಲಸವನ್ನು ಸಕಾಲದಲ್ಲಿ ಸರಿಯಾಗಿ ಮಾಡುವುದು ಸುಲಭ. ಆದರೆ ಆತಂಕವು ಸ್ವಲ್ಪ ಹೆಚ್ಚಾದರೆ ಮನಸ್ಸಿನಲ್ಲಿ ತಳಮಳವು ಹೆಚ್ಚಾಗುತ್ತದೆ. ಇದರಿಂದ ಭಯ ಉಂಟಾಗುತ್ತದೆ. ಭಯವು ಉಂಟಾದಾಗ ಮನೋಕಾಲವು ಬಹಳ ನಿಧಾನವಾದಂತೆ ಅನ್ನಿಸುತ್ತದೆ.

ಮನೋರೋಗಗಳು ಕಾಡುವಾಗ, ಅದೂ ಉಗ್ರವಾಗಿ ಕಾಡುವಾಗ, ಕಾಲದ ಅನುಭವವು space ಅಥವಾ ದೇಶದ ಅನುಭವದಂತೆ, ಬಹಳಷ್ಟು ಪಲ್ಲಟವಾಗುತ್ತದೆ. ಅಂತ ರೋಗಿಗಳ ಮನೋಕಾಲಕ್ಕೂ, ಗಡಿಯಾರದ ಕಾಲಕ್ಕೂ ಯಾವೊಂದು ಸಂಬಂಧವೂ ಇರುವುದಿಲ್ಲ. ಅವರ ಮನಸ್ಸಿನ ಲೋಕವೇ ಬೇರೆ, ಕಾಲಗತಿಯೇ ಬೇರೆ.

6. ಭ್ರಮಾಕಾರಕ ಔಷಧಿಗಳು ಮತ್ತು ಕಾಲ

ಮಾದಕ ಪದಾರ್ಥಗಳನ್ನು ಸೇವಿಸಿದಾಗ ಮನಸ್ಸಿನಲ್ಲಿ ಅಮಲು ಹತ್ತುತ್ತದೆ. ಅಮಲು ಹತ್ತಿದ ಮನಸ್ಸಿಗೆ ವಿವೇಚನಾ ಶಕ್ತಿಯು ಕಡಿಮೆಯಾಗುತ್ತದೆ. ಪಂಚೇಂದ್ರಿಯಗಳಿಂದ ಸಂಗ್ರಹಿಸಿದ ಸುದ್ದಿಗಳಿಗೆ ವಿಪರಾರ್ಥವನ್ನು ಮಾಡಿದಂತಾಗುತ್ತದೆ. ಈ ಕಾರಣದಿಂದ ಮನೋಕಾಲದ ಗತಿಯೂ ಪಲ್ಲಟವಾಗುತ್ತದೆ. ಹಿಂದಾದುದನ್ನು ಇಂದಾಯಿತು, ಇಂದಾದುದನ್ನು ಮುಂದಾಗುತ್ತದೆ, ಮುಂದಾಗುವುದೆಲ್ಲಾ ಇಂದೇ, ಇತ್ಯಾದಿ ಕಲಸು ಮೇಲೋಗರವು ಮನಸ್ಸಿನಲ್ಲಾಗಿ, ಮನೊಕಾಲವೂ ಹುಚ್ಚೆದ್ದು ಹರಿಯುತ್ತದೆ.

7. ಕನಸಿನ ಕಾಲ

ಮನಸ್ಸಿನ ಹಲವಾರು ಅವಸ್ಥೆಗಳಲ್ಲಿ ಸ್ವಪ್ನದ ಅವಸ್ಥೆಯು ಮುಖ್ಯವಾದದು. ಗಡಿಯಾರದ ಕಾಲಕ್ಕೂ ಕನಸಿನ ಕಾಲಕ್ಕೂ ಅರ್ಥಾರ್ಥಕ ಸಂಬಂಧವೂ ಇರುವುದಿಲ್ಲ. ಹತ್ತು ವರ್ಷಗಳಲ್ಲಿ ನಡೆದ ಘಟನೆಗಳೆಲ್ಲವೂ, ಕನಸಿನ ಕೇವಲ ಒಂದೆರಡು ನಿಮಿಷಗಳಲ್ಲಿ ಯಥಾರ್ಥವಾಗಿ ನಡೆದಂತೆ ಭಾಸವಾಗುತ್ತದೆ. ಅಂದರೆ ಕನಸಿನ ಕಾಲದ ಗತಿಯು ಅತಿ ವೇಗವಾಗಿದೆ ಎನ್ನಲೂ ಬಹುದು.

ಕಾಲ (Time) ವು, ದೇಶದೊಂದಿಗೆ (ಎಂದರೆ space ನೊಂದಿಗೆ) ಅವಿಚ್ಛಿನ್ನವಾಗಿದೆ ಎಂಬುದನ್ನು ಭೌತಶಾಸ್ತ್ರದ ಪ್ರಕಾರ ತಿಳಿದೆವು. ಆದರೆ ಕನಸಿನ ಕಾಲವು ದೇಶದೊಂದಿಗೆ ಅವಿಚ್ಛಿನ್ನವಾಗಿದೆ ಎಂದು ಹೇಳುವಂತೆಯೇ ಇಲ್ಲ. ಕನಸುಗಳಲ್ಲಿ ದೇಶವೂ ಯದ್ವಾತದ್ವಾ ಅಲ್ಲೋಲಕಲ್ಲೋಲವಾದಂತೆ ಭಾಸವಾಗುತ್ತದೆ. ಕಾಲವೂ ಕೂಡ ದೇಶಕ್ಕೆ ಅನ್ವಯವಾಗದೆಯೇ, ತನ್ನಷ್ಟಕ್ಕೆ ತಾನು ಎಗರಾಡುತ್ತಿದೆಯೇನೋ ಎನಿಸುತ್ತದೆ. ಕನಸಿನ ಕಾಲದ ನಡಿಗೆಗೆ ಯಾವ ಸೂತ್ರ (Formula) ವನ್ನೂ ಅಳವಡಿಸುವಂತಿಲ್ಲ. ಒಂದು ರೀತಿಯಲ್ಲಿ ಕನಸಿನ ಕಾಲವು ಸರ್ವತಂತ್ರ ಸ್ವತಂತ್ರ.

ಕೆಲವು ಭಯಾನಕ ಕನಸುಗಳಲ್ಲಿ (Night mares) ಎಚ್ಚರವಾಗುವ ಮುನ್ನ, ಗಡಿಯಾರದ ಪ್ರಕಾರ ಕೆಲವೇ ನಿಮಿಷಗಳಲ್ಲಿ ಕನಸಿನ ಕಾಲವು ನಿಂತೇ ಹೋಯಿತು; ಎಲ್ಲವೂ ಮುಗಿದು ಹೋಯಿತು ಎಂದು ತೀವ್ರ ಹೆದರಿಕೆಯುಂಟಾಗುತ್ತದೆ. ಅಂದರೆ ಕನಸಿನ ಕಾಲವು ಅವ್ಯವಸ್ಥಿತವಾಗಿ ಹರಿದಂತೆ ಇದ್ದರೂ, ಅದು ನಿಧಾನವಾಗಬಹುದು, ಸ್ಥಬ್ದವಾಗಬಹುದು, ಅತಿ ವೇಗವಾಗಬಹುದು ಮತ್ತು ಹಿನ್ನಡೆಯಲೂ ಬಹುದು.

ಹೀಗೆ, ಡಾ|| ಶಿವರಾಂ ಬಿ.ಎ., ಎಂಬಿಬಿಎಸ್, ರವರು 'ಕಾಲ'ದ ವಿಶ್ಲೇಷಣೆ ಮಾಡುತ್ತಾ, 'ವಶೀಕರಣ ಮತ್ತು ಕಾಲ', ಜಾನ್ ವಿಲಿಯಂ ಡನ್ನ್ ಮತ್ತು ಡಬ್ಲ್ಯು.ಟಿ. ಸ್ಟೇಸ್‌ರ ಚಿಂತನೆ, 'ಮನೋತೀತ ಕಾಲ', 'ಪಾಶ್ಚಾತ್ಯ ತಾತ್ವಿಕರ ಅಭಿಪ್ರಾಯಗಳು' 'ಭಾರತೀಯ ತಾತ್ವಿಕರು ಮತ್ತು ಅನುಭಾವಿಗಳು', ಪ್ರಾರ್ಥನೆ, ಧ್ಯಾನ ಮತ್ತು ಕಾಲ ಮತ್ತು 'ಕಾಲಭೈರವಾಷ್ಟಕ'ಗಳನ್ನು ಕುರಿತು ಬರೆಯುತ್ತಾರೆ. ನನ್ನ ಈ ಸಣ್ಣ ಪುಸ್ತಕದ ಇತಿಮಿತಿಗಳನ್ನು ಪರಿಗಣಿಸಿ, ಈ ಕೆಲವು ಶೀರ್ಷಿಕೆಗಳ ಹೆಸರನ್ನು ಮಾತ್ರ ಸೂಚಿಸಿದ್ದೇನೆ.

ಡಾ|| ಶಿವರಾಂರವರ ಮಾತುಗಳಲ್ಲೇ 'ಕಾಲ' ಎಂಬ ವಿಷಯದ ಬಗ್ಗೆ ಸರಳವಾಗಿ ಹೀಗೆ ಹೇಳಬಹುದು-

'ಕಾಲವು ಒಂದು ಅನಂತವಾಹಿನಿ. ಮುಂದು ಮುಂದಕ್ಕೆ ಹರಿಯುತ್ತಲೇ ಇರುತ್ತದೆ. ಇದನ್ನು ನಿಲ್ಲಿಸಲಾಗಲಿ, ಹಿಂದಿರುಗಿಸಲಾಗಲೀ ಸಾಧ್ಯವೇ ಇಲ್ಲ. ಇದೆಂದು ಪ್ರಾರಂಭವಾಯಿತು, ಎಲ್ಲಿ ಪ್ರಾರಂಭವಾಯಿತು, ಎಲ್ಲಿ ಇದು ಅಂತ್ಯಗೊಳ್ಳುತ್ತದೆ, ಇವನ್ನು ಯಾರೂ ಊಹಿಸಲೂ ಅರಿಯರು.'

ಮೇಲಿನಿಂದ ಕೆಳಕ್ಕೆ ನಿರ್ದಿಷ್ಟವಾಗಿ ಹರಿಯುತ್ತಿರುವ ನದಿಯ ಪ್ರವಾಹಕ್ಕೆ ಕಾಲವನ್ನು ಬಹು ಕಾಲದಿಂದ ಹೋಲಿಸುತ್ತಿದ್ದಾರೆ. ನಿತ್ಯ ಜೀವನದ ಸಾಮಾನ್ಯ ಅನುಭವದಲ್ಲಿ ಇದು ದಿಟವಿರಬೇಕು ಎನಿಸುತ್ತದೆ. ನಿರಂತರವಾಗಿ ಹರಿಯುವ 'ಕಾಲ' ದಲ್ಲಿ ನಮ್ಮ ಬಾಳ ಘಟನೆಗಳು ನಡೆಯುತ್ತವೆ. ಕಾಲವು ಮುಂದೆ ಸಾಗಿದ ಮೇಲೆ ಹಿಂದೆ ಆದವುಗಳನ್ನು ಸರಿಪಡಿಸಲಾಗುವುದಿಲ್ಲ. ವ್ಯತ್ಯಾಸ ಮಾಡಲಾಗುವುದಿಲ್ಲ ಎನ್ನುವುದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯ. ಆದರೆ ಆ ಘಟನೆಗಳು ಮನಸ್ಸಿನಲ್ಲಿ ಸ್ಮರಣೆಗಳಾಗಿ ಬಹುಕಾಲ ಉಳಿದುಕೊಳ್ಳುತ್ತವೆ. ಸ್ಮರಣೆಗಳು ಮಾಸಲಾಗತೊಡಗಿದಾಗ, ಘಟನೆಗಳೂ ವ್ಯತ್ಯಾಸ ಹೊಂದಿದಂತೆ ಭಾಸವಾಗುತ್ತದೆ. ಅರುಳು ಮರುಳಿನಲ್ಲಿ ಇದೇ ಆಗುವುದು.

ನಿನ್ನೆ, ಇವತ್ತು, ನಾಳೆ, ಹೀಗೆ ಕಾಲದ ನಿರಂಕುಶ ಗತಿ. ನಿನ್ನೆಯನ್ನು ಪಡೆಯುವುದು ಅಸಾಧ್ಯ. ಇವತ್ತನ್ನು ನಾಳೆ ಪಡೆಯುವುದೂ ಅಷ್ಟೇ ಅಸಾಧ್ಯ. ಇದು ನಮ್ಮ ನಿತ್ಯ ಅನುಭವ. 'ನಿನ್ನೆ' ಕಳೆದುಹೋದದ್ದನ್ನು ಯಾವ ರೀತಿಯಿಂದಲೂ ಮರಳಿ ಪಡೆಯಲು ಅಸಾಧ್ಯ ಎಂಬುದೂ ತಿಳಿದಿದೆ. 'ಕಾಲವನ್ನು ಕಳೆಯಬೇಡ, ಸದುಪಯೋಗ ಮಾಡಿಕೊಳ್ಳಬೇಕು' ಎಂಬುದು ಹಿರಿಯರ ಹಿತವಾದ ನಮಗೆ. "Time and Tide wait for no man', ಎಂಬ ನಾಣ್ಣುಡಿ.

(ಈ ಉಪಯುಕ್ತ ಮಾಹಿತಿಗಳೆಲ್ಲಾ ಡಾ|| ಎಂ. ಶಿವರಾಂ ರವರ 'ಕಾಲ' ಪುಸ್ತಕದ್ದು. ಪ್ರಕಾಶಕರು - ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 18. ತ್ರೈವಾರ್ಷಿಕ ಯೋಜನೆಯ ಪುಸ್ತಕ ಮಾಲೆ - 50, 1973. ಬೆಲೆ 2-50 ರೂ)

ಮನೆಗೆ ನಗು ತಂದ ಕೊರವಂಜಿ

✧ ಹಾ.ರಾ.

ಹೆಂಗಸೊಬ್ಬಳು ಸ್ವತಃ ವಿಮಾನವೊಂದರಲ್ಲಿ ಅಮೇರಿಕದಿಂದ ಚೈನಾಕ್ಕೆ ಬಂದಳಂತೆ.
- ಇದೇನು ಮಹಾ ಸಾಹಸ. ನಮ್ಮೂರಿನ ಹೆಂಗಸರು ಕಂಡೂ ಕಾಣದವರನ್ನು ಕಣ್ಣುಮುಚ್ಚಿಕೊಂಡು ಮದುವೆಯಾಗುವ ಸಾಹಸ ಮಾಡುವುದಿಲ್ಲವೆ.

★★★

ಮೊನ್ನೆ ಕಳವಾದ ಗ್ರಾಮಾಫೋನು ಹಿಂತಿರುಗಿ ಮಾಲೀಕನಿಗೆ ವಾಪಸಾಗಿದೆಯಂತೆ

- ಕೇಳಿ ಕೇಳಿ ಕಳ್ಳನಿಗೂ ಮನಸ್ಸು ಸಡಿಲವಾಗಿದ್ದಿರಬೇಕು.

★★★

ಒಂದೊಂದು ಹೋಟಲು ಹತ್ತಿರ ಒಂದೊಂದು ಆಯುಷ್ಕರ್ಮ ಶಾಲೆ ಇದೆ

- ಈಗ ಷುರುವಾಯಿತು ಸಮಸ್ಯೆ. ಚೌರ ಮಾಡಿಸಿಕೊಂಡು ತಿಂಡಿ ತಿನ್ನುವುದೆ? ತಿಂಡಿ ತಿಂದು ಚೌರ ಮಾಡಿಸಿಕೊಳ್ಳುವುದೆ?

★★★

ಸಂಗೀತ ಸಭೆಯ ಕಾರ್ಯದರ್ಶಿಗಳು ಮೊನ್ನೆ ಈ ರೀತಿ ಒಂದು ನೋಟೀಸು ಬರೆದು ಬಾಗಿಲಲ್ಲಿ ಹಾಕಿದಾರೆ

- ''ಮುಂದಿನ ಬುಧವಾರ ಕೀರ್ತನ ಕಾಲಭೈರವ ಕಿರಿಚೂರ್ ನಾರಾಯಣ ಭಾಗವತರ ಹರಿಕಥೆ ನಡೆಯುತ್ತದೆ. ಅನಂತರ ಕಟ್ಟಡಕ್ಕೆ ಆಗಬೇಕಾದ ಅತ್ಯಗತ್ಯ ರಿಪೇರಿ ಕೆಲಸಗಳಿಗಾಗಿ ಒಂದು ವಾರದವರೆಗೆ ಬಾಗಿಲು ಮುಚ್ಚಿರುತ್ತದೆ.''

ಇವು ಕೊರವಂಜಿಯ (ಪ್ರಾರಂಭಿಕ ದಿನಗಳಲ್ಲಿ ಅಂದರೆ 40ನೇ ದಶಕದಲ್ಲಿ ಅದರ ಸಂಪಾದಕರಾದ ರಾ.ಶಿ. ಬರೆದ ಕುಹಕಿಡಿಗಳು ಮತ್ತು ಉರಿಗಾಳು ಅಂಕಣಗಳಿಂದ ಆರಿಸಿದ ಕೆಲವೇ ಉದಾಹರಣೆಗಳು. ಮನೆಯವರೆಲ್ಲ ಓದಿ ಸಂತೋಷ ಪಡುತ್ತಿದ್ದ ಕಾಲ. ಸ್ವಲ್ಪವೂ ತಡಮಾಡದೆ ಓದಿದ ತಕ್ಷಣ ಎಲ್ಲರೂ ನಕ್ಕಿದ್ದನ್ನು ನಾನು ಕಂಡಿದ್ದೇನೆ. ಈ ಅಂಕಣಗಳು ಅವ್ಯಾಹಿತವಾಗಿ 25 ವರ್ಷಗಳ ಕಾಲ ಕೊರವಂಜಿಯಲ್ಲಿ ಕಾಣಿಸಿಕೊಂಡವು. ರಾಶಿಯವರೇ ಇದನ್ನು ಬರೆಯುತ್ತಿದ್ದುದರಿಂದ ಅವುಗಳನ್ನು ಮೊದಲು ಓದಿ ಮುಂದಿನ

ಪುಟಗಳನ್ನು ತಿರುವಬೇಕಾಗಿತ್ತು. ದಿನನಿತ್ಯದ ಪತ್ರಿಕಾ ಸುದ್ದಿಗಳಿಗೆ, ರಾಜಕಾರಣಿಗಳ ವಿಚಿತ್ರ ಹೇಳಿಕೆಗಳಿಗೆ, ನಾಡು ನುಡಿಗಳ ಸೇವಾ ಧುರೀಣರ ಧೋರಣೆಗಳಿಗೆ ಉಪ್ಪು ಹುಳಿ ಖಾರ ಹಚ್ಚಿ ಪ್ರತಿ ತಿಂಗಳೂ ಓದುಗರಿಗೆ ಹಂಚುವುದೇ ಈ ತಿಂಗಳ ತಿಳಿಗಾಳುಗಳ ಸ್ಪೆಷಾಲಿಟಿ. ತಾವೂ ಓದಿ ಅಕ್ಕ ಪಕ್ಕದ ಮನೆಗಳಿಗೂ ಈ ನಗೆಯನ್ನು ಹಂಚುತ್ತಿದ್ದುದರಿಂದ ಕೊರವಂಜಿ ಎಲ್ಲರಿಗೂ ಪ್ರಿಯವಾದ ಪತ್ರಿಕೆಯಾಯಿತು. ಗಹಗಹಿಸಿ ನಗುವುದಕ್ಕೆ ಒಂದಿಷ್ಟು ಹೊಸ ಬಗೆಯ ಹಾಸ್ಯ ಸಾಹಿತ್ಯದ ಕೊರತೆ ಎದ್ದು ಕಾಣುತ್ತಿತ್ತು ಆ ಕಾಲದಲ್ಲಿ. ಜತೆಗೆ ಒಳ್ಳೆಯ ವ್ಯಂಗ್ಯ ಚಿತ್ರಗಳೂ ಕೂಡಿ ಪತ್ರಿಕೆ ಬಂದರೆ ಯಾರಿಗೆ ಬ್ಯಾಡ - ಹೆಂಗಸರಿಗೆ ಕಾಲೇಜ್ ಹುಡುಗ ಹುಡುಗಿಯರಿಗೆ ಶಾಲಾ ಕಾಲೇಜ್ ಅಧ್ಯಾಪಕರಿಗೆ, ಸರ್ಕಾರಿ ನೌಕರರಿಗೆ ವರ್ಷಗಳು ಕಳೆದಂತೆಲ್ಲ ಅಚ್ಚು ಮೆಚ್ಚಾದಳು ಕೊರವಂಜಿ. ನಗು ಬಲ್ಲ ಮನಸ್ಸುಳ್ಳವರು ಬಹು ಬೇಗ ಆಕರ್ಷಿತರಾದರು.

ವರ್ಷಗಳು ಕಳೆದಂತೆಲ್ಲ 40ರ ದಶಕದ ಕೊನೆ ಮತ್ತು ಅನಂತರ ಕಾಡಿನಿಂದ ಬಂದ ಕೊರವಂಜಿ ಷಹರಿನ ನಾಗರೀಕತೆಗೆ ಒಲಿಯುತ್ತ ಹೋದಳು. ಯುದ್ಧ ಬಂತು. ರೇಷನ್ ಬಂತು. ಸೌದೆ ಕೂಡ ಸಿಗದಂತಾಯ್ತು. ಆತ್ಮಹತ್ಯೆ ಮಾಡಿಕೊಳ್ಳೋಣ ಅಂತ ರೈಲ್ ಕಂಬಿಮೇಲೆ ಮಲಗಿಕೊಂಡರೆ ರೈಲೇ ಬರದೆ ಉಪವಾಸದಿಂದ ಸಾಯುವಂತಾಯ್ತು. ಖಾಕಿಬಟ್ಟೆ ತೊಟ್ಟು ಕಷ್ಟನಷ್ಟಗಳಿಗೆ ಗುರಿಯಾದರೂ ನಗ್ತಾ ನಗ್ತಾ ಬಾಳನ್ನ ಸಾಗಿಸಬೇಕೆಂಬ ಸಂದೇಶವನ್ನು ಅರ್ಥಗರ್ಭಿತವಾಗಿ ನಾಡಿಗೆ ಸಾರುತ್ತ ಅದ್ಭುತ - ಫೆನಾಮಿನನ್ ಎಂದೆನಿಸಿಕೊಂಡುಬಿಟ್ಟಳು. ಆಮೇಲೆ ದೇಶಕ್ಕೆ ಸ್ವಾತಂತ್ರ್ಯ ಬಂತು ಪ್ರಜಾಪ್ರಭುತ್ವ ಸ್ಥಾಪನೆಯಾಯಿತು. ಮಂತ್ರಿಗಳು ಬಂದರು. ಕಂತ್ರಿಗಳು ಮೆರೆದರು. ತಂತ್ರಗಳು ಗೊತ್ತು ಎಂದರು. ಕುತಂತ್ರಗಳು ಹುಟ್ಟಿಕೊಂಡವು. ಈ ಹಿನ್ನೆಲೆಯಲ್ಲಿ ಕೊರವಂಜಿಯ ಕಿಡಿಗಳು, ಬರಹಗಳು ಹೆಚ್ಚು ಅರ್ಥವನ್ನು ಹೊರಹಾಕಲು ತೊಡಗಿದಾಗ ಏನೋ ಇದರೊಳಗೆ ಹೊಸ ಅರ್ಥ ಇದೆ ಎನ್ನುವ ಕೌತಕ ತಾಳಿ ಮತ್ತೆ ಮತ್ತೆ ಓದಿ ಒಂದೆರಡು ನಿಮಿಷ ಆದ ಮೇಲೆ ನಗುವುದಕ್ಕೆ ಪ್ರಾರಂಭಿಸಿದರು ಹಸನ್ಮುಖಿಗಳಾಗಿ! ಉದಾಹರಣೆಗೆ ಕೆಲವು ಕುಹಕಿಡಿಗಳನ್ನು ನೋಡಿ:

ಬ್ರಿಟನ್‌ನಲ್ಲಿ ಈಗ ಕಳ್ಳರ ಕಾಟ ಹೆಚ್ಚಿದೆಯಂತೆ

- ಇದು ಭಾರತಕ್ಕೆ ಗೊತ್ತಿಲ್ಲವೆ - 150 ವರ್ಷಗಳಿಂದ

★★★

ಪ್ರಸವ ಸಂಕಷ್ಟ ಸ್ತ್ರೀಗೆ ಮಾತ್ರವಲ್ಲ - ಆ ಸಮಯದಲ್ಲಿ ಅವರ ಗಂಡಂದರೂ ಬಾಣಂತನ ಮಾಡಿಕೊಳ್ಳುತ್ತಾರೆ - ಬ್ರಾಂದಿ ಕುಡಿದು.

★★★

ಸ್ತ್ರೀ ಸಮಾಜದಲ್ಲಿ ವಾರಕ್ಕೆರಡು ದಿನ ಗೃಹಿಣಿಯರು ತಮ್ಮ ತಮ್ಮ ಕಷ್ಟಗಳನ್ನು ಸರಿಪಡಿಸಲು ಸಭೆ ನಡೆಸುತ್ತಾರಂತೆ.

- ಕಷ್ಟಗಳು ಹೊರಗೆ ಕಾದಿದ್ದು ಸಭೆ ಮುಗಿದ ನಂತರ ಮನೆಗೆ ಕರೆದುಕೊಂಡು ಹೋಗುತ್ತವಂತೆ

★★★

ತಾನು ಭಾಷಣ ಮಾಡುವ ಹಾಲಿನಲ್ಲಿ ಕ್ಯಾಲೆಂಡರೊಂದನ್ನು ತೂಗು ಹಾಕಿದ್ದು ತಮಗೆ ಅವಮಾನ ಎಂದು ಹೇಳಿ ರಾಜಕೀಯ ನಾಯಕರೊಬ್ಬರು ಸಭಾತ್ಯಾಗ ಮಾಡಿದಂತೆ.

ಭಾಷಾ-ವಾರ್ ಎಂಬುದು ಒಂದು ಕನ್ನಡ ಇಂಗ್ಲಿಷ್ ಪದ ಎಂಬ ಗುಟ್ಟನ್ನು ಈಗ ನಾವು ತಿಳಿದುಕೊಂಡ ಹಾಗಾಯಿತು.

★★★

ಬೆಂಗಳೂರಿನಲ್ಲಿ ಕಾಮನ ಹಬ್ಬವು ಸಾಂಗವಾಗಿ ನೆರವೇರಿತು

- ಹೌದು ಸಾಕಷ್ಟು ಕಾರಣಗಳಿದ್ದವು.

★★★

ಗಟ್ಟಿಮುಟ್ಟಾಗಿ ಇದ್ದಾಗಲೇ ಶ್ರದ್ಧಾಂಜಲಿಯನ್ನು ಬಯಸುತ್ತೀರಲ್ರೀ ಎಂದು ಹಿರಿಯರೊಬ್ಬರು ಬೈದರು.

- ಅವರ ಹಿರಿಯ ಹಿರಿಯರು ಕೂಡ 'ಗಯಾಶ್ರಾದ್ಧ' ಮಾಡಿದವರೆ.

ಇಂಥ ಕುಹಕಿಡಿಗಳು ಬುದ್ಧಿಗೆ ಚುರುಕು ಮುಟ್ಟಿಸಿದಾಗ ಓದುಗರು ಗಂಭೀರವಾಗಿ ಪ್ರತಿಕ್ರಿಯಿಸಿ ಮಂದಸ್ಮಿತರಾದರು. ಮನೆಯಲ್ಲಿ ಓದಿದ್ದನ್ನು ಆಫೀಸಿನಲ್ಲಿ ಜ್ಞಾಪಿಸಿಕೊಂಡು ನಗುತ್ತ ನಡೆದರು. ಇವತ್ತು ಹೇಳಿದ ಹಾಸ್ಯದ ಕಿಡಿ ಹೊತ್ತು ನಗುವಾಗಬೇಕಾದರೆ ಸಾಕಷ್ಟು ಕಾಲಾವಕಾಶ - ಸತ್ಯ ಕಾಣುವ ಪುಣ್ಯ ಬರಬೇಕು - ಇಂದಿನ ಸಮಾಜದ ಪರಿಸ್ಥಿತಿಯಲ್ಲಿ ಎಂದು ಹೇಳುತ್ತಿದ್ದರು ರಾಶಿ. ಹೀಗೆ ಮಿಂಚಿಸುತ್ತಿದ್ದ ಕಿಡಿಗಳ ಬೆಳಕನ್ನು ನೋಡಿ ನಾವೂ ಆನಂದಿಸಿ ಅಕ್ಕ ಪಕ್ಕದ ಮನೆಗಳಿಗೂ ಹಂಚಿ ಸಂತೋಷ ಪಡುತ್ತಿದ್ದ ಕಾಲ. ಜತೆ ಜತೆಗೇ ಬರುತ್ತಿದ್ದ ಅನರ್ಥಕೋಶ, ನವೀನ ಗಾದೆಗಳು, ಸೂಪರ್ ಸರ್ವಜ್ಞ ಪದಗಳು ಪತ್ರಿಕಾ ವಿಚಿತ್ರ, ನೀತಿಯ ಕಥೆಗಳು, ಹಿಂದಿನ ಕಾಲದ ಹೊನ್ನ ಮಾತುಗಳು, ಹಾಸ್ಯ ಪದ್ಯಗಳು, ಚರಿತ್ರೆಯ ಹೊಸ ಉತ್ತರಗಳು, ಏಪ್ರಲ್ ಪಾಠದ ಮಾದರಿಗಳು ಹೊಸ ವರ್ಷದ ಬಹಿರಂಗ ಪತ್ರಗಳು, ರಾಜಕೀಯ ಸಮಸ್ಯೆಗಳು, ಕೊರವೇಶ್ವರನ ವಚನಗಳು, ಹೀಗೆ ವಿಧ ವಿಧವಾದ ರೂಪಗಳಲ್ಲಿ ತಿಂಗಳು ತಿಂಗಳೂ ಮನೆ ಮನೆಗೆ ನಗು ತಂದ ಕೊರವಂಜಿಯ ವೈವಿಧ್ಯಮಯ ಹಾಸ್ಯ ರಸ ಸಮಾರಾಧನೆಯನ್ನು ಕೆಲವಷ್ಟು ಜನರಾದರೂ ಮರೆಯಲಾರರು 25 ವರ್ಷಗಳ ಕೊರವಂಜಿ ಸಂಚಿಕೆಗಳನ್ನು ಓದಿ ಅನುಭವಿಸಬೇಕಾದ ಸಂಗತಿ ಇದು. ಹೊಸ ಪೀಳಿಗೆಯ ನಗೆಗಾರರಿಗೆ ಎಂದಾದರೂ ಇದು ಲಭ್ಯವಾಗಲಿ ಅಷ್ಟೆ. 50-60 ದಶಕಗಳ ಕೊರವಂಜಿ ಬರಹಗಳನ್ನು ಓದಿದವರಿಗೆ ಅನ್ನಿಸದೆ ಇರದು. "Humour is becoming more and more refine and futtle" ಎಂದು.

ಸರಸು-ಮೈಲಾರಯ್ಯ, ದಫೇದಾರ ದೇರಣ್ಣೋರು - ಸಾವಂತ್ರಮ್ಮ ಇವರ ಸರಸ ದಾಂಪತ್ಯ ಜೀವನದ ವಿನೋದ ವಿಲಾಸಗಳು, ರಂಗಪ್ಪ ಮತ್ತು ರಾವಣಭಾತ್, ಪುಟ್ಟೂರಾಯನ ಪಥ್ಯ, ಕೂಶ್ಮಾಂಡ ಪುರಾಣ, ಮದುವೆ ಮನೆ ಡಿನ್ನರ್, ಪಶುಪತಿಯ ಮಹಿಮೆ ಮುಂತಾದ ಬರಹಗಳನ್ನು ಕೊರವಂಜಿಯಲ್ಲಿ ಓದಿ ಮನೆ ಮಂದಿಯೆಲ್ಲ ಗಹಗಹಿಸಿ ನಕ್ಕಿದ್ದುಂಟು. ಇಲ್ಲಿ ಹಾಸ್ಯಾನುಭವ ನೇರ ಮತ್ತು ಸರಳ - ಬುದ್ಧಿಗೆ ಎಷ್ಟು

ಮಾತ್ರವೂ ತ್ರಾಸು ಎನಿಸುತ್ತಿರಲಿಲ್ಲ. ತಲೆ ಕೆರೆದುಕೊಳ್ಳಬೇಕಾದ ಅವಶ್ಯಕತೆ ಇರಲಿಲ್ಲ ಯಾಕೆಂದರೆ ಇವೆಲ್ಲ ಸರಸ ಕೌಟುಂಬಿಕ ಜೀವನದ ಹೇನು-ಜೇನುಗಳ ವಿನೋದ ಚಿತ್ರಣ. ಆದರೆ ರಾಜೀವಪುರ, ಪೆಬ್ಬಿ ಗುಬ್ಬಾಲಿಗಳಲ್ಲಿ (ಕೊರವಂಜಿ ಸೃಷ್ಟಿ) ನಡೆಯುತ್ತಿದ್ದ ರಾಜಕೀಯ, ನಾಟಕೀಯ ತುಂಟಾಟಗಳೇ ಬೇರೆ. ಮುಗಿಲಹಳ್ಳಿ ದಿಲ್‌ಬಿಹಾರ್ ಎಕ್ಸ್‌ಪ್ರೆಸ್, ಸಿನ್ ಸಿನಾಬಿ ಸರ್ಕಲ್ ವಿಶ್ವ ಸುಂದರಿ ಮೌಸಮಿ, ವೀರಣ್ಣ ಅಲಿಯಾಸ್ ಮುಬ್ಬೀರ, ನವೋದಯ ಜಾಜ್ವಲ್ಯ ಮಾನತಾರೆ 'ಹುರಿಗಡ್ಲೆ' ಕಳೆದ ಶತಮಾನದ ಕನ್ನಡ ಹಾಸ್ಯ ಸಾಹಿತ್ಯದ ಅದ್ಭುತಗಳು (Wonders) ಮುಗಲಹಳ್ಳಿಯ ಆರ್ಕಿಟೆಕ್ಚರ್, ಶಿವಣ್ಣನ ಪ್ರಾಣಾಯಾಮ, ಕಾಕ ದೂತಾರ್ಪಣಂ, ಕಾರಿಡಾರ್ ಕ್ರಿಕೆಟ್, 'ಕೊಲ್ಲಾಜಿನ್' ಎನ್ನುವುದು ಅಖಂಡ ಕರ್ಣಾಟಕದ ವಿಫಲ ಪ್ರೇಮಿಗಳ ಕಥಾನಕ ಮಧ್ಯಂತರ ಕನ್ನಡ ಕವಿಗಳ ನಡೆದ ಸಂಶೋಧನೆಗಳು ಮುಂತಾದ ಬರಹಗಳು ಹಾಸ್ಯ ಸಾಹಿತ್ಯ ಕ್ಷೇತ್ರದಲ್ಲಾದ ಒರಿಜಿನಲ್ ಪ್ರಯೋಗಗಳು! ಹಾಸ್ಯ ಪುರುಷನ ವಿಶ್ವರೂಪ ದರ್ಶನದಿಂದುಂಟಾದ ಮುದ ಕೊರವಂಜಿ ಓದುಗರಿಗೆ ಆ ಕಾಲದಲ್ಲಿ ಸಿಕ್ಕಿತು. ಆದರೆ ಸಾಮಾನ್ಯ ಓದುಗರು ನಗೆಯ ಸುಳಿಯಲ್ಲಿ ಸಿಕ್ಕಿ ಹಾಕಿಕೊಂಡರೇನೋ ಎಂದೆನಿಸುತ್ತಿತ್ತು. ಯಾಕೆಂದರೆ ನಗೆಯ ಪೂರ್ಣ ಲಾಭ ಸಿಗುವುದು ತಿಳಿವಿನಿಂದ ಮಾತ್ರ. ಅಂತಹ ನಗೆ ಮನಸ್ಸನ್ನು ಹಗುರಗೊಳಿಸಿ ಖುಶಿ ನೀಡುತ್ತದೆ. ಚಿಂತನೆಗೂ ಅವಕಾಶವಾಗುತ್ತದೆ. ಆದರೆ ಅದಕ್ಕೆ ಪೂರ್ವ ಸಿದ್ಧತೆ ಬೇಕು. ಸಾಹಿತ್ಯ, ವಿಜ್ಞಾನ, ವಿವಿಧ ಶಾಸ್ತ್ರಗಳ ಸಂಪರ್ಕ ಅಭಿರುಚಿ ಅವಶ್ಯಕ. ಪ್ರಖ್ಯಾತ ಕಾದಂಬರಿಗಾರ್ತಿಯಾಗಿದ್ದ ತ್ರಿವೇಣಿಯವರೇ ಆ ಕಾಲದಲ್ಲಿ ಕೊರವಂಜಿ ಸಂಪಾದಕರಿಗೆ ಒಂದು ಪತ್ರ ಬರೆದು ''ಈಗೀಗ ಕೊರವಂಜಿ ಓದಿದರೆ ನಗು ಬರೋದಿಲ್ಲ. ಹಳೆಯ ಕೊರವಂಜಿಯಲ್ಲಿ ಬರುತ್ತಿದ್ದ ರಾವಣಭಾತು ಇತ್ಯಾದಿಗಳ ಸವಿ ನಮಗೆ ಇನ್ನು ಸಿಗಲಾರದೆ'' ಎಂದು ಕೇಳಿದ್ದರು. ಆದಕ್ಕೆ ಉತ್ತರವೋ ಎನ್ನುವಂತೆ ಮುಂದಿನ ತಿಂಗಳ ಸಂಚಿಕೆಯಲ್ಲಿ ಅ.ರಾ.ಸೇ. 'ಮಾಲಕ್ಷ್ಮಕ್ಕ ಶಾವಿಗೆ ಮಾಡಿದ್ದು' ಎಂದು ಒಂದು ಲೇಖನ ಬರೆದರು. ಅದರ ಪ್ರಾರಂಭ ಹೀಗಿತ್ತು: ರಾವಣ ಭಾತಿನ ರುಚಿಯನ್ನೇ ಬಯಸಿದ ತ್ರಿವೇಣಿಯವರಿಗೂ ಸಪ್ಪೆ ಶಾವಿಗೆ ಬಯಸಿದ ಮಾಲಕ್ಷ್ಮಕ್ಕನಿಗೂ (ತ್ರಿವೇಣಿಯಂತೆ) ರಾಜಕೀಯದಲ್ಲಿ ಆಸಕ್ತಿ ಇಲ್ಲ. ಅವರಂತೆ ಇವಳಿಗೂ ಕೂಡ ಕೊರವಂಜಿಯನ್ನು ಓದಿದರೆ ನಗು ಬರುವುದಿಲ್ಲ - ಆದರೆ ಮಾಲಕ್ಷ್ಮಕ್ಕ ಮನೋವಿಶ್ಲೇಷಣಾತ್ಮಕ ಕಾದಂಬರಿ ಬರೆಯುವದಿಲ್ಲವಲ್ಲ ಎಂದರೆ ತ್ರಿವೇಣಿಯವರಿಗೆ ಮಾಲಕ್ಷ್ಮಕ್ಕನ ಹಾಗೆ ಶಾವಿಗೆ ಮಾಡುವುದಕ್ಕೆ ಬರುವುದಿಲ್ಲವಲ್ಲ'' ಅ.ರಾ.ಸೇ.ಯವರ ಲೇಖನ ತ್ರಿವೇಣಿಯವರಿಗೆ ಸವಾಲೇ ಆಗಿತ್ತು. ಮಾಲಕ್ಷ್ಮಕ್ಕ ಶಾವಿಗೆ ಮಾಡಿದ್ದನ್ನು ಓದಿ ತ್ರಿವೇಣಿಯವರು ನಗಲಿಲ್ಲವೆ? ಒಳಗೊಳಗೇ ನಕ್ಕು ಸಂತೋಷ ಪಡಲಿಲ್ಲವೆ? ಇಂತಹ ನಗುವನ್ನೇ 'ತಿಳಿನಗು', 'ಅರಿತ ನಗು' ಎಂದೆಲ್ಲ ರಾಶಿ ಹೇಳುತ್ತಲೇ ಇದ್ದರು ಆಗಾಗ್ಗೆ. ಕೊರವಂಜಿಯನ್ನು ಅವರು 'ತಿಳಿನಗೆಯ ಮಾಸಪತ್ರಿಕೆ' ಎಂದೇ ಕರೆದಿದ್ದರು. ''ನಗುವು ತಿಳಿಯಾದಂತೆಲ್ಲ, ತಿಳಿ ತಿಳಿಯಾದಂತೆಲ್ಲ ತಿಳಿವು ಮೂಡುತ್ತದೆ. ಇಂತಹ ಮನೋಧರ್ಮವಿದ್ದವರು ಆತ್ಮ ಸಕ್ಷಾತ್ಕಾರವನ್ನು ಮಾಡಿಕೊಳ್ಳಬಹುದು. ಅಮಿತಾನಂದವನ್ನು ಅನುಭವಿಸಬಹುದು'' ಎಂದು ಹೇಳಿ ನಗುವನ್ನು ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ನಿಲ್ಲಿಸಿದರು.

''ಬಾಳಿನ ಒಂದು ಕಣವನ್ನು ವಕ್ರದೃಷ್ಟಿಯಿಂದ ನೋಡಿದರೆ ನಗು ಬರುತ್ತೆ. ಅಲ್ಲಿ ವಿರೋದಾಭಾಸಗಳನ್ನು ಗುರ್ತಿಸಿದರೆ ಹಾಸ್ಯದ ಬುಗ್ಗೆ ಉಕ್ಕುತ್ತೆ ಬಾಳನ್ನೇ ವಕ್ರದೃಷ್ಟಿಯಿಂದ ನೋಡಿದರೆ ವೇದಾಂತದ ತಿರುಳು ಸಿಗುತ್ತೆ'' ಎಂದೆಲ್ಲ ಹೇಳಿ ಮನಸ್ಸಿಗೆ ಕವಿದಿದ್ದ ಮುಸುಕನ್ನು ತೆಗೆದು ನಗೆಯ ಆಡಂಬರವನ್ನೂ, ಅಬ್ಬರವನ್ನೂ ಕಡಿಮೆ ಮಾಡಿ ತುಟಿಗಳಂಚಿನಲ್ಲೇ ನಾಟ್ಯವಾಡುವ ತಿಳಿನಗೆಗೆ ಪಟ್ಟ ಕಟ್ಟಿದರು. ಮೆಲುನಗೆ ಹುಟ್ಟಿದ್ದೇ ಹೀಗೆ. ಕೊರವಂಜಿಯಲ್ಲಿ ಅತಿ ಸೂಕ್ಷ್ಮದ ಚಮತ್ಕಾರದ, ಮಾರ್ಮಿಕ ನಗೆಯನ್ನು ಸೃಷ್ಟಿಸಿದ ಶ್ರೀರಂಗ, ಶಿವರಾಮ ಕಾರಂತ, ರಾಜರತ್ನಂ, ರಾಶಿ, ನಾಕಸ್ತೂರಿ, ಇವರು ಯಾರೂ ಈಗ ಬದುಕಿಲ್ಲ. ಕೊರವಂಜಿ ಓದುಗರಿಗೆ ಅರಿತು ನಗುವುದನ್ನು ಕಲಿಸಿದವರೇ ಇವರು. ಆದರೂ ಮನಸ್ಸಿನ ಆತಂಕ ಹೋಗಿರಲಿಲ್ಲ. 25 ವರ್ಷಗಳ ಕಾಲ ಕೊರವಂಜಿಯ ಮುಖಾಂತರ ಹಾಸ್ಯ ರಸಧಾರೆ ಹರಿಸಿ ಅದರ ಪ್ರಕಟಣೆಯನ್ನು ನಿಲ್ಲಿಸಿದಾಗ, ರಾಶಿ ಇಂತಹ ನಗುವಿನ ಅಂತರಂಗ, ಬಹಿರಂಗ ಸ್ವರೂಪಗಳ ಸತ್ಯ ದರ್ಶನವನ್ನು ಕನ್ನಡಿಗರಿಗೆ ಮಾಡಿಸಿ ಶುಭಮಂಗಳ ಹಾಡಿದರು. ಅವರ ಮಾತು ಮರೆಯುವಂಥದಲ್ಲ.

''ಕೊರವಂಜಿಯು ಮೊದಲ ವರ್ಷಗಳಲ್ಲಿ ತುಂಬಾ ವಿನೋದವಾಗಿತ್ತು. ಆಮೇಲೆ ಆಮೇಲೆ ಚುರುಕು ಹೆಚ್ಚಾಯಿತು. ಕಾವು ಇದೆ ಎಂದು ಗೊತ್ತು. ಆದರೆ ಎಲ್ಲಿ ಎಂದು ತಿಳಿಯಬರುವುದಿಲ್ಲ. ಈಚೀಚೆಗೆ ನಗುತ್ತೇವೆ. ಆದರೆ ತಲೆ ಕೆರೆದು ನಗುತ್ತೇವೆ. ಎಲ್ಲೋ ಉಪನಿಷತ್ ವಾಕ್ಯದಂತೆ ಧ್ವನಿ ಮೂಡಿಸುತ್ತೆ ಎಂದು ಸಹೃದಯ ಓದುಗರು ಹೇಳುತ್ತ ಬಂದಿದ್ದಾರೆ. ಒಂದು ರೀತಿಯಲ್ಲಿ ಈ ಟೀಕೆ ಯಥಾರ್ಥ. ತಿಳಿನಗೆಯ ಮಾಸ ಪತ್ರಿಕೆ ಎಂದು ಶುರುವಾದದ್ದು ಈ ಅರ್ಥದಲ್ಲಿ ತಿಳಿವು ತಿಳಿಯಾಗಿ ಸ್ಪಟಿಕದಂತೆ ಶುಭ್ರ ಸತ್ಯವಾಗಬೇಕು ಎಂದು - ಎಳೆಯ ಮಗುವಿನ ನಗೆಯನ್ನು ಮುದಕರಲ್ಲಿ ಮೂಡಿಸಬೇಕು ಎಂದು. ಈ ಆಶಯ ಎಷ್ಟರ ಮಟ್ಟಿಗೆ ಸಫಲ ಹೊಂದಿದೆಯೋ ಭಗವಂತನೇ ಬಲ್ಲ ಆದರೆ ಈ ವ್ಯವಸಾಯ ಮಾಡಿದ ಹಲವರಿಗೆ ಈ ಪ್ರಯೋಜನ ಸಾಧಿಸಿ ಸಂದಿದೆ ಎನ್ನುವ ಭ್ರಮೆ ಮೂಡಿದೆ'' ಎಂದು ಹೇಳಿ ಋಣಮುಕ್ತರಾದರು ರಾಶಿ-ಕೊರವಂಜಿ ಸಂಪಾದಕರು.

ಅರವತ್ತು ವರ್ಷಗಳ ಹಿಂದೆ ಮನೆಗೆ ಬಂದ ಕೊರವಂಜಿಯನ್ನು ನಗುನಗುತ್ತ ಸ್ವಾಗತಿಸಿದೆವು. 25 ವರ್ಷಗಳಷ್ಟು ಕಾಲ ಮನೆ ಮಂದಿಯೊಡನೆ ಚೆಲ್ಲಾಟವಾಡಿ ಮನೆ ಹೆಣ್ಣು ಮಗಳಂತೆಯೇ ಸ್ವಾತಂತ್ರ್ಯ ಕೋರಿ ತನ್ನ ತಾಣಕ್ಕೆ ಹೊರಟು ಹೋದಳು. ಆದರೂ ಅವರ ಮೇಲಿದ್ದ ಪ್ರೀತಿ ವಿಶ್ವಾಸ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಅಂತಯೇ ಅವಳ ಪ್ರಭಾವವೂ ಕುಂದಲಿಲ್ಲ. ಊರು ಹೋಗು, ಕಾಡು ಬಾ ಎಂದು ಕರೆಯುವ ಸ್ಥಿತಿಯನ್ನು ಮುಟ್ಟಿರುವ ನನ್ನಂಥ ಗೃಹಸ್ಥನಿಗೆ ಕೊರವಂಜಿ ಊರಿನಲ್ಲೇ ಇದ್ದಾಳಲ್ಲ ಎನ್ನುವ ಭ್ರಮೆ ಹೋಗಿಲ್ಲ. ಅಂತೂ ಮನೆಯವರೆಲ್ಲ ನಗು ಸರಸಿಗಳಾಗಿಬಿಟ್ಟರು. ನಗು ಬಲ್ಲ ಮನಸ್ಸುಳ್ಳ ನನ್ನನ್ನೇ "Serious" ಎಂದು 'ಬ್ರ್ಯಾಂಡ್' ಮಾಡಿದ್ದಾರೆ. ಬೇಸರವಾದಾಗ ಹೊರಗಡೆ ಈಜಿ ಚೇರಿನ ಮೇಲೆ ಕಾಲು ಚಾಚಿಕೊಂಡು ಕೂತು ಹಳೆಯ ಕೊರವಂಜಿಗಳನ್ನು ತಿರುವಿ ಹಾಕುತ್ತೇನೆ. ಮೊಮ್ಮಕ್ಕಳನ್ನು ಆಡಿಸುತ್ತ ಮನೆಯಾಕೆ ಕೊರವಂಜಿಯಿಂದ ಕಲಿತ ಕಿಡಿಯನ್ನೇ ನನ್ನ ಮೇಲೆ ಹಾರಿಸುತ್ತಾಳೆ. ''ತಾತಂಗೆ ಕೋಪ ಬಂದಿದೆ, ಕೊರವಂಜಿ ಓದ್ತಿದಾರೆ ಯಾರೂ ಮಾತಾಡಿಸ್ಬೇಡಿ.''

ಕಡಲಾಚೆಯ ಕುಡಿನೋಟ

✧ ಶಿವು

ಖ್ಯಾತ ಚರಿತ್ರಕಾರ ಶ್ರೀ ಪಿ.ಬಿ.ದೇಸಾಯರ ಹೆಸರನ್ನು ನೀವು ಕೇಳಿರಬಹುದು. ಅವರ ಮಗ ಶ್ರೀವತ್ಸ ದೇಸಾಯಿ ಅವರು ಇಂಗ್ಲೆಂಡಿನ ಡಾನ್‌ಕಾಸ್ಟರಿನಲ್ಲಿ ವಾಸಿಸುತ್ತಿದ್ದಾರೆ. ಅವರು ನನ್ನ ಅಳಿಯನ ಬಂಧುಗಳೂ ಆಗಿರುವುದರಿಂದ ಈ ಬಾರಿಯ ಇಂಗ್ಲೆಂಡ್ ಪ್ರವಾಸದಲ್ಲಿ ಅವರನ್ನು ಭೇಟಿಮಾಡುವ ಅವಕಾಶವಾಯಿತು. ಅವರೊಂದಿಗೆ ಲೋಕಾಭಿರಾಮವಾಗಿ ಹರಟುತ್ತಿದ್ದಾಗ ಅವರು ಇಂಗ್ಲೆಂಡಿನ ಕನ್ನಡಬಳಗದ ವಾರ್ಷಿಕ ಸಮಾರಂಭದ ಬಗ್ಗೆ ತಿಳಿಸಿದರು. ಈ ಬಾರಿ ನಾವೆಲ್ಲಾ ಲೇಕ್‌ಡಿಸ್ಟ್ರಿಕ್ಟಿನ ಕೆಂಡಲ್ ನಲ್ಲಿ ಸೇರುವ ಹಂಚಿಕೆ ಹೂಡಿದ್ದೇವೆ. ಅಕ್ಟೋಬರ್ ಒಂದರಂದು ಕನ್ನಡಬಳಗದ ಕಾರ್ಯಕ್ರಮ. ನೀವೂ ಬನ್ನಿ. ಕೊರವಂಜಿ, ಅಪರಂಜಿ, ಹಾಸ್ಯೋತ್ಸವ ಇವುಗಳ ಬಗ್ಗೆ ಎರಡು ಮಾತನಾಡಿ ಎಂದು ಆದರದ ಆಹ್ವಾನ ನೀಡಿದರು. ನಾನು ಸಂತಸದಿಂದ ಒಪ್ಪಿದೆ.

ನಾನಿದ್ದದ್ದು ಮಿಲ್ಟನ್‌ಕೀನ್ಸ್ ಎಂಬ ಊರಿನಲ್ಲಿ. ಇಲ್ಲಿಂದ ಕೆಂಡಲ್‌ಗೆ ನೇರ ಪ್ರಯಾಣದ ವ್ಯವಸ್ಥೆ ಇಲ್ಲ. ಮೂರು ರೈಲುಗಳನ್ನು ಬದಲಿಸಿ ಮಾಡುವ ಪಯಣವದು. ಕಾರ್ಯಕ್ರಮದ ಪ್ರಾರಂಭದ ಸಮಯಕ್ಕೆ ಸರಿಯಾಗಿ ಅಲ್ಲಿರಬೇಕಾದರೆ ಹಿಂದಿನ ದಿನವೇ ಊರನ್ನು ಸೇರಿರಬೇಕಾದಂತಹ ಪ್ರಸಂಗ. ನನ್ನ ಕಷ್ಟವನ್ನೆಲ್ಲಾ ಕನ್ನಡ ಬಳಗದ ಕಾರ್ಯದರ್ಶಿ ವಾಸು ಅವರಿಗೆ ತಿಳಿಸಿದೆ. ಅವರು ಸ್ವಲ್ಪ ಕಾಲಾವಕಾಶ ಕೊಡಿ. ಏನಾದರೂ ವ್ಯವಸ್ಥೆ ಮಾಡುವೆ ಅಂತ ಹೇಳಿ, ಹೇಳಿದಂತೆಯೇ ನಡೆದುಕೊಂಡರು. ಅವರ ಸಲಹೆಯಂತೆ ನಾನು ಅಕ್ಟೋಬರ್ ಒಂದರಂದು ಮಿಲ್ಟನ್ ಕೀನ್ಸಿನಿಂದ ನೇರವಾಗಿ ಪ್ರೆಸ್ಟನ್ ಗೆ ರೈಲು ಹಿಡಿದೆ. ನನ್ನ ಜೊತೆ ನನ್ನ ಮಗಳು ಆರತಿ ಸಹಾ ಬಂದಿದ್ದಳು. ಪ್ರೆಸ್ಟನ್ ಸ್ಟೇಷನ್ ಸೇರಿದಾಗ ಬೆಳಗ್ಗೆ ಹನ್ನೊಂದೂವರೆ. ಪ್ರೆಸ್ಟನ್ನಿನಲ್ಲಿ ನನ್ನ ಮಿತ್ರ ರಮೇಶ್ ಗಾಂಧಿ ಅನ್ನುವರು ಬಂದಿರುತ್ತಾರೆ. ಅವರನ್ನು ನೀವು ಬಹು ಸುಲಭವಾಗಿ ಗುರುತಿಸಬಹುದು. ಬಿಳಿಯ ಕೂದಲಿನ ಗಣ್ಯವ್ಯಕ್ತಿ ಅವರು.ನೋಡಿದ ತಕ್ಷಣ ನಮಸ್ಕಾರ ಮಾಡೋಣ ಅನ್ನಿಸುವಂತಹ ವ್ಯಕ್ತಿತ್ವ. ರೇಲ್ವೇ ಸ್ಟೇಷನ್ನಿನ ಕಾರ್ ಪಾರ್ಕಿಗೆ ಹೋಗಿ ಅವರ ಮೊಬೈಲ್ ಗೆ ಫೋನ್ ಮಾಡಿ. ಅಂತ ವಾಸು ನನಗೆ ಮೊದಲೇ ಹೇಳಿದ್ದರು.

ರೈಲಿನಿಂದ ಇಳಿದು ಧೃಢವಾದ ಆತ್ಮ ವಿಶ್ವಾಸದಿಂದ ನಾನೂ ನನ್ನ ಮಗಳೂ ಕಾರ್ ಪಾರ್ಕಿನ ಕಡೆಗೆ ನಡೆದೆವು. ಸಣ್ಣಗೆ ತುಂತುರು ಮಳೆ ಬರುತ್ತಿತ್ತು. ಕಾರ್ ಪಾರ್ಕಿನಲ್ಲಿ ನಮಸ್ಕಾರ ಯೋಗ್ಯರಾದ ಯಾವ ವ್ಯಕ್ತಿಯೂ ಕಾಣಿಸಲಿಲ್ಲ. ಅಲ್ಲೇ ನಿಂತು ಅವರ ಮೊಬೈಲ್ ನಂಬರಿಗೆ ಫೋನ್ ಮಾಡಿದೆ. The person you are calling is not reachable ಅಂತ ಉತ್ತರ ಬಂತು. ಆಗಲೇ ನನಗೆ ಸಣ್ಣಗೆ ಬೆವರಲು ಶುರುವಾದದ್ದು. ಪುನಃ ಸ್ಟೇಷನ್ನಿನ ಮುಂಭಾಗಕ್ಕೆ ಹೋದೆವು. ಅಲ್ಲಿ ಎಲ್ಲಾ ಬಿಳಿಯ ಮುಖಗಳೇ. ಕೊನೆಗೆ ನನ್ನ ಮೊಬೈಲ್ ರಿಂಗಾಯಿತು. ಗಾಂಧಿ! ಎಲ್ಲಿದ್ದೀರಾ ನೀವು? ಸ್ಟೇಷನ್ನಿನ ಮುಂಭಾಗಕ್ಕೆ ಬನ್ನಿ ಅವರ ಕಾತರದ ಪ್ರಶ್ನೆ ಹಾಗೂ ಸಲಹೆ. ಸ್ಟೇಷನ್ನಿನ ಮುಂಭಾಗದಲ್ಲೇ ನಾವು ನಿಂತಿದ್ದೇವೆ. ಎಲ್ಲಿ ಕಾಣಿಸ್ತಾ ಇಲ್ಲವಲ್ಲಾ ಇಲ್ಲೇ ಇದ್ದೀವಲ್ಲಾ ಮುಂಭಾಗ ಅಂದರೆ ಟಿಕೆಟ್ ಮಾರ್‍ತಾ ಇರ್‍ತಾರಲ್ಲಾ ಆ ಜಾಗ . ನಾನು ಸುತ್ತ ಮುತ್ತಾ ಕಣ್ಣಾಡಿಸಿದೆ. ಟಿಕೆಟ್ಸ್ ಎಂಬ ಒಂದು ಬೋರ್ಡು ನಾವಿದ್ದ ಜಾಗದಿಂದ ಬಲಭಾಗಕ್ಕೆ ಒಂದು ಬಾಣವನ್ನು ಸೂಚಿಸುತ್ತಿತ್ತು. ಆ ದಿಕ್ಕಿನಲ್ಲಿ ನಡೆದೆವು.. ಟಿಕೆಟ್ ಬೂತಿನ ಮುಂದೆ ಗಾಂಧಿ ನಿಂತಿದ್ದರು. ನಮಸ್ಕಾರದ ನಂತರ ಅವರು ನಮಗೆ ಕನ್ನಡ ಕೂಟದ ಸಮಾರಂಭಕ್ಕೆ ಬರುತ್ತಿದ್ದ ಇನ್ನೊಬ್ಬ ಅತಿಥಿಣಿಯನ್ನು ಪರಿಚಯಿಸಿದರು. ಆಕೆಯ ಹೆಸರು ಆಯೇಷಾ ಹಜಾರಿಕಾ. ಆಕೆಯ ತಂದೆತಾಯಿಯರು ಅಸ್ಸಾಮಿನಿಂದ ಬ್ರಿಟನ್ನಿಗೆ ಬಹು ಹಿಂದೆ ವಲಸೆ ಹೋದವರು. ಬ್ರಿಟನ್ನಿನಲ್ಲೇ ಹುಟ್ಟಿಬೆಳೆದ ಆಯೇಷಾಗೆ ಇಪ್ಪತ್ತನಾಲ್ಕರ ಹರೆಯ. ಹವ್ಯಾಸ ಸ್ಟಾಂಡ್ ಅಪ್ ಕಾಮಿಡಿ. ಅಂದರೆ, ಈಚೆಗೆ ನಮ್ಮ ಕೃಷ್ಣೇಗೌಡ , ರಿಚ್ಚೀ ಮಾಡುಲ್ಲವೇ ಆರೀತಿ. ನನಗೋ ಕನ್ನಡ ಕೂಟದಲ್ಲಿ ಈಕೆ ಏನು ಮಾತನಾಡುತ್ತಾಳೆ ಅಂತ ಆಶ್ಚರ್ಯ. ಕೇಳೇಬಿಟ್ಟೆ. My routine is naturally in English. By the way what is Kannada? ಅಂತ ನನಗೇ ಮರು ಪ್ರಶ್ನೆ ಹಾಕಿದಳು.

ಕೆಂಡಲ್ ಸೇರಿದಾಗ ಒಂದು ಘಂಟೆ ಆಗಿತ್ತು. ಸಮಾರಂಭವನ್ನು ಕೆಂಡಲ್ ನ ಲೆಷರ್ ಸೆಂಟರಿನಲ್ಲಿ ಏರ್ಪಡಿಸಿದ್ದರು. ನಾವು ಅಲ್ಲಿಗೆ ಹೋದಾಗ ಕನ್ನಡ ಬಳಗ ಮುಂದೇನು ? ಎಂಬ ವಿಷಯದ ಬಗ್ಗೆ ಮುಕ್ತ ಚರ್ಚೆ ನಡೆಯುತ್ತಿತ್ತು. ಯುವ ಜನಾಂಗ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದು ಹಿರಿಯರ ಆಶೆ. ಯುವ ಜನಾಂಗ ತಮ್ಮ ಸ್ಕಾಟಿಷ್ ಅಥವಾ ಕಾಕ್ನಿ ಇಂಗ್ಲೀಷಿನಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸುವ ಯತ್ನ ನಡೆಸಿದ್ದರು. ಚರ್ಚೆಯೆಲ್ಲಾ ಇಂಗ್ಲೀಷಿನಲ್ಲೇ. ಅಷ್ಟು ಹೊತ್ತಿಗಾಗಲೇ ಊಟ ಸಿದ್ಧವಾದ ಸುಳಿವು ಸಿಕ್ಕಿದ ಕನ್ನಡಾಂಬೆಯ ಮಕ್ಕಳು ಬೂಫೆ ಮೇಜುಗಳತ್ತ ಧಾವಿಸಿದರು. ಸಧ್ಯ ಇಂಗ್ಲೀಷ್ ಸಂಸ್ಕೃತಿಯ ಪ್ರಭಾವದಿಂದಲೋ ಏನೋ ಮೇಜುಗಳ ಬಳಿ ವ್ಯವಸ್ಥಿತವಾದ ಕ್ಯೂ ರೂಪುಗೊಂಡಿತ್ತು.

ಊಟದ ನಂತರ ಪೂರ್ವಾಪರ ಎಂಬ ಕನ್ನಡ ಚಿತ್ರದ ಪ್ರದರ್ಶನ. ಆ ಅವಕಾಶದಲ್ಲಿ ನಾವು ನಮ್ಮ ಬೆಡ್ ಅಂಡ್ ಬ್ರೇಕ್‌ಫಾಸ್ಟ್ ಕೊಠಡಿಯನ್ನು ಭದ್ರಪಡಿಸಿಕೊಳ್ಳುವ ಯತ್ನ ನಡೆಸಿದೆವು. ನಮ್ಮ ಪುಣ್ಯಕ್ಕೆ ರಾಮಮೂರ್ತಿ ಮತ್ತು ಅಪ್ಪಾಜಿ ಗೌಡ ನಮ್ಮನ್ನು ತಮ್ಮ ಕಾರಿನಲ್ಲಿ ನಮ್ಮ ಜಾಗಕ್ಕೆ ಕರೆದೊಯ್ದರು.

ಐದು ಘಂಟೆಗೆ ಚಿತ್ರ ಮುಗಿಯಿತು. ಅನಂತರ ಐಸಿಐಸಿಐ ಬ್ಯಾಂಕಿನವರಿಂದ ಒಂದು ಪ್ರೆಸೆಂಟೇಷನ್. ಆ ಬ್ಯಾಂಕಿನವರೇ ಅಂದಿನ ಅತಿಥೇಯರು. ಹಾಗಾಗಿ ಅವರು ಊದಿದ ಪುರಾಣವನ್ನು ಸಾವಧಾನದಿಂದ ಕೇಳದೇ ಬೇರೇ ಮಾರ್ಗವಿರಲಿಲ್ಲ. ಬ್ಯಾಂಕ್ ಪ್ರೆಸೆಂಟೇಷನ್ನಿನ ತರುವಾಯ ನನ್ನ ಭಾಷಣ. ಅಲ್ಲಿ ಇದ್ದ ಯಾವ ತರುಣ ಯಾ ತರುಣಿಗೂ ಕನ್ನಡ ಅರ್ಥವಾಗುವಂತೆ ಕಾಣಿಸದಿದ್ದುದರಿಂದ ನಾನು ನನ್ನ ಭಾಷಣವನ್ನು ಇಂಗ್ಲೀಷಿನಲ್ಲೇ ಪ್ರಾರಂಭಿಸಿ ಕನ್ನಡದಲ್ಲಿ ಮುಗಿಸಿದೆ. ಯಾರೂ ಟೊಮ್ಯಾಟೋ , ಕೋಳೀಮೊಟ್ಟೆ ಎಸೆಯಲಿಲ್ಲ. ಭಾಷಣದ ನಂತರ ನಮ್ಮ ಹಾಸ್ಯಾತ್ಸವದ ಒಂದು ಕ್ಲಿಪ್ ತೋರಿಸಿದೆ. ಮೈಸೂರು ಆನಂದ್ ನಮ್ಮಲ್ಲಿ ನಡೆಸಿಕೊಟ್ಟ ಭಾಗ ಅದು. ಸಭಿಕರು ಅದನ್ನು ಮೆಚ್ಚಿಕೊಂಡಂತೆ ಕಾಣಿಸಿತು.

ಇದರ ನಂತರ ಮ್ಯಾಂಚೆಸ್ಟರಿನ ಭಾರತೀಯ ವಿದ್ಯಾಭವನದವರು ಹಲವು ನೃತ್ಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಎಂಟು ಘಂಟೆಗೆ ಆಯೇಷಾಳ ನಗೆ ಕಾರ್ಯಕ್ರಮ. ಆಕೆ ಸ್ಟೇಜಿಗೆ ಬಂದ ತಕ್ಷಣ ಹೇಳಿ ಕೇಳಿ ನಾನು ಏಷ್ಯನ್. ಮುಸ್ಲಿಂ ಬೇರೇ. ನನ್ನ ಕಂಡ್ರೆ ನಿಮಗೆ ಹೆದರಿಕೆ ಆಗೋದ್ರಲ್ಲಿ ಆಶ್ಚರ್ಯ ಏನೂ ಇಲ್ಲ ಬಿಡಿ. (ಹಲವು ವಾರಗಳ ಹಿಂದೆ ಹಲವು ಏಷ್ಯನ್ ಮುಸ್ಲಿಮರು ಲಂಡನ್ನಿನ ಟ್ಯೂಬ್ ಟೆನುಗಳಲ್ಲಿ ಬಾಂಬ್ ಸ್ಫೋಟಗೊಳಿಸಿದ್ದರು ಎಂಬುದು ನೆನಪಿರಬಹುದು) ಆದ್ರೇ ಏನೂ ಹೆದರ್ಕೋ ಬೇಡ್ರೀ. ನನ್ನ ಷೂ ನಲ್ಲಿ ಬಾಂಬ್ ಇರಿಸ್ಕೊಳ್ಳೋ ಅಷ್ಟು ಪೆದ್ದೀನೇ ನಾನು. ಅದೂ ಗೂಚಿ ಷೂಸು. ಮೊನ್ನೆ ತಾನೇ ನೂರೈವತ್ತು ಪೌಂಡ್ ಕೊಟ್ಟು ಕೊಂಡಿದ್ದು.................ಅಂತ ನಗೆ ಬುಗ್ಗೆ ಹಾರಿಸಿದಳು. ಅಲ್ಲಿ ಇಲ್ಲಿ ಹರಡಿದ್ದ ಯುವ ಜನತೆ ನಕ್ಕಿತು. ಬಹುದಿನಗಳ ನಂತರದ ಭೇಟಿಯ ಹರಟೆಗಳಲ್ಲಿ ಮಗ್ನರಾಗಿದ್ದ ಕನ್ನಡ ಕುವರ ಕುವರಿಯರು, ತಮ್ಮನ್ನು ಡಿಸ್ಟರ್ಬ್ ಮಾಡಿದ್ದಕ್ಕಾಗಿ ಸ್ಟೇಜಿನ ಕಡೆ ಒಂದು ಅಸಮಾಧಾನದ ದೃಷ್ಟಿ ಬೀರಿ ತಮ್ಮ ಮಾತುಕತೆಗಳ ಕಡೆ ತಿರುಗಿದರು. ಆಯೇಷಾಳ ಮಾತು ಮುಂದುವರಿಯಿತು. ನನಗೆ ಇಪ್ಪತ್ತನಾಲ್ಕು. ನನ್ನ ಅಣ್ಣನಿಗೆ ಇಪ್ಪತ್ತೆಂಟು. ನಮ್ಮ ತಂದೆತಾಯಿಯರಿಗೆ ನಮಗೆ ಇನ್ನೂ ಮದುವೆ ಆಗಿಲ್ಲ ಎಂಬ ಚಿಂತೆ. ಮೊನ್ನೆ ಏನಾಯ್ತೂ ಅಂತೀರಾ. ನಮ್ಮ ಅಪ್ಪ ನಮ್ಮಿಬ್ಬರನ್ನೂ ಕರೆದು ಇನ್ನು ಎಷ್ಟು ದಿನಾ ಅಂತ ಹೀಗಿರ್ತೀರಾ. ಇನ್ನಾದ್ರೂ ನೀವಿಬ್ರೂ ಮದುವೆ ಯೋಚ್ನೆ ಮಾಡ್ಬೇಕು. ಅಂತ ಆಗ್ರಹ ಪಡಿಸಿದ್ರು. ನಮ್ಮಿಬ್ಬರ್ಗೂ ಷಾಕು. ಒಪ್ಕೋತೀನಿ. ನಾವೆಲ್ಲಾ ಮಾಡರ್ನ್ ಜನರೇಷನ್. ಆದರೂ ಅಣ್ಣನನ್ನೇ ಮದುವೆಯಾಗೋದೂ ಅಂದ್ರೆ............ಕಸಿನ್ನಾದ್ರೂ ಆಗಿದ್ರೆ ....ಅಂತ ಆಯೇಷಾ ಪಾಸ್ ಮಾಡಿದಳು. ನಾನು ಜೋರಾಗಿ ನಕ್ಕೆ. ಮುಂದಿನ ಸಾಲಿನಲ್ಲಿ ಏಳು ಜನ , ಮೂರನೇ ಸಾಲಿನಲ್ಲಿ ಇಬ್ಬರು ನನ್ನ ಜೊತೆಗೂ ದನಿಗೂಡಿಸಿದರು. ಮಿಕ್ಕವರ ಅಸಮಾಧಾನದ ಕೂರಂಬು ನಮ್ಮ ಬೆನ್ನಿಗೆ ಚುಚ್ಚುತ್ತಿತ್ತು.

ಆಯೇಷಾ ಬೇಕಾದಷ್ಟು ನಗೆಬುಗ್ಗೆಗಳನ್ನು ಹಾರಿಸಿದಳು. ಮನೆ ಆಯ್ಕೆಯ ಬಗ್ಗೆ ಆಕೆ, ನನಗೆ ಕಾಮ್ಡೆನ್ನಿನಲ್ಲಿ ವಾಸ ಮಾಡೋಕ್ಕೆ ಇಷ್ಟ, ನನ್ನ ಬಾಯ್ ಫ್ರೆಂಡ್, ಕೆಂಟಿನಲ್ಲೇ ಮನೆ

ಮಾಡಿದ್ರೆ ಚೆನ್ನ ಅಂತಾನೆ. ಇಬ್ಬರೂ ಸಾವಧಾನವಾಗಿ ಚರ್ಚಿಸಿ ಒಂದು ಕಾಂಪ್ರೊಮೈಸ್ ನಿರ್ಧಾರಕ್ಕೆ ಬಂದೆವು. ಈಗ ಕಾಮ್ಡೆನ್ನಿನಲ್ಲೇ ನಮ್ಮ ಮನೆ ಇರೋದು

ಅವಳ ಕೊನೆಯ ನಗೆಹನಿ ಹೇಳುಕ್ಕೆ ಮುಂಚೆ ಸ್ವಲ್ಪ ತಯಾರಿ ಬೇಕು ಅನ್ನಿಸುತ್ತೆ. ಮೊದಲಿಗೆ ಅಲ್ಲಿನ ಹಾಸ್ಪಿಟಲ್ ಗಳಲ್ಲಿ ಸಾಮಾನ್ಯವಾಗಿ ಒಂದು ಉದ್ದದ ವೇಯ್ಟಿಂಗ್ ಲಿಸ್ಟ್ ಇರುತ್ತೆ. ಯಾವಾಗ ಡಾಕ್ಟರನ್ನು ಕನ್ಸಲ್ಟ್ ಮಾಡಬೇಕಾದರೂ ವಾರಗಟ್ಟಲೆ ಕಾಯಬೇಕು. ಇದು ಒಂದು ವಿಷಯ. ಇನ್ನೊಂದು ಅಲ್ಲಿನ ಮುಕ್ತ ಸಮಾಜದಲ್ಲಿ, ಲೈಂಗಿಕವಿಷಯಗಳ ಬಗ್ಗೆ ಇಲ್ಲಿನಂತೆ ಆಷಾಢಭೂತಿತನ ಇಲ್ಲ. ಮಿಕ್ಕದ್ದನ್ನು ಆಯೇಷಾ ಮಾತಿನಲ್ಲೇ ಕೇಳಿ. ಮೊನ್ನೆ ನನ್ನ ಬಾಯ್‌ಫ್ರೆಂಡ್ ಜೊತೆ ಮಾತಾಡ್ತಾ ಇದ್ದಾಗ ಅವ ಏನೋ ಕೇಳುಕ್ಕೆ ತಡವರಿಸ್ತಾ ಇದ್ದಹಾಗೆ ಕಾಣಿಸ್ತು.

ಏನೋ ಅದು , ಬಾಯಿ ಬಿಟ್ಟು ಹೇಳು ' ಅಂತ ಅವನನ್ನ ಉತ್ತೇಜಿಸಿದೆ. ಅವ 'ನನಗೊಂದು ಫ್ಯಾಂಟಸಿ ಇದೆ. ನೀನು ನರ್ಸ್ ತರಹಾ ಡ್ರೆಸ್ ಮಾಡ್ಕೊಂಡು ನನ್ನನ್ನ ಪ್ರೀತಿಸ್ಬೇಕು ' ಅಂದ. ನನಗೆ ಪಾಪ ಅನ್ನಿಸ್ತು. ಅವತ್ತೇನೇ ಅಂಗಡೀಗೆ ಹೋಗಿ ನನಗೆ ಸರಿಯಾಗಿ ಫಿಟ್ ಆಗೋ ಅಂತ ನರ್ಸ್ ಯೂನಿಫಾರಂ ಖರೀದಿಸಿ, ರಾತ್ರಿ ಮನೆಗೆ ಬಂದು, ಅದನ್ನ ಧರಿಸಿ, ಸೆಂಟ್ ಹಾಕ್ಕೊಂಡೆ. ಬಾಯ್‌ಫ್ರೆಂಡ್ ಬಂದ ತಕ್ಷಣ ಅವನನ್ನ ಐದು ತಿಂಗಳ ವೇಯ್ಟಿಂಗ್ ಲಿಸ್ಟ್‌ನಲ್ಲಿ ಹಾಕ್ಬಿಟ್ಟೆ.

ಮಾರನೆಯ ದಿನ ಅಕ್ಟೋಬರ್ ಎರಡು. ಭಾರತೀಯ ವಿದ್ಯಾಭವನದ ಸಂಗೀತಗಾರರು, ವೈಷ್ಣವ ಜನತೋ, ತೇನೇ ಕಹಿಯೇ ಹಾಡನ್ನು ಸುಶ್ರಾವ್ಯವಾಗಿ ಹಾಡಿದನಂತರ ಆ ಸಂಜೆಯ ಕಾರ್ಯಕ್ರಮ ಮುಗಿಯಿತು. ಹೊಸದಾಗಿ ಪರಿಚಯವಾದ ಗೆಳೆಯರಿಗೆಲ್ಲಾ ವಿದಾಯ ಹೇಳಿ ಆರತಿ ಮತ್ತು ನಾನು ಮನೆ ಸೇರಿದೆವು.



ವಿದ್ಯಮಾನಗಳು

✧ ಕು.ಶ.

ಒಂದು ವಾರದಲ್ಲಿಯೇ ಎರಡು ಭೂಮಿ ನಡುಗಿಸುವಂತಹ ಘಟನೆಗಳು. ಶುಕ್ರವಾರ ಬಿಹಾರದ ವಿಧಾನಸಭೆಯನ್ನು ವಿಸರ್ಜಿಸಿದ್ದು ಸಂವಿಧಾನಬಾಹಿರ ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪು ರೆಕ್ಟರ್ ಸ್ಕೇಲಿನಲ್ಲಿ ಎಂಟು ಅಂಕಗಳ ಭೂಕಂಪಕ್ಕೆ ಸಮಾನ ಎಂದು ನ್ಯಾಯ ಪಂಡಿತರು ಹೇಳುತ್ತಿದ್ದರು. ಅದರ ಮಾರನೆಯ ಶನಿವಾರ ಬೆಳಿಗ್ಗೆ ಜಮ್ಮು ಕಾಶ್ಮೀರದಲ್ಲಾದ 7.8 ಅಂಕಗಳ ಭೂಕಂಪ ಅದರಿಂದಾದ ಅಪಾರ ಹಾನಿ ವಿಚಾರ ನಿಮಗೆ ಗೊತ್ತೇ ಇದೆ. ಆದರೆ ಶುಕ್ರವಾರದ ಭೂಕಂಪ ಅತಿ ದೊಡ್ಡ ಸ್ಥಾನಗಳಲ್ಲಿರುವವರನ್ನು ಅವರ ಕುರ್ಚಿಗಳೊಂದಿಗೆ ಹಾರಿಸಿಕೊಂಡು ಹೋಗಬಹುದು ಎನ್ನುವ ನಿರೀಕ್ಷೆಗಳೆಲ್ಲಾ ಸುಳ್ಳಾಗಿವೆ. ಅತಿ ಶಕ್ತಿಯುತ ಎಂದು ಕಾಣಿಸಿದ ಭೂಕಂಪವೂ ರಾಜಕಾರಣಿಗಳಿಗೆ ಯಾವುದೇ ಹಾನಿಮಾಡಿಲ್ಲ. ಒಬ್ಬ ವ್ಯಂಗ್ಯಚಿತ್ರಕಾರ ಬರೆದಂತೆ ನಮ್ಮ ರಾಜಕಾರಣಿಗಳು can hide under their thick hides. ಅವರ ದಪ್ಪ ತೊಗಲುಗಳನ್ನು ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕ:.

★★★

ಬಹು ನಿರೀಕ್ಷಿತ ಮಾಹಿತಿ ಹಕ್ಕು ಕಾನೂನು ಈಗ ಜಾರಿಗೆ ಬಂದಿದೆ. ಸರ್ಕಾರದಿಂದ ಬೇಕಾದ ಮಾಹಿತಿಯನ್ನು ಬೇಕಾದಾಗ ಪಡೆಯಲು ಸಾಧ್ಯಮಾಡಿಕೊಡುವ ಈ ಹೊಸ ಕಾನೂನು ಶ್ರೀ ಸಾಮಾನ್ಯನಿಗೆ ಇನ್ನಷ್ಟು ಅಧಿಕಾರಕೊಡುತ್ತದೆ, ಆಡಳಿತ ನಡೆಸುತ್ತಿರುವವರನ್ನು ಪ್ರಜೆಗಳಿಗೆ ನೇರವಾಗಿ ಜವಾಬ್ದಾರರನ್ನಾಗಿ ಮಾಡುತ್ತದೆ, ಸರ್ಕಾರದ ವಿವಿಧ ಹಂತಗಳಲ್ಲಿರುವ ಭ್ರಷ್ಟಾಚಾರಕ್ಕೆ ಅಂಕುಶಹಾಕುತ್ತದೆ ಎನ್ನುವಂತಹ ದೊಡ್ಡದೊಡ್ಡ ನಿರೀಕ್ಷೆಗಳಿವೆ. ಈ ಕಾನೂನು ಜಾರಿಗೆ ಬಂದ ಒಂದು ವಾರದ ಮೇಲೆ ಒಬ್ಬ ಶ್ರೀ ಸಾಮಾನ್ಯ ಈ ಕಾನೂನಿನ ಬಗೆಗೆ ಹೆಚ್ಚಿನ ಮಾಹಿತಿ ಪಡೆಯಲು ವಿಧಾನಸೌಧದ ಕೋಣೆಯಿಂದ ಕೋಣೆಗೆ ಮೂರು ಪ್ರದಕ್ಷಿಣೆ ಹೊಡೆದನಂತೆ. ಪಾಪ ಅಲ್ಲಿದ್ದವರಲ್ಲಿ ಯಾರ ಹತ್ತಿರವೂ ಈ ಮಾಹಿತಿ ಹಕ್ಕು ಕಾನೂನಿನ ಬಗೆಗೆ ಮಾಹಿತಿಯಿರಲಿಲ್ಲ!

★★★

ನನ್ನದು ತಪ್ಪು ಎಂದು ಒಪ್ಪಿಕೊಳ್ಳುವವರು ಅಪರೂಪ. ಸದಾ ಕೋರೈಸುವ ಬೆಳಕಿನಲ್ಲಿರುವ ಮಾಧ್ಯಮಗಳಲ್ಲಿ ಅಂತಹವರು ಇನ್ನೂ ಅಪರೂಪ. ಈಚೆಗೆ ಲಕ್ಷ ಲಕ್ಷ

ರೂಪಾಯಿಗಳ ಬಹುಮಾನ ಕೊಟ್ಟು ಯುವಜನರನ್ನು ತಪ್ಪು ಹಾದಿಗೆ ಕೊಂಡೊಯ್ಯುತ್ತಿದೆ ಎನ್ನುವ ಟೀಕೆ ಎದುರಿಸುತ್ತಿರುವ ಒಂದು ಅನೈತಿಕ ಕಾರ್ಯಕ್ರಮ ನಡೆಸುತ್ತಿರುವವರು ತಮ್ಮ ತಪ್ಪನ್ನು ಒಪ್ಪಿಕೊಳ್ಳುವ ಅಪರೂಪದ ಪ್ರಾಮಾಣಿಕತೆ ತೋರಿಸಿದ್ದಾರೆ. ಅಲ್ಲಿ ಒಬ್ಬ ಡಾಕ್ಟರ್ ಸ್ಪರ್ಧಿ ಒಂದು ಪ್ರಶ್ನೆಗೆ ಕೊಟ್ಟ ಉತ್ತರ ತಪ್ಪು ಎಂದು ಬಿಗ್ ಬಿ ಹೇಳಿದರು. ಬಿಸಿಕುರ್ಚಿಯಲ್ಲಿ ಬೆವರು ಸುರಿಸುತ್ತಿದ್ದ ಡಾಕ್ಟರು ಹೌದು ತಪ್ಪು ಎಂದು ಒಪ್ಪಿಕೊಂಡೂಬಿಟ್ಟರು. ಸಕುಟುಂಬ ಸಪರಿವಾರವಾಗಿ ಬಂದಿದ್ದ ಡಾಕ್ಟರಿಗೆ ಡಾಕ್ಟರಿಕೆಗೇ ಸಂಬಂಧಿಸಿದ ಸರಳ ಪ್ರಶ್ನೆಗೆ ತಪ್ಪು ಉತ್ತರ ಕೊಟ್ಟಿದ್ದಕ್ಕೆ ತುಂಬಾ ನಾಚಿಕೆಯಾಗಿರಬೇಕು. ಮುಂದೆ ತಂಪಗೆ ಯೋಚಿಸಿದಾಗ ಅವರಿಗೆ ಅಲ್ಲಿ ಕೇಳಿದ ಪ್ರಶ್ನೆಗೆ ಎರಡು ಉತ್ತರ ಸಾಧ್ಯ ತಾವು ಕೊಟ್ಟ ಉತ್ತರವೂ ಅವರು ಹೇಳಿದ ಉತ್ತರವೂ ಸರಿ ಎಂದು ಗೊತ್ತಾಯಿತು. ಕಾರ್ಯಕ್ರಮವನ್ನು ನಡೆಸುವವರು ತಮ್ಮ ತಪ್ಪನ್ನು ಒಪ್ಪಿಕೊಂಡರು. ಆ ಡಾಕ್ಟರಿಗೆ ಇನ್ನೊಂದು ಅವಕಾಶಕೊಟ್ಟರು. ಮೊದಲು ಸೊನ್ನೆ ರೂಪಾಯಿ ಗಳಿಸಿದ ಡಾಕ್ಟರು ಎರಡನೆಯ ಬಾರಿ ಹಲವು ಲಕ್ಷ ಗೆದ್ದರು.

ಇಷ್ಟು ಉದ್ದ ಕತೆ ಹೇಳಿದ ಮೇಲೆ ನನಗೇ ಈಗ ಒಂದು ಸಂಶಯ. ಈ ಎಲ್ಲಾ ಪ್ರಸಿದ್ಧಿ ಪಡೆಯುವ ಹುನ್ನಾರೇ? ಜನರ ಗಮನ ಸೆಳೆಯಲು ಮಾಧ್ಯಮಗಳ ಜನ ಎಲ್ಲದಕ್ಕೂ ಸಿದ್ಧವಂತೆ- ಪ್ರಾಮಾಣಿಕವಾಗಿರಲೂ ಕೂಡ!

★★★

ನಮ್ಮಮ್ಮ ಹೇಳುತ್ತಿದ್ದ ಸಾವಿರಾರು ಗಾದೆಗಳಲ್ಲೊಂದು -ಹುಟ್ಟುಹುಟ್ಟುತಾ ಹುಲ್ಲೇಮರಿ ಬರುಬರುತಾ ಕತ್ತೆ ಮರಿ. ಇದು ನಮ್ಮ ಕನ್ನಡ ಚಾನೆಲುಗಳ ಮಹಾಧಾರಾವಾಹಿಗಳಿಗೆ ಹೇಳಿಮಾಡಿಸಿದಂತಹ ಮಾತು. ಸಾಧಾರಣವಾಗಿ ಎಲ್ಲಾ ಮೆಗಾ ಧಾರಾವಾಹಿಗಳೂ ಪ್ರಾರಂಭದಲ್ಲಿ ಹುಲ್ಲೇಮರಿಯಂತೆ ಕುಣಿಯುತ್ತಾ ನೆಗೆಯುತ್ತಾ ಮುಂದೆ ನಡೆಯುತ್ತವೆ. ಆದರೆ ಐವತ್ತು ಎಪಿಸೋಡು ಆದ ಕೂಡಲೆ ಕತ್ತೆಮರಿಯ ಮಂದಗತಿ. ಅದು ಸಾಧಾರಣ ಕತ್ತೆಯಲ್ಲ. ಆಕಡೆ ಇರುವ ಹುಲ್ಲುಕಂತೆ ಚೆನ್ನವೋ ಈ ಕಡೆ ಇರೋ ಹುಲ್ಲುಕಂತೆ ಚೆನ್ನವೋ ಎನ್ನುವ ಡೈಲೆಮಾದಲ್ಲಿ ಅತ್ತಲೂ ಹೋಗದೆ ಇತ್ತಲೂ ಹೋಗದೆ ನಡುವೆಯೇ ಓಡಾಡುತ್ತಿದ್ದ ಪ್ರಸಿದ್ಧ ಕತ್ತೆಯ ವಂಶಕ್ಕೆ ಸೇರಿದ ಕತ್ತೆ.

★★★

ಈಚೆಗೆ ಜೆಕೆ ರೌಲಿಂಗಳ Harry Potter and Half Blood Prince ಕೊಳ್ಳಲು ಬೆಂಗಳೂರಿನ ನಾಗರಿಕರು 80 ಲಕ್ಷ ರೂಪಾಯಿ ಖರ್ಚುಮಾಡಿದ್ದರು ಎನ್ನುವುದನ್ನು ಓದಿದ್ದೀರಿ. ಹನಿಹನಿಗೂಡಿದರೆ ಹಳ್ಳ. ಕಳೆದ ಆರು ವರ್ಷಗಳಲ್ಲಿ ಪಾಟರ್ ಪುಸ್ತಕಗಳಿಂದ ಲೇಖಕಿ 4500 ಕೋಟಿ ರೂಪಾಯಿ (57.9 ಕೋಟಿ ಪೌಂಡ್) ಆದಾಯ ಗಳಿಸಿದ್ದಾಳಂತೆ. ಆಕೆ ಆರೇ ತಿಂಗಳಿನಲ್ಲಿಯೇ ಈ ಹೊಸ ಪುಸ್ತಕದ ಒಂದೊಂದು ಪದಕ್ಕೂ 45000 ರೂಪಾಯಿಯಂತೆ ಗಳಿಸಿದ್ದಾಳಂತೆ. ಸುವರ್ಣಾಕ್ಷರಗಳು ಎಂದು ಹೇಳುವುದು ಇದೇ ಇರಬೇಕು.

★★★

ಹಾಸ್ಯಬ್ರಹ್ಮ ಟ್ರಸ್ಟ್

ಕೊರವಂಜಿ ಅಪರಂಜಿ ಟ್ರಸ್ಟ್

ಸಾದರಪಡಿಸುವ

ಡಾ॥ ಬಿ.ಜಿ.ಎಲ್. ಸ್ವಾಮಿ ಸಂಸ್ಮರಣೆಯ



ಹಾಸ್ಯೋತ್ಸವ

25-12-2005 ರಂದು ಭಾನುವಾರ

ಜಯನಗರದ ಎಚ್.ಎನ್. ಕಲಾಕ್ಷೇತ್ರದಲ್ಲಿ

ಸರ್ವರಿಗೂ ಆದರದ ಸ್ವಾಗತ

ಕೃಷ್ಣ ಸುಬ್ಬರಾವ್
ಸಂಚಾಲಕರು

ಬೇಲೂರು ರಾಮಮೂರ್ತಿ
ಸಂಚಾಲಕರು

ಸಂಪೂರ್ಣ ವಿವರಗಳಿಗಾಗಿ ಡಿಸೆಂಬರ್ ಸಂಚಿಕೆಯ ಅಪರಂಜಿ ನೋಡಿ

ಯಾರಾಗ್ತೀರಾ - ಲಕ್ಷಪತೀ???

✧ ಸೀ.ಆರ್. ಸತ್ಯ

ಕನ್ನಡ ಚಾಮುಂಡಿ ಛಾನಲ್‌ನಲ್ಲಿ ಪ್ರತಿ ಭಾನುವಾರ ಪ್ರಸಾರವಾಗುವ "ಯಾರಾಗ್ತೀರಾ - ಲಕ್ಷಪತೀ?" ಸರಣಿಯಲ್ಲಿ ಕಳೆದವಾರ ನನಗೇ ಒಂದು ಲಕ್ಷ ರೂಪಾಯಿ ಲಭಿಸಿದ್ದು! ನನ್ನಂತಹ ಪೆಕರನಿಗೆ ಹೇಗೆ ಒಂದು ಲಕ್ಷ ರೂಪಾಯಿ ಸಿಕ್ತು? ಅಂತ ಉದ್ವೇಗಭರಿತ ಪ್ರಶ್ನೆ ನಿಮ್ಮ ಮನಸ್ಸಿನಲ್ಲಿ ಈಗಾಗಲೇ ಎದ್ದಿರಬೇಕು. ಸಾವಧಾನ! ಹೇಳ್ತೀನಿ ಕೇಳಿ.

ನಮ್ಮ ಹೋಸ್ಟು, ದ್ವಿಭಾಷೀ ನಟ (ಅಂದರೆ ಮಲೆಯಾಳಂ, ಕನ್ನಡ) ಆಂಥೋನಿ ಅಚ್ಚನ್! (ನೋಡೋದಕ್ಕೆ ಅಮಿತಾಬ್ ಬಚ್ಚನ್ ತರಹಾನೇ ಇದ್ದ)

ಪ್ರಿಲಿಮಿನರಿ ರೌಂಡ್‌ಗೆ ನಾವು ಐದು ಜನ ಬಕರಾಗಳು ಕೂತಿದ್ವಿ. ಜೊತೆಗೆ ನಮ್ಮ ನಮ್ಮ respective ಗಂಡಂದ್ರು ಬೇರೆ, ಹೆಂಡ್ತೀರೂ ಬೇರೆ. ಆಂಥೋನಿ ಅಚ್ಚನ್ (ಇನ್ನು ಮೇಲೆ ಇವನ್ನ ಆ.ಅ. ಅಂತ ಕರೀತೀನಿ) ಎಲ್ಲರನ್ನೂ ಸ್ವಾಗತಿಸಿದ. ಛಾನಲ್ ಬಾಯ್ಸ್ ಎಲ್ಲರಿಗೂ ಕರತಾಡನ ಮಾಡಿ ಅಂತ cue ಕೊಟ್ರು. ಎಲ್ಲರೂ ಚಪ್ಪಾಳೆ ಹೊಡೆದಿದ್ದೂ ಹೊಡೆದಿದ್ದೇ. ಆ.ಅ. ಥ್ಯಾಂಕ್ಯೂ, ಥ್ಯಾಂಕ್ಯೂ ಅಂತ ಒಂದು ಹತ್ತು ಸಲ ಒದರಿ, ಎರಡು ಕೈಗಳನ್ನು ಗಟ್ಟಿಯಾಗಿ ಕಟ್ಟಿಕೊಂಡು (original ಅಮಿತಾಬ್ ಬಚ್ಚನ್ ಸ್ಟೈಲ್‌ನಲ್ಲಿ) Don't go away! ಈಗೊಂದು ಚಿಕ್ಕ ವಿರಾಮ ಅಂತ ಅಂದ. ವಿರಾಮದಲ್ಲಿ actual ಆಗಿ ಅಮಿತಾಬ್ ಬಚ್ಚನ್ ಶಾರುಕ್ ಖಾನ್‌ರೆಲ್ಲಾ ಪರದೆ ಮೇಲೆ ಬಂದು ಚಿಕ್ಕ ಮಕ್ಕಳಿಗೆ ಹೇಗೆ ಪೋಲಿಯೋ ಡ್ರಾಪ್ಸ್ ಕುಡಿಸೋದು, ಅದೇ ರೀತಿ ದೊಡ್ಡ ಮಕ್ಕಳು ಹೇಗೆ 'ಪೆಪ್ಸಿ' ಕುಡಿಯೋದು ಅಂತ ತೋರಿಸಿ ಕೊಟ್ಟರು. ಅದಾದ ನಂತರ ಒಬ್ಬ ಸರದಾರಜಿ ಏರ್‌ಪೋರ್ಟ್‌ನಲ್ಲಿ ಆಗತಾನೇ ಇಳಿದು ಬಂದ ಒಬ್ಬ ಯುವತಿಯನ್ನು ಚೆನ್ನಾಗಿ ತಬ್ಬಿಕೊಂಡು, ಪ್ರೇಕ್ಷಕರ ಕಡೆ ತಿರುಗಿ, ಅದ್ಯಾವುದೋ ಬಿಸ್ಕಿಟ್ ಪ್ಯಾಕೆಟ್‌ನ ನೀವೂ ತಿನ್ನಿ ಅಂತ ಅಂದ. ಅಷ್ಟು ಹೊತ್ತಿಗೆ ಆರಾಮ ಮುಗೀತು.

ಛಾನಲ್ ಬಾಯ್ಸ್ cue ಕರತಾಡನ ಆ.ಅ. ಕೈ ಕೈ ಹಿಸಿಕಿಕೊಂಡು ಥ್ಯಾಂಕ್ಯೂ ಅಂದ. ಇನ್ನೊಂದು ಆರಾಮ ಬಂತು ಅಂತ ನಾವೆಲ್ಲಾ ಸ್ವಲ್ಪ ಸಡಿಲ ಆದ್ವಿ. ಆದರೆ ತಕ್ಷಣ ಆ.ಅ. "ಲೇಡೀಸ್ ಎಂಡ್ ಜಂಟಲ್‌ಮನ್, ಪ್ರಿಲಿಮಿನೆರೀಸ್!" ಅಂತ ಕೂಗಿದ (ಛಾನಲ್ ಬಾಯ್ಸ್ cue ಕರತಾಡನ).

''ಈಗ ನಿಮ್ಮ ನಿಮ್ಮ ಕಂಪ್ಯೂಟರ್ ಕಡೆ ನೋಡಿ. ಐದು ಸಂಖ್ಯೆಗಳಿವೆ. 1,2,3,4 ಮತ್ತು 5, ಕ್ರಮಬದ್ಧವಾಗಿ ಕಮ್ಮಿಯಿಂದ ಜಾಸ್ತಿಯಾಗೋ ಹಾಗೆ ಯಾರು ಈ ಐದು ಸಂಖ್ಯೆಗಳನ್ನು ಜೋಡಿಸ್ತೀರೋ ಅವರೇ ವಿಜಯಿತರು!'' ಅಂತ ಕೂಗಿದ. ನಾವು ಐದು ಸ್ಪರ್ಧಿಗಳೂ ತಕ್ಷಣ ಕಂಪ್ಯೂಟರ್ ಕೀಗಳನ್ನು ಒತ್ತಿದೆವು. ಒತ್ತಿದ ರಭಸದಲ್ಲೋ ಏನೋ, ಎಲ್ಲಾ ಕಂಪ್ಯೂಟರ್ ಸ್ಕ್ರೀನುಗಳೂ ಬೆಳ್ಳಗೆ blank ಆಗಿ ಹೋದ್ವು! ಆ.ಅ. ಮುಖ ಪೆಚ್ಚಾಯ್ತು. ಏನು ಮಾಡೊಕ್ಕೆ ಗೊತ್ತಾಗದೆ "Don't go away! ಈಗೊಂದು ಚಿಕ್ಕ ವಿರಾಮ'' ಅಂತ ಒಳಗೆ ಓಡಿ ಹೋದ. ಸರಿ ಮುಂದೆ ಜಾರಿದ ಕೆಲವು ನಿಮಿಷಗಳಲ್ಲಿ ಅ.ಬ.; ಶಾ.ಖಾ.; ಸರದಾರಜಿ ಇವರುಗಳು ಮಾಮೂಲಿ ಪೋಲಿಯೋ ಡ್ರಾಪ್ಸ್, ಪೆಪ್ಸಿ ಮತ್ತು ಬಿಸ್ಕಟ್ ಬಗ್ಗೆ ನಮಗೆಲ್ಲಾ ತಿಳಿ ಹೇಳಿದ್ರು. ನಂತರ ಮಾಮೂಲಿ ಛಾನಲ್ ಬಾಯ್ಸ್ cue ಕರತಾಡನ ಆಯ್ತು. ಆ.ಅ. ಬಂದು ಥ್ಯಾಂಕ್ಯೂ ಒದರಿ, ''ಎಲ್ಲಾ ವೀಕ್ಷಕರಲ್ಲೂ ಸ್ಪರ್ಧಿಗಳಲ್ಲೂ ಕ್ಷಮೆ ಕೋರುತ್ತೇವೆ. Software ಪ್ರಾಬ್ಲಮ್ಮು. ಹಾಗಾಗಿ ಈಗ ಲಕ್ಕಿ ಡಿಪ್ ಮಾಡ್ತೀವಿ. ಅದರಲ್ಲಿ ಯಾರು ಗೆಲ್ಲುತ್ತಾರೆ ಅವರೇ ಫೈನಲ್ಸ್ ಅಭ್ಯರ್ಥಿ'' ಅಂದ.

ತಕ್ಷಣ ಒಬ್ಬ ಯುವತಿ ಒಂದು ಬಕೆಟ್‌ನಲ್ಲಿ ಚೀಟಿಗಳನ್ನ ತಂದು ನಮ್ಮ ಮುಂದೆ ಹಿಡಿದಳು, ನಾವೆಲ್ಲಾ ಒಂದೊಂದು ಚೀಟಿ ಪಿಕ್ ಮಾಡಿದ್ವಿ. ಆ.ಅ. ಬಂದು ಎಲ್ಲರ ಚೀಟಿಗಳನ್ನೂ ತೆಗೆದು ನೋಡಿದ. ಸಸ್‌ಪೆನ್ಸೋ ಸಸ್‌ಪೆನ್ಸು. ಕೊನೆಗೆ ನನ್ನ ಬಲಗೈನ ಮೇಲಕ್ಕೆತ್ತಿ ''ಲೇಡೀಸ್ ಎಂಡ್ ಜಂಟಲ್‌ಮನ್, ವಿನ್ನರ್ ಆಫ್ ಪ್ರಿಲಿಮಿನರೀಸ್! ಮಿಸ್ಟರ್ ಕೋದಂಡೂ ಫ್ರಮ್ ಚೆನ್ನರಾಯಪಟ್ಟಣ!'' ಅಂತ ಕೂಗಿದ (ಛಾನಲ್ ಬಾಯ್ಸ್ cue ಕರತಾಡನ). ಸರಿ, ನಾನು ಹೋಗಿ ಅವನ ಮುಂದೆ ಕಟಕಟೆಯಲ್ಲಿ ಕೂತೆ. ''ಮಿಸ್ಟರ್ ಕೋದಂಡೂ ಅವರು ಅವರ ಶ್ರೀಮತಿಯವರ ಜೊತೆ ಬಂದಿದ್ದಾರೆ. ಶ್ರೀಮತಿ ಸುಭದ್ರಮ್ಮ ಕೋದಂಡೂ ಅವರಿಗೆ ಒಂದು ದೊಟ್ಟ ಚಪ್ಪಾಳೆ ಸ್ವಾಗತ ಕೊಡಿ'' ಅಂತ ಅಂದ. ತಕ್ಷಣ (ಛಾನಲ್ ಬಾಯ್ಸ್ ಕೃಪೆ) ಭಾರೀ ಕರತಾಡನ ಆಯ್ತು. ಪಾಪ, ನನ್ನ ಹೆಂಡ್ತಿ ಮುಖ ಟೀ.ವಿ.ಯಲ್ಲಿ ಬರೋದಕ್ಕೆ ಮುಂದೆ ''Don't go away! ಈಗೊಂದು ವಿರಾಮ'' ಅಂತ ಆ.ಅ. ಹೇಳಿದ, ಸರಿ, ವಿರಾಮ ಆದ ನಂತರ (ಪೋಲಿಯೋ ಡ್ರಾಪ್ಸ್, ಪೆಪ್ಸಿ, ಬಿಸ್ಕಟ್, ಕರತಾಡನ) ಮತ್ತೆ ಬಂದ ಆ.ಅ. ಬೇರೆ ಬಟ್ಟೆ ಬದಲಾಯಿಸಿದ್ದ!

All right, Mr. Kodandu ಮೊದಲನೇ ಪ್ರಶ್ನೆ: ಇದರಲ್ಲಿ ಯಾವುದು ಸರಿ ಅಂತ ಹೇಳಿ:

ಎ. ಕಾವೇರಿ ನದಿ ಕೇರಳದಲ್ಲಿ ಹುಟ್ಟಿ ಅರೇಬಿಯನ್ ಸಮುದ್ರ ಸೇರುತ್ತೆ.

ಬಿ. ಕಾವೇರಿ ಕರ್ನಾಟಕದಲ್ಲಿ ಹುಟ್ಟಿ ಬಂಗಾಳ ಕೊಲ್ಲಿಗೆ ಸೇರುತ್ತೆ.

ಸಿ. ಕಾವೇರೀಲಿ ನೀರಿಲ್ಲ; ಎಲ್ಲಿ ಹುಟ್ಟುತ್ತೆ ಅಂತ ತಿಳ್ಕೊಳ್ಳೋದು ಕಷ್ಟ.

ಡಿ. ಕಾವೇರಿ ಕೊಡಗಲ್ಲಿ ಹುಟ್ಟಿ ಮೆಟ್ಟೂರು ಡ್ಯಾಮ್‌ನಲ್ಲಿ ಐಕ್ಯವಾಗುತ್ತೆ.

ನಾನು ''ಸಿ'' ಅಂತ ಅಂದೆ. ಕಂಪ್ಯೂಟರ್ ಸಾರ್ ಸರಿಗಿದೆಯೇ ಹೇಳೀ ಸಾರ್ ಅಂದ ಆ.ಅ. ಥಟ್ ಅಂತಾ ಕಂಪ್ಯೂಟರ್ ಇನ್ನೊಂದು ಸಲ ಕೈ ಕೊಡ್ತು. ಸ್ಕ್ರೀನ್ ಎಲ್ಲಾ ಬೆಳ್ಳಗಾಗಿ ಕಪ್ಪಗಾಯ್ತು!

''ಸಾಫ್ಟ್‌ವೇರು ಪ್ರಾಬ್ಲಮ್ಮು. ಪರವಾಗಿಲ್ಲ, ನಾನು ಈಗ ಟಾಸ್ ಹಾಕ್ತೀನಿ. ಹೆಡ್ or tails ಮಿ. ಕೋದಂಡೂ...?'' ಅಂತ ಒಂದು ರೂಪಾಯಿ ನಾಣ್ಯವನ್ನ ಆ.ಅ. ಹೊರಗೆ ತೆಗೆದ, ''ಟೈಲ್ಸ್'' ಎಂದೆ. Toss ಮಾಡಿದ. ನೋಡಿದ. ಅಮಿತಾಬ್ ಬಚ್ಚನ್ Style ಎರಡು ನಿಮಿಷ ಸಸ್‌ಪೆನ್ಸು! ''ಮಿಸ್ಟರ್ ಕೋದಂಡೂ ಕರೆಕ್ಟಾಗಿ ಹೇಳಿದರು, ಅವರಿಗೆ 10,000 ರೂಪಾಯಿ ಸಿಕ್ಕಿದೆ! ಎಲ್ಲರೂ ಹೊಡೀರೀ ಚಪ್ಪಾಳೇನಾ!!'' ಅಂತ ಕೂಗಿದ. ಕೈನಲ್ಲಿ ಒಂದು ಚೆಕ್‌ಬುಕ್ ಇಟ್ಕೊಂಡಿದ್ದ, ಅಲ್ಲೇ Sign ಮಾಡಿ ಕೊಟ್ಟ. ಅಷ್ಟೊತ್ತಿಗೆ ಟೀ.ವಿ. ಚಿಗರಿಕೊಂಡ್ತು. ಅದಕ್ಕೋ ಏನೋ ಇನ್ನೊಂದು ವಿರಾಮ ಹೇಳ್ದ - followed by ಪೋಲಿಯೋ ಪೆಪ್ಸಿ... ಬಿಸ್ಕಿಟ್... ಕರತಾಡನ.

ನಂತರ ಆದ ಘಟನೆಗಳೆಲ್ಲಾ ಈಗ ಮನಸಿನ ತರಹ ತೋರುತ್ತೆ. 20,30,40,50, 60,70,80,90 ಸಾವಿರ ಹಾಗೂ ಲಕ್ಷದ ಹಂತದವರೆಗೂ ಇದೇ ಕತೆ! ನಾನು ಒಂದು ಉತ್ತರ ಹೇಳ್ತೀನಿ; ಆ.ಅ. ಕಂಪ್ಯೂಟರ್ ಸಾರ್‌ನ ಕೇಳ್ತಾನೆ; ಅದೇ ಸಮಯಕ್ಕೆ Software down en!! coin ಟಾಸ್ಸೂ! ನಾನು ಟೈಲ್ಸು! ಯಾಗಲೂ ನಾನೇ ವಿಜಯಿ! ಆದರೆ ಒಂದು ವಿಷಯ; ಪ್ರಶ್ನೆಗಳು ಕಷ್ಟವೇ ಆಗಿದ್ದವು. ಉದಾ:

- ಚಾಮುಂಡಿ ಬೆಟ್ಟ ಯಾವ ರಾಜ್ಯದಲ್ಲಿದೆ? ((ಎ) ಮೇಘಾಲಯ, (ಬಿ) ಉತ್ತರ ಪ್ರದೇಶ, (ಸಿ) ಕರ್ನಾಟಕ, (ಡಿ) ಬೆಂಗಾಲ)

- ಅತ್ಯಂತ ಹೆಚ್ಚಾಗಿ ಕನ್ನಡ ಎಲ್ಲಿ ಮಾತಾಡ್ತಾರೆ? ((ಎ) L.A. ಅಮೇರಿಕಾ (ಬಿ) ಕೋಲಾರ - ಕರ್ನಾಟಕ, (ಸಿ) ಬೆಂಗಳೂರು - ವೈಟ್‌ಫೀಲ್ಡ್ (ಡಿ) ಡೆಲ್ಲಿ - ಕರ್ನಾಟಕ ಸಂಘ)

- ಇವುಗಳಲ್ಲಿ ಯಾವುದಕ್ಕೆ ಬೆಲೆ ಹೆಚ್ಚು? ((ಎ) 1/4 ಕೆ.ಜಿ. ಕಾಫೀಪುಡಿ, (ಬಿ) ಒಂದು ಲೀಟರ್ ಪೆಟ್ರೋಲ್ (ಸಿ) ಒಂದು ಜೊತೆ ಹವಾಯಿ ಚಪ್ಪಲಿ, (ಡಿ) ಆಟೋರಿಕ್ಷಾವಿನ ಕನಿಷ್ಟ ದರ)


- ಹಿಂದಿ ಸಿನಿಮಾ 'ಆವೋ ಮೇರಾ ಜಾನ್' ನಲ್ಲಿ ಪ್ರಸಿದ್ಧ ನೃತ್ಯದಲ್ಲಿ ಕುಣಿದ ಪ್ರಖ್ಯಾತ ತಾರೆಯ ಹೆಸರೇನು? ((ಎ) ಚಿಮ್ಮೀ, (ಬಿ) ರಿಮ್ಮೀ, (ಸಿ) ಕಮ್ಮೀ, (ಡಿ) ಮಮ್ಮೀ)

ಒಟ್ಟಿನಲ್ಲಿ ಹೀಗೆ ಒಂದು ಲಕ್ಷ ರೂಪಾಯಿ ಚೆಕ್‌ನ ಸಂಪಾದಿಸಿಕೊಂಡೆ ನೋಡಿ. ಆ.ಅ. ಎಲ್ಲರಿಗೂ ಚಪ್ಪಾಳೆ ತಟ್ಟಲು ಹೇಳಿ ನನ್ನ ಹೆಂಡತಿಗೂ ಅಭಿನಂದಿಸಿದ. ಕ್ಯಾಮರಾ ಅವಳ ಮುಖ ತೋರಿಸುವುದರೊಳಗೆ Don't go away! come again next week!! ಅಂತ ವಿದಾಯ ಹೇಳಿ ಅಲ್ಲಿಂದ ಕಾಲ್ಕಿತ್ತ.

ಸ್ಟುಡಿಯೋನಿಂದ ಹೊರಬಂದೆ. ಜನರೆಲ್ಲಾ ಕರಗಿಹೋದ ಮೇಲೆ, ಸ್ಟುಡಿಯೋ ಹಿಂದುಗಡೆಯಿಂದ ತಲೆ ಮರೆಸಿಕೊಂಡು ಓಡಾಡೋ ಕಳ್ಳನ ತರಹ ಮೆಲ್ಲನೆ ನನ್ನ ಹತ್ತಿರ ನನ್ನ ಚಡ್ಡಿ ದೋಸ್ತಿ - ವೆಂಕ್ಟು ಅವನೂ ಚೆನ್ನರಾಯಪಟ್ಟಣದವನೇ - ಬಂದು, ನನ್ನ ಕೈ ಕುಲುಕಿ ''congrats ಮುಂಡೇದೆ. ಕೊಡು ಈಗ ನನ್ನ ಪಾಲು'' ಅಂದ. ಈ ಚೆಕ್‌ನ ಕ್ಯಾಶ್

ಮಾಡಿಸ್ಕೊಂಡಾದ ಮೇಲೆ ಅದರಲ್ಲಿ ನಿನಗೆ ಐವತ್ತು ಸಾವಿರ ನಾ ಕೊಡ್ತಾ ಇದೀನಿ ಕಣಮ್ಮ - ನಮ್ಮ ಪ್ಲಾನು ಪ್ರಕಾರ ಅಂದೆ, ಗುಡ್! ಅಂದ. ನಾನು "ಅಂದ್ಹಾಗೆ. ನನ್ನ ಉತ್ತರ ಬರೋ ಸಮಯಕ್ಕೆ ಸಾಫ್ಟ್‌ವೇರೇ ಗೋತಾ ಹೊಡೆಸಿದ್ದೇನೋ ಅರ್ಥವಾಯ್ತು. ಆದರೆ ಆ ಆಂಥೋನಿ ಅಚ್ಚನ್ ಬಡ್ಡೀಮಗ ಟಾಸ್ ಹಾಕ್ದಾಗಲೆಲ್ಲಾ ನಾನು ಟೈಲ್ಸ್! ಅಂತಾ ಯಾವಾಗಲೂ ಗೆಲ್ತಿದ್ದನಲ್ಲಾ, ಅದು ಹೇಗೆ ನಿಭಾಯಿಸಿದೆ?" ಅಂತ ಕೇಳ್ದೆ. "ಸಾಫ್ಟ್‌ವೇರ್ ಗೋತಾ ಆದ್ಮೇಲೆ ಆ.ಅ.ಗೆ ಏನ್ಮಾಡ್ಬೇಕೂ ಅಂತ ತಿಳೀಲಿಲ್ಲ, ನಾನೇ ಟಾಸ್ ಹಾಕೋ ideaನ ವಿರಾಮದ ಟೈಮ್‌ನಲ್ಲಿ ಅವನಿಗೆ ಹೇಳಿದ್ದು. ಅದಕ್ಕೆ ತಕ್ಕ ಹಾಗೆ ನಾನೇ ಅವನಿಗೆ ಈ ರೂಪಾಯಿ ನಾಣ್ಯ ಕೊಟ್ಟೆ. ಇದು ಖೋಟಾ ನಾಣ್ಯ ಕಣೋ ಮುಂಡೇದೇ. ಎರಡೂ ಕಡೇನೂ ಟೈಲ್ಸ್‌ಏ ಇರೋದು! ನಡಿ, ನಿನ್ನ ಆ Poor ಹೆಂಡ್ತೀನೂ ಕರಿ, ಎಲ್ಲಾರೂ ಹೋಗಿ ಸೆಲಿಬ್ರೇಟ್ ಮಾಡೋಣ" ಅಂದ.

ವೆಂಕ್ಟು ಯಾರು ಅಂದ್ರಾ? ಸ್ಟುಡಿಯೋನಲ್ಲಿ ಟೆಕ್ನಿಕಲ್ ಅಸಿಸ್ಟೆಂಟು. ಅವನೇ "ಕಂಪ್ಯೂಟರ್ ಸಾರ್"ನಲ್ಲಿರೋ ಸಾಫ್ಟ್‌ವೇರ್‌ನ ಕಂಟ್ರೋಲ್ ಮಾಡೋನು! ನಮ್ಮ ಚನ್ನರಾಯಪಟ್ಟಣದವನೇ!



"ಫೋನ್ ಮಾಡಿದ್ರೆ, ಆನ್ಸರಿಂಗ್ ಮೆಷೀನ್ ಉತ್ತರಿಸ್ತಾ ಇದೆಯಲ್ಲಾ ಸಾರ್!"

ಅಳಿಲು ಸೇವೆ

✧ ಎಚ್. ಗೋಪಾಲಕೃಷ್ಣ

ಒಂದು ಸ್ಪರ್ಧೆ. ಈ ಸ್ಪರ್ಧೆಗಾಗಿಯೇ ಆ ಹುಡುಗಿ ದೂರದ ಊರಿನಿಂದ ಬಂದಿತ್ತು. ಸ್ಪರ್ಧೆಯ ವಿಶೇಷ ಏನಿಲ್ಲ - ಯಾರ ಕೂದಲು ಉದ್ದಕ್ಕಿರುವುದೋ ಅವರೇ ವಿಜೇತರು - ಅಷ್ಟೇ. ದೂರದಿಂದ ಬಂದಿದ್ದ ಹುಡುಗಿಯಂತೂ ಈ ಸ್ಪರ್ಧೆಗೆ ಬಹಳ ಮೊದಲಿನಿಂದಲೇ ತಯಾರಿಯನ್ನು ನಡೆಸಿದ್ದಳು. ಹಲವಾರು ವರ್ಷಗಳಿಂದ ತನ್ನ ತಲೆ ಕೂದಲನ್ನು ಬಹಳ ಜೋಪಾನವಾಗಿ ಪೋಷಿಸಿಕೊಂಡಿದ್ದಳು. ಕೂದಲು ಉದ್ದ ಬೆಳೆಯಲು ಏನೇನು ಆರೈಕೆಗಳನ್ನು ಮಾಡಬೇಕೋ ಅವುಗಳನ್ನೆಲ್ಲವನ್ನೂ ಚಾಚೂ ತಪ್ಪದ ಹಾಗೆ ಪಾಲಿಸಿದ್ದಳು. ತನ್ನ ತಾಯಿಯ ಸಲಹೆಯಂತೆ ತಲೆಗೆ ಶಾಂಪೂ ಹಾಕಿ ತೀಡಿಕೊಂಡಿದ್ದಳು, ವೈದ್ಯರ ಸಲಹೆಯಂತೆ ತಲೆ ಹೊಟ್ಟನ್ನು ಹೋಗಿಸಲು ಅಳಲೆ ಕಾಯಿ ರಸವನ್ನು ತಲೆಗೆ ಹಾಕಿ ಉಜ್ಜಿಕೊಳ್ಳುತ್ತಿದ್ದಳು, ಅಕ್ಕ ಪಕ್ಕದವರ ಸಲಹೆಯಂತೆ ಕೂದಲು ಸೊಂಪಾಗಿ ಉದ್ದವಾಗಿ ಬೆಳೆಯಲು ಏನೇನು ಆರೈಕೆಗಳಾಗಬೇಕೋ ಅವೆಲ್ಲವನ್ನೂ ಸಮಗ್ರವಾಗಿ ಪಾಲಿಸಿಕೊಂಡು ಬಂದಿದ್ದಳು. ಇವಳ ಇಷ್ಟು ವರ್ಷದ ಶ್ರಮದಿಂದಾಗಿಯೇ ತಲೆ ಕೂದಲು ಸೊಂಪಾಗಿ ಬೆಳೆದಿತ್ತು.

ಸ್ಪರ್ಧೆ ಆರಂಭವಾಯಿತು. ಇವಳದೇ ವಯಸ್ಸಿನ ಸಾವಿರಾರು ಹುಡುಗಿಯರು ಬಣ್ಣ ಬಣ್ಣದ ಬಟ್ಟೆ ಧರಿಸಿ ಚಿತ್ರ ವಿಚಿತ್ರವಾಗಿ ಅಲಂಕರಿಸಿಕೊಂಡು ಬಂದಿದ್ದರು. ಪ್ರತಿಯೊಬ್ಬರೂ ಹುಮ್ಮಸ್ಸಿನಿಂದ ಕೂಡಿದ್ದರು. ಪ್ರತಿಯೊಬ್ಬರಿಗೂ ಸ್ಪರ್ಧೆಯಲ್ಲಿ ತಾವೇ ಗೆಲ್ಲುವೆವೆಂಬ ಆತ್ಮವಿಶ್ವಾಸ ಎದ್ದು ಕುಣಿಯುತ್ತಿತ್ತು. ಈ ಹುಡುಗಿಯಂತೂ ಮಿಕ್ಕವರನ್ನು ನೋಡುವುದು, ತನ್ನನ್ನೇ ನೋಡಿಕೊಳ್ಳುವುದು ಮತ್ತು ತನ್ನ ತಲೆ ಕೂದಲು ಅವರಿಗಿಂತ ಉದ್ದವಿರಬಹುದಲ್ಲವೇ ಎಂದು ಅಂದುಕೊಳ್ಳುವುದು ನಡೆದೇ ಇತ್ತು. ಸ್ಪರ್ಧೆಗೆಂದೇ ಬಂದಿದ್ದ ಹುಡುಗಿಯರು ವೇದಿಕೆಯ ಮೇಲೆ ಬಂದರು - ತಮ್ಮ ತಮ್ಮ ಉದ್ದನೆಯ ಕೂದಲುಗಳನ್ನು ಬಿಚ್ಚಿ ಬಿಚ್ಚಿ ಹರವಿದರು, ಎಷ್ಟು ಉದ್ದ ತೋರಬಹುದೋ ಅಷ್ಟೂ ಉದ್ದ ತೋರಿಸುವಲ್ಲಿ ಸಫಲರೂ ಆದರು. ಈ ಹುಡುಗಿಯ ಹೆಸರನ್ನೂ ಕರೆದರು. ಹುಡುಗಿ ಅಂಜುತ್ತಾ ಅಂಜುತ್ತಾ ವೇದಿಕೆ ಮೇಲೆ ಹೋದಳು. ಗಂಟು ಹಾಕಿಕೊಂಡಿದ್ದ ತನ್ನ ತಲೆ ಕೂದಲು ಬಿಚ್ಚಿದಳು, ಒಮ್ಮೆ ತಲೆಯನ್ನು ಸುತ್ತಲೂ ಕೊಡವಿದಳು, ಕೂದಲು ಬಿರ್ರನೆ ಬಿಚ್ಚಿಕೊಂಡು ಅವಳ ಸುತ್ತಲೂ ಲಾಸ್ಯವಾಡಿ ಹರವಿಕೊಂಡಿತು. ಟೇಪು ಹಿಡಿದಿದ್ದ ವ್ಯಕ್ತಿಯೊಬ್ಬರು ಹತ್ತಿರ ಬಂದರು. ಇವಳ ತಲೆ ಕೂದಲ ಉದ್ದವನ್ನು ಅಳೆದರು ಮತ್ತು

ಒಂದು ನೋಟು ಬುಕ್ಕಿನಲ್ಲಿ ಗುರುತು ಹಾಕಿಕೊಂಡರು. ಎಲ್ಲರ ಪ್ರದರ್ಶನವೂ ಮುಗಿಯಿತು.

ಈಗ ವಿಜೇತರ ಹೆಸರನ್ನು ಅನೌನ್ಸ್ ಮಾಡಲಿದ್ದಾರೆ. ವಿಜೇತರ ಹೆಸರುಗಳನ್ನು ಕರೆಯಲು ಆರಂಭಿಸಿದರು. ಮೊದಲ ಹೆಸರು ಈ ಹುಡುಗಿಯದಲ್ಲ, ಎರಡನೆಯ ಹೆಸರು ಕರೆದರು - ಅದೂ ಇವಳದಲ್ಲ. ಸ್ಪರ್ಧೆಗೆ ಬರಲೇ ಬಾರದಾಗಿತ್ತು ಎಂದು ಇವಳಿಗೆ ಅನಿಸಲು ಶುರುವಾಯಿತು. ಮೂರನೇ ಹೆಸರು ಕರೆದರು. ಈ ನಮ್ಮ ಹುಡುಗಿಗೆ ಮೂರನೇ ಬಹುಮಾನ ಬಂದಿತ್ತು!

ಬಹುಮಾನದ ಫಲಕ ಕೈ ಸೇರಿತು. ಬಹುಮಾನಿತರನ್ನು ಸನ್ಮಾನಿಸುವ ಕಾರ್ಯಕ್ರಮವೊಂದನ್ನು ಅಲ್ಲಿಯ ಒಂದು ಸಂಸ್ಥೆ ಅದೇ ಸಂಜೆ ಹಮ್ಮಿಕೊಂಡಿತ್ತು. ಸ್ಪರ್ಧೆಯಲ್ಲಿ ಭಾಗವಹಿಸದ್ದವರು ಊರಿನ ಶ್ರೀಮಂತ ಕುಟುಂಬದಿಂದ ಬಂದವರು ಎಂಬುವುದು ಅವರ ವೇಷ ಭೂಷಣಗಳನ್ನು ನೋಡಿಯೇ ತಿಳಿಯಬಹುದಿತ್ತು. ನಮ್ಮ ಹುಡುಗಿಯೋ ಒಂದು ಮಧ್ಯಮ ವರ್ಗದ ಕುಟುಂಬದಿಂದ ಬಂದವಳು.

ಸನ್ಮಾನ ಕಾರ್ಯಕ್ರಮದಲ್ಲಿ ಎಲ್ಲರಿಗೂ ನೆನಪಿನ ಉಡುಗೊರೆಗಳನ್ನು ಕೊಟ್ಟರು. ನಂತರ ಸಮಾರಂಭ ಆಯೋಜಿಸಿದ್ದವರು ಒಂದು ಪ್ರಾರ್ಥನೆ ಮಾಡಿದರು. ಪ್ರಾರ್ಥನೆ ಏನು ಅಂದರೆ ಇಂದು ಇಲ್ಲಿ ಬಹುಮಾನ ಗಳಿಸಿದವರು ಆ ಸಂಸ್ಥೆ ನಡೆಸುತ್ತಿರುವ ಅನಾಥಾಶ್ರಮಕ್ಕೆ ಏನಾದರೂ ಕಾಣಿಕೆ ನೀಡಿ ಎಂಬ ಕೋರಿಕೆ.

ಶ್ರೀಮಂತ ಹುಡುಗಿಯರು ಬಂದು ವೇದಿಕೆ ಏರಿ ಒನಪು ವಯ್ಯಾರದಿಂದ ತಾವು ಇಷ್ಟು ಸಾವಿರ ತಾವು ಇಷ್ಟು ಸಾವಿರ ಎಂದು ಅವರವರ ನೆರವನ್ನು ಹೇಳುವಾಗ್ಗ ನಮ್ಮ ಬಡ ಹುಡುಗಿಗೆ ಗಂಟಲು ಉಬ್ಬಿಕೊಂಡ ಹಾಗೆ ಆಯಿತು. ಏನಾದರೂ ಕಾಣಿಕೆ ನೀಡಿ ಎಂದು ಊರಿನ ಹಿರಿಯರು ಮತ್ತೊಮ್ಮೆ ಕೋರಿಕೆ ಸಲ್ಲಿಸಿದರು.

ನಮ್ಮ ಹುಡುಗಿಗೆ ಒಂದು ರೀತಿಯ ಮುಜುಗರ ಆರಂಭವಾಯಿತು. ಎಲ್ಲರೂ ಅದೆಷ್ಟೋ ಸಾವಿರ ಕಾಣಿಕೆ ನೀಡಿದ್ದಾರೆ, ತಾನು ಏನು ಕೊಡಬಹುದು? ತನ್ನ ಬಳಿ ಇವರು ಕೊಟ್ಟಿರುವ ಬಹುಮಾನದ ಫಲಕವಲ್ಲದೇ ಮತ್ತೇನೂ ಇಲ್ಲ...! ಅರೆ ನಿಮಿಷ ಮೌನವಾಗಿ ಕೂತು ಚಿಂತಿಸಿದಳು. ತಲೆಗೇನೋ ಹೊಳೆಯಿತು, ಎದ್ದು ನಿಂತಳು... ಹತ್ತು ನಿಮಿಷ ಆಚೆ ಹೋಗಿ ಬಂದಳು, ವೇದಿಕೆ ಏರಿದಳು.

''ನಮ್ಮ ಊರಿನಿಂದ ಬರುವ ಆತುರದಲ್ಲಿ ಕೈಯಲ್ಲಿ ದುಡ್ಡು ತರುವುದನ್ನೇ ನಾನು ಮರೆತುಬಿಟ್ಟೆ. ನೀವು ನಡೆಸುತ್ತಿರುವ ಅನಾಥಾಶ್ರಮಕ್ಕೆ ಏನಾದರೂ ಕಾಣಿಕೆ ನೀಡಲೇಬೇಕು ಅಂತ ನನಗೆ ಆಸೆ, ಅದರಿಂದ ಒಂದು ಯೋಚನೆ ಮಾಡಿದ್ದೇನೆ, ಇವತ್ತು ನನಗೆ ಬಹುಮಾನ ಬಂತಲ್ಲಾ ಈ ನನ್ನ ತಲೆ ಕೂದಲು, ಇದನ್ನೇ ಕತ್ತರಿಸಿ ಇಲ್ಲಿನ ಅನಾಥಾಶ್ರಮಕ್ಕೆ ನನ್ನ ಕಾಣಿಕೆ ಎಂದು ಒಪ್ಪಿಸುತ್ತಿದ್ದೇನೆ....''

ಅವಳ ಕೂದಲನ್ನು ವ್ಯವಸ್ಥಾಪಕರು ಅಲ್ಲೇ ಹರಾಜು ಹಾಕಿದರು. ಎಲ್ಲರೂ ನೀಡಿದ ಕಾಣಿಕೆಯ ಹಲವು ಪಟ್ಟು ಹೆಚ್ಚೇ ಹಣ ಹರಿಯಿತು. ಕಷ್ಟಪಟ್ಟು ಬೆಳೆಸಿದ್ದ ಕೂದಲು ಹೋಯಿತೇ ಎಂದು ಹುಡುಗಿ ಚಿಂತಿಸಲಿಲ್ಲ, ಬದಲಿಗೆ ತನ್ನಿಂದಲೂ ಒಂದು ಒಳ್ಳೆಯ ಕಾರ್ಯಕ್ಕೆ ಅಳಿಲು ಸೇವೆ ಸಂದಿತು ಎಂದು ಖುಷಿಯಾಗಿದ್ದಳು...!

ಗೊಂದಲ

✧ ಆನಂದ

ಮೂರು ದಿನ, ಮೂರು ತಿಂಗಳು, ಮೂರು ವರ್ಷ, ಮೂರು ದಶಕಗಳಲ್ಲಾಗುವ ಘಟನೆಗಳ ಸರಮಾಲೆಯನ್ನು ಮೂರೇ ತಾಸುಗಳಲ್ಲಿ ಸಿನಿಮಾದ ಪರದೆಯ ಮೇಲೆ ನೋಡಿ (ಸಾಧ್ಯವಾದರೆ) ಆನಂದಿಸಬಹುದು. ಸಮಯ ಹೇಗೆ ಘನೀಭವಿಸುತ್ತದೆ ಎಂಬುದನ್ನು ಅಲ್ಲಿ ನೋಡಲು ಸಾಧ್ಯ. ನಿರೂಪಣೆ ಸರಿ ಇದ್ದರೆ ಸಮಯ ಹಾಗೆ ಸರಿಯುವುದು ನಮಗೆ ಸಮಸ್ಯೆ ಒಡ್ಡುವದಿಲ್ಲ. ಆದರೆ ಕತೆ ಎಡವಿದರೆ? ನಿರ್ದೇಶಕನ ಕೈ ಗಡಿಯಾರ ನಿಂತು ಹೋಗಿದ್ದರೆ?

ಮೊನ್ನೆ ಯಾವುದೋ ಒಂದು ಕನ್ನಡ ಸೀರಿಯಲ್ ನೋಡುತ್ತಿದ್ದೆ. ಅಲ್ಲಿ ಅಕ್ಕ-ತಂಗಿ ಇದ್ದಾರೆ. ತಂಗಿ ಹೊಸದಾಗಿ ಗಂಡನ ಮನೆಗೆ ಹೋಗಿ ತನಗೆ ಬೇಕಾದ ಎಲ್ಲಾ ಸಾಮಾನುಗಳನ್ನು ತರಲು ಪತಿದೇವನಿಗೆ ಮೂರು ತಿಂಗಳ ಅವಧಿ ನೀಡಿದ್ದಾಳೆ. ಅದೇ ಸಮಯಕ್ಕೆ ಅಕ್ಕ ಬಸುರಿ ಎಂದು ತಿಳಿದು ಅತ್ತೆ ಮಾವ / ತಂದೆ ತಾಯಿ ಮಾಮೂಲಿನಂತೆ ಕುಣಿದು ಕುಪ್ಪಳಿಸುತ್ತಾರೆ. ಸಹಜ ಬಿಡಿ. ಆದರೆ ಈ ಸೀರಿಯಲ್‌ನ ನಿರ್ದೇಶಕರ ಸಾಪೇಕ್ಷ ವಾದದ ಪ್ರಕಾರ ತಂಗಿ ನೀಡಿದ ಮೂರು ತಿಂಗಳ ಅವಧಿ ಮುಗಿಯುವ ಹೊತ್ತಿಗೆ ಅಕ್ಕನ ಬಸಿರಿಗೆ ಎಂಟು ತಿಂಗಳಾಗಿರುತ್ತದೆ. ಇದು ಹೇಗಾಯಿತು ಎಂದು ನಾನು ಚಿಂತಿಸುವ ಹೊತ್ತಿಗೆ ಆ ಎಪಿಸೋಡ್ ಮುಗಿದೇ ಹೋಗಿರುತ್ತದೆ.

ಈ ಸಮಯ ಪಾಲನೆ ಬಗ್ಗೆ ನಾನು ಪದೇ ಪದೇ ತಲೆ ಕೆಡಿಸಿಕೊಳ್ಳುತ್ತಿರುತ್ತೇನೆ. ಒಂದು ಸೀರಿಯಲ್‌ನಲ್ಲೋ ಅಥವಾ ಚಿತ್ರದಲ್ಲೋ. ಕೊಲೆ ನಡೆದ ತಕ್ಷಣ ವಿಚಾರಣೆ ಪ್ರಾರಂಭವಾಗಿ ತೀರ್ಪು ಸಹ ಹೊರಬೀಳುತ್ತದೆ. ನನಗೆ ಇದು ಸಮಸ್ಯೆಯಾಗಿ ಕಾಣುವದಿಲ್ಲ. ನನ್ನ ಸಮಸ್ಯೆ ಎಂದರೆ ನಮ್ಮ ಈ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೊಲೆ-ವಿಚಾರಣೆ-ತೀರ್ಪು ಈ ಪ್ರಕ್ರಿಯೆಗೆ 4-5 ವರ್ಷ ಬೇಡವೆ? ನಿಜ. ಇದನ್ನೆಲ್ಲ ತೆರೆಯ ಮೇಲೆ ತೋರಿಸಲಾಗುವದಿಲ್ಲ. ಆದರೆ ಈ ಅವಧಿಯಲ್ಲಿ ಹೀರೋ, ಹೀರೋಯಿನ್ ಅವರ ತಂದೆ ತಾಯಂದಿರು ಇವರೆಲ್ಲ ಏನು ಮಾಡಿಕೊಂಡಿದ್ದರು ಎಂಬುದು ನಮಗೆ ಗೊತ್ತೇ ಆಗುವದಿಲ್ಲ. ಈ ಗೊಂದಲದಲ್ಲಿ ಬೀಳುವ ನಾನು ಕತೆಯ ಮುಂದಿನ ಭಾಗದಲ್ಲಿ ತಲ್ಲೀನನಾಗುವ ಬದಲು ಹಿಂದಿನ ಭಾಗದಲ್ಲೇ ಉಳಿದು

ಹೋಗುತ್ತೇನೆ. ಅತ್ತ ಕತೆ ಮುಂದುವರೆದು ನನ್ನಲ್ಲಿ ಇನ್ನಷ್ಟು ಗೊಂದಲಗಳನ್ನು ಸೃಷ್ಟಿಸತೊಡಗಿರುತ್ತದೆ.

ಈ ಸಾಪೇಕ್ಷವಾದವಷ್ಟೇ ನನ್ನ ಸಮಸ್ಯೆ ಅಲ್ಲ. ಭಾರ ಎತ್ತುವ ಬಗ್ಗೆ ಒಲಿಂಪಿಕ್ಸ್‌ನಲ್ಲಲ್ಲ, ತೆರೆಯ ಮೇಲೆ - ಸಹ ನಾನು ಗೊಂದಲಕ್ಕೊಳಗಾಗಿದ್ದೇನೆ. ಹೀರೋ ಬಿಡಿ ಅವನು ಬಲಶಾಲಿಯಾಗಿರುತ್ತಾನೆ. ಆದರೆ ನಮ್ಮ ಹೀರೋಯಿನ್‌ಗಳು ಸಹ ತಾವು ಪ್ರಯಾಣ ಮಾಡುವಾಗ ತಮ್ಮ ಸೂಟ್‌ಕೇಸ್‌ಗಳನ್ನು ಲೀಲಾಜಾಲವಾಗಿ ಕೊಂಡೊಯ್ಯುತ್ತಾರೆ. ಆಕೆಯನ್ನು ಮನೆಯಿಂದ ಹೊರ ಹಾಕಿದ್ದರಂತೂ ಮಳೆಯಲ್ಲೂ ಆ ಸಮಯದಲ್ಲಿ ಮಳೆ ಖಂಡಿತ ಬರುತ್ತಿರುತ್ತದೆ - ಆಕೆ ತನ್ನ ಬಟ್ಟೆ ಬರೆ ತುಂಬಿದ ಸೂಟ್‌ಕೇಸನ್ನು ತಾನೇ ಎತ್ತಿ ನಡೆದಿರುತ್ತಾಳೆ. ಅದರ ಭಾರ ಮರೆಯಲೆಂದು ಆಕೆ ಹಾಡು ಹೇಳುತ್ತಾಳೆ ಎಂದು ನನ್ನ ಗುಮಾನಿ. ಆದರೆ ಹಾಡಿಲ್ಲದ ಸಮಯದಲ್ಲೂ ಆಕೆಯ ಭುಜಗಳಿಗೆ ಆ ಭಾರ ಎತ್ತಲು ಶಕ್ತಿ ಇರುತ್ತದೆ. ಇದು ಹೇಗೆ ಸಾಧ್ಯವಾಯಿತು ಎಂಬುದರ ಬಗ್ಗೆ ನಾನು ಯಥಾ ಪ್ರಕಾರ ತಲೆ ಕೆಡಿಸಿಕೊಂಡಿರುತ್ತೇನೆ.

ಈ ಸೂಟ್‌ಕೇಸ್ ಬಿಡಿ. ಬಂಗಾರದ ಬಿಸ್ಕಿಟ್‌ಗಳಿರುವ ಒಂದು ದೊಡ್ಡ ಕ್ರೇಟನ್ನು ಲೀಲಾಜಾಲವಾಗಿ ಸಾಗಿಸುವ ಕಳ್ಳಸಾಗಣೆದಾರರನ್ನು ನಾನು ತೆರೆಯ ಮೇಲೆ ನೋಡಿ ನನ್ನ ಮೂಗಿನ ಮೇಲೆ ನಾನೇ ನನ್ನ ಬೆರಳನ್ನು ಇಟ್ಟುಕೊಂಡಿದ್ದೇನೆ. ಏಕೆಂದರೆ ಆ ಭಾರ ಮಲ್ಲೇಶ್ವರಿಗೆ ಸಹ ಎತ್ತಲು ಸಾಧ್ಯವಾಗುವದಿಲ್ಲ ಎಂಬುದು ನನಗೆ ತಿಳಿದಿದೆ. ಆದರೆ ತೆರೆಯ ಮೇಲೆ ಪವಾಡ ನಡೆದೇ ಹೋಗುತ್ತದೆ. ನನಗೆ ಮಾಮೂಲಿನಂತೆ ಗೊಂದಲ.

ಈ ಹುಲು ಮಾನವರ ಕತೆ ಬಿಡಿ. ದೇವರ ಕತೆಗಳೂ ನನಗೆ ಗೊಂದಲ ಉಂಟುಮಾಡುತ್ತದೆ. ನಿಮಗೂ ಗೊತ್ತಿರುವ ಹತ್ತು ಹಲವಾರು ಕತೆಗಳಲ್ಲಿ ಯಾವನೋ ಒಬ್ಬ ಭಕ್ತ ಅನೇಕ ಸಂಕಟಗಳನ್ನು ಎದುರಿಸುತ್ತಾನೆ. ಆದರೆ ನಮ್ಮ ಹಾಗೆ ತಂಡದಂತೆ ಅವನು ಸೋಲನ್ನು ಅನುಭವಿಸುವದಿಲ್ಲ. ಸೋಲಿಲ್ಲದ ಸರದಾರ ಚುನಾವಣೆಯಲ್ಲಿ ಗೆಲ್ಲುವಂತೆ ಈ ನಮ್ಮ ಭಕ್ತ ದೇವನೊಡ್ಡುವ ಎಲ್ಲ ಪರೀಕ್ಷೆಗಳಲ್ಲೂ ಪಾಸ್. ಕೊನೆಗೆ ದೇವ ವಿಧಿಯಿಲ್ಲದೆ ಪ್ರತ್ಯಕ್ಷನಾಗಿ ''ಭಕ್ತ ನಿನ್ನ ಭಕ್ತಿಗೆ ಮೆಚ್ಚಿದೆ....'' ಎಂಬ ಡೈಲಾಗ್ ಹೇಳುತ್ತಾನೆ. ವರ ಕೊಡುತ್ತಾನೆ. ಇಲ್ಲಿ ನನ್ನ ಸಮಸ್ಯೆ ಎಂದರೆ ಎಲ್ಲವನ್ನೂ ಗೊತ್ತಿರುವ ಈ ನಮ್ಮ ದೇವನಿಗೆ ಈ ತನ್ನ ಭಕ್ತ ತನ್ನೆಲ್ಲ ಪರೀಕ್ಷೆಗಳಲ್ಲು ಪಾಸಾಗುತ್ತಾನೆ ಎಂಬುದು ಮೊದಲೇ ಗೊತ್ತಿರುವದಿಲ್ಲವೆ? ಗೊತ್ತಿದ್ದರೂ ಈ CET, CAT, GRET, GATE, IAS, IRS ಮುಂತಾದ ಪರೀಕ್ಷೆಗಳಿಗ 'ತನ್ನ ಭಕ್ತನನ್ನು ಒಡ್ಡಬೇಕೇಕೆ ಎಂಬುದೇ ನನ್ನ ಗೊಂದಲ. ಎಲ್ಲವೂ ಗೊತ್ತಿರುವ ದೇವನಿಗೆ ನನ್ನ ಗೊಂದಲವೂ ತಿಳಿಯುತ್ತದೆ ಎಂದು ನಾನೆಂದುಕೊಂಡಿದ್ದೇನೆ.

ಆದರೆ ದೇವರ ಕಷ್ಟ ನನಗೆ ಗೊತ್ತಿದೆ. ಏಕೆಂದರೆ ನನ್ನ ಗೊಂದಲಗಳು ಒಂದೇ ಎರಡೇ.

ಉದಾಹರಣೆಗೆ, ತಿ.ತಿ.ಯನ್ನೇ ತೆಗೆದುಕೊಳ್ಳಿ. ತಿ.ತಿ. ಅಂದರೆ ತಿರುಪತಿ ತಿಮ್ಮಪ್ಪ ಉರುಫ್ ಬಾಲಾಜಿ ಉರುಫ್ ಲಾರ್ಡ್ ವೆಂಕಟೇಶ್ವರ ಯಾನೆ ಏಡುಕೊಂಡಲವಾಲ

ವಿಟಸೆಲರ್ರಾ. 'ದೇವನೊಬ್ಬ ನಾಮ ಹಲವು' ಎಂಬುದು ಇದರಿಂದಲೇ ಸೃಷ್ಟಿಯಾಗಿರಬಹುದೆ ಎಂಬುದರ ಬಗ್ಗೆ ನನ್ನ ಗೊಂದಲ ಇದ್ದೇ ಇದೆ. ಅದಿರಲಿ. ತಿರುಪತಿ ತಿಮ್ಮಪ್ಪನನ್ನು ಭಕ್ತಾದಿಗಳು ಶೋಷಣೆ ಮಾಡುತ್ತಿರುವದರ ಬಗ್ಗೆ ನನಗೆ ಗೊಂದಲ ಕಾಡುತ್ತಿದೆ. ಬೆಳಿಗ್ಗೆ ನಾಲ್ಕಕ್ಕೆಲ್ಲ ಏಳುವ ತಿಮ್ಮಪ್ಪ - ಅಂದ ಹಾಗೆ ಎಚ್ಚೆನ್ ಸಹ ಇಷ್ಟು ಬೇಗ ಏಳುತ್ತಿರಲಿಲ್ಲ. ಅವರು 4-30ಕ್ಕೆ ಏಳುತ್ತಿದ್ದರಂತೆ - ಮಲಗುವುದು ರಾತ್ರಿ 1ಕ್ಕೆ ನಡೆಯುವ ಶಯನೋತ್ಸವದ ನಂತರವೇ. ಪಾಪ ಅವನಿಗೆ ಪ್ರತಿ ರಾತ್ರಿ ಮೂರೇ ತಾಸು ವಿಶ್ರಾಂತಿ. ಪುನರಪಿ ಸುಪ್ರಭಾತ, ಪುನರಪಿ ಶಯನೋತ್ಸವಗಳಲ್ಲಿ ಅವನ ನೆಮ್ಮದಿ ಕೆಟ್ಟಿಲ್ಲವೇಕೆ ಎಂಬುದರ ಬಗ್ಗೆ ನನಗೆ ಗೊಂದಲವಾಗಿದೆ. ದುಡ್ಡು ಬೇಕಿದ್ದರೆ ವಿಶ್ರಾಂತಿ ಇಲ್ಲದೆ ದುಡಿಯಲೇಬೇಕು ಎಂದು ನಮ್ಮ ಐಟಿ ಪಡ್ಡೆ ಹುಡುಗರು ಮಾಡುತ್ತಿರುವದಕ್ಕೆ ತಿ.ತಿ. ಸ್ಫೂರ್ತಿಯೋ? ನನಗೆ ಯಥಾಪ್ರಕಾರ ಗೊಂದಲ. 'ಪುನರಪಿ ಸುಪ್ರಭಾತ, ಪುನರಪಿ ಶಯನೋತ್ಸವ' ಎನ್ನಬೇಕೋ 'ಪು. ಶಯನೋತ್ಸವ ಪು. ಸುಪ್ರಭಾತ' ಎಂದು ಹೇಳಬೇಕೋ ಎನ್ನುವ ಗೊಂದಲವಿಲ್ಲವೇ ಎಂದು ನೀವು ಕೇಳಲೇ ಬೇಕಿಲ್ಲ. ಆ ಗೊಂದಲವೂ ಇದೆ.

ರಾಜಕಾರಣಿಗಳ ಬಗ್ಗೆಯೂ ನನಗೆ ಗೊಂದಲ ಇದೆ. ಮೊನ್ನೆ ದೇವೇಗೌಡರು 'ಈ ದೇವೇಗೌಡನಿಗೆ ಭಯವೆಂಬುದೇ ಇಲ್ಲ' ಎಂದು ಹೇಳಿದ್ದು ನಿಮಗೆ ನೆನಪಿದೆ ತಾನೆ? ಅಂದರೆ ಮತದಾರರ ಬಗ್ಗೆಯೂ ಅವರಿಗೆ ಹೆದರಿಕೆ ಇಲ್ಲವೆ? ಎಂಬುದರ ಬಗ್ಗೆ ನನಗೆ ಗೊಂದಲವಿದೆ. ನಿಮಗೆ? ಭಯ ಇಲ್ಲದಿರುವದರಿಂದಲೇ ಅವರು ಸಭೆಗಳಲ್ಲಿ ನಿದ್ರಿಸುವರೆ? ಎಂಬ ಗೊಂದಲದಿಂದಾಗಿ ನನಗೆ ರಾತ್ರಿಯೂ ನಿದ್ದೆ ಬರದು.

ಹೀಗೆ ನಾನು ಮುಂದುವರಿಸುತ್ತಲೇ ಇರಬಹುದು. ಆಗ ಇದು ಮುಗಿಯುವದೋ ಇಲ್ಲವೋ ಎಂಬ ಗೊಂದಲ ನಿಮಗಾಗಬಹುದು ಅಲ್ಲವೆ?



ಮಗೂ! ಮಗೂ! ಎಲ್ಲಿ ಹಾಳಾಗಿ ಹೋದ್ಯೋ?

ಅದಲ್ಲ, ಇದು

✧ ಬೇಲೂರು ರಾಮಮೂರ್ತಿ

1. ಶಿವು ಅತ್ತೆ ಮನೆಗೆ ಹೋದಾಗ ತಿಂಡಿ ತಂದ್‌ಕೊಡೋದು ಸ್ವಲ್ಪ ಲೇಟಾಯ್ತು ಅಂತ ಸಿಟ್ಟಿಂದ ನಂಗೆ ತಿಂಡಿ ಬೇಡಾ ಅಂದ.

- ಅವನು ಅತ್ತೆ ಮನೆಗೆ ಹೋಗಕ್ಕೆ ಮುಂಚೆನೇ ಗಡದ್ದಾಗಿ ಮಸಾಲೆ ತಿಂದ್ಕೊಂಡ್ ಹೋಗಿದ್ದ.

2. ರಾಜ ಶಾಸ್ತ್ರಿಗಳ ಮನೆಗೆ ಹೋದಾಗ ಊಟ ಮಾಡ್ತಾ ಇದ್ದ ಶಾಸ್ತ್ರಿಗಳು ರಾಜನನ್ನು ನೋಡಿ ಗೌರವ ಸೂಚಿಸುವಂತೆ ಎದ್ದು ನಿಂತು ಬಾಬಾ ಅಂದರು.

- ಅವರು ಆಗತಾನೇ ಊಟ ಮುಗಿಸಿ ಕೈ ತೊಳ್ಕೊಳೋಕೆ ಏಳ್ತಿದ್ರು.

3. ಸೀತಾಲಕ್ಷ್ಮಿಗೆ ಒಬ್ಬ ಲಕ್ಷಾಧೀಶ್ವರ ವರ ಬಂದಿದ್ದ ಅವನನ್ನ ಅವಳು ರಿಜೆಕ್ಟ್ ಮಾಡಿಬಿಟ್ಳು - ಏನನ್ಯಾಯ!

- ಅವಳಾಗಲೇ ಕೋಟ್ಯಾಧಿಪತಿಯ ಬೆನ್ನು ಹತ್ತಿದ್ದಳು.

4. ಪಾಪ ನಿಮಗೆ ತುಂಬಾ ಕಷ್ಟ ಅದಿಕ್ಕೆ ಈ ಸಾರಿ ಹಬ್ಬಕ್ಕೆ ಸೀರೆ ಬೇಡ ಅಂತ ಗಂಡನ್ನ ಒಪ್ಪಿಸಿದಳು ಜಾನಕಿ. - ಗಂಡ ಬಚಾವ್!

- ಆದರೆ ಅದರ ಬದಲಿಗೆ ನಾನು ನೋಡಿ ಸೆಲೆಕ್ಟ್ ಮಾಡಿರೋ ಚಿನ್ನದ ಸರ ತಂದ್ಬಿಡಿ ಅಂದಳು ಮೆತ್ತಗೆ.

5. ಸಂಪಾದಕರ ಹತ್ರ ಹೋಗಿ ಮರಿ ಸಾಹಿತಿ ನನ್ನ ಕಥೆ ನೀವು ರಿಜೆಕ್ಟ್ ಮಾಡಿದ್ರೆ ನಂಗೆ ಬೇಜಾರಿಲ್ಲ ಅಂದ.

- ಅದಕ್ಕೆ ಬದಲಾಗಿ ನನ್ನ ಕಾದಂಬರಿಯನ್ನು ಧಾರಾವಾಹಿ ಮಾಡಿಬಿಡಿ ಅಂದ.

6. ಒಂದು ಟಿವಿ ಸೀರಿಯಲ್‌ನಿಂದ ನಟಿಯೊಬ್ಬಳನ್ನು ಕಿತ್ತು ಹಾಕಿದ್ದಕ್ಕೆ ಅವಳಿಗೆ ಬೇಜಾರೇ ಆಗಲಿಲ್ಲವಂತೆ.

- ಅವಳಾಗಲೇ ಒಂದು ಸಿನಿಮಾಕ್ಕೆ ಹೀರೋಹಿನ್ ಆಗಿ ಬುಕ್ ಆಗಿದ್ಲಂತೆ.

7. ಕೇಸು ಪದೇ ಪದೇ ಮುಂದೆ ಹೋಗ್ತಿರೋದು ನಂಗೆ ಬೇಜಾರೇ ಇಲ್ಲ ಅಂದ ಕಕ್ಷಿದಾರ.

- ಆದರೆ ಪದೇ ಪದೇ ಫೀಸು ಮಾತ್ರ ಕೇಳಬೇಡಿ ಅಂದ್ನಂತೆ ಲಾಯರಿಗೆ.

8. ಗುಂಡ ಆಫೀಸಿಂದ ಮನೆಗೆ ಹೋದ ತಕ್ಷಣ ಗುಂಡಿ ಯಾಕೋ ವಿಪರೀತ ತಲೆನೋವು ಅಂದಳು.

- ಗೊತ್ತಾಯ್ತು ಬಿಡು ನಾನೇ ಅನ್ನಕ್ಕಿಡ್ತೀನಿ ಅಂದ ಗುಂಡ.

9. ನೀವು ಆಫೀಸಿಗೆ ಐದು ನಿಮಿಷ ಹತ್ತು ನಿಮಿಷ ತಡವಾಗಿ ಬಂದ್ರೆ ನಂಗೇನೂ ಬೇಜಾರಿಲ್ಲ ಅಂತ ಬಾಸ್ ಅಂದರು.

- ಆದರೆ ಪದೇ ಪದೇ ಚಕ್ಕರ್ ಮಾತ್ರ ಹೊಡೀಬೇಡಿ ಅಂಂದ್ರಂತೆ.

10. ಈ ಸಾರಿ ನನ್ನನ್ನು ಭಾರೀ ಬಹುಮತದಿಂದ ಚುನಾಯಿಸಿ ಅಂತ ಹೊಡ್ಕೊಂಡ ರಾಜಕಾರಿಣಿ

- ಇನ್ನೈದು ವರ್ಷ ನೀವೂ ನನ್ನ ತಂಟೆಗೆ ಬರಬೇಡಿ ನಾನೂ ನಿಮ್ಮ ತಂಟೆಗೆ ಬರಲ್ಲ ಅಂತ.

11. ಕ್ಲಾಸ್ ಮಾನಿಟರ್ ಕ್ಲಾಸ್ ಒಳಗೆ ಕಾಲಿಟ್ಟಾಗ ಮೇಷ್ಟ್ರೇ ಎದ್ದು ನಿಂತ್‌ಕೊಂಡ್ರು - ಭಯ ಪಟ್ಕೋರಂತೆ.

- ಅವರ ಪೃಷ್ಟದ ಹತ್ರ ಒಂದು ತಿಗಣೆ ಸೇರ್ಕೊಂಡು ತುಂಬಾ ತೊಂದ್ರೆ ಕೊಡ್ತಿತ್ತಂತೆ.

12. ಹಿಂದಿನ ಚಿತ್ರದಲ್ಲಿ ಯಶಸ್ವಿಯಾಗಿದ್ದ ನಾಯಕಿಯನ್ನು ಮುಂದಿನ ಚಿತ್ರಕ್ಕೆ ಬೇಡ ಅಂದ್ನಂತೆ ನಾಯಕ.

- ಹೊಸಾ ಹೀರೋಯಿನ್ನು ತನ್ನ ಸಂಭಾವನೆಯಲ್ಲಿ ಅರ್ಧ ನಿನಗೆ ಕೊಡ್ತೀನಿ ಅಂತ ಪ್ರಾಮಿಸ್ ಮಾಡಿದ್ಲಂತೆ.

13. ಮಗ ಅನ್ಯ ಜಾತಿಯ ಹುಡುಗೀನ ಲವ್ ಮಾಡಿ ಮದುವೇನೂ ಮಾಡ್ಕೊಂಡ್ ಬಂದ್ರೂ, ಅಪ್ಪ ಅನಿಸ್ಕೊಂಡೋನು ರೇಗ್ಲೇ ಇಲ್ವಂತೆ.

- ಆ ಹುಡುಗಿ ಅವರಪ್ಪನಿಗೆ ಒಬ್ಬಳೇ ಮಗಳು ಜೊತೆಗೆ ಅಪಾರ ಆಸ್ತಿಯೂ ಇತ್ತಂತೆ.

14. ಮಗ ಸರಿಯಾಗಿ ಓದದೇ ಆಗಾಗ ಫೇಲ್ ಆಗ್ತಿದ್ರೂ, ಅಪ್ಪ ಅಮ್ಮ ಬೇಜಾರೇ ಮಾಡ್ಕೊಳ್ಳಿಲ್ವಂತೆ.

- ತಮ್ಮ ವ್ಯಾಪಾರ ನೋಡ್ಕೊಳ್ಳೆ ಬೇರೆ ದಾರಿ ಇರಲ್ಲ ಮಗನಿಗೆ ಅಂತ ಅವರಿಗೆ ಅನಿಸಿತ್ತಂತೆ.

ವೈವಾ(ಹಾ)ವಳಿ

✧ ಶ್ಯಾಮಲ ರವಿಶಂಕರ್

ಪ್ರಾಕ್ಟಿಕಲ್ ಪರೀಕ್ಷೆಯಲ್ಲಿ ಉಪಾಧ್ಯಾಯ ವೃತ್ತಿಯ ಅತಿಸೂಕ್ಷ್ಮ ಐಟಂ ಅಂದರೆ ವೈವಾ. ಯಾಕೆ ಅಂತೀರಾ? ನಾವೇನೋ ಪಾಠ ಮಾಡುವಾಗ ಇದು ಉದ್ದನೆಯ ಪ್ರಬಂಧಕ್ಕೆ ಬರಬಹುದಾದಂಥ ವಿಷಯ, ಇದು ಕ್ರಿಟಿಕಲ್ ಪ್ರಬಂಧಕ್ಕೆ ಮೀಸಲಾದಂಥ ವಿಚಾರ, ಇದು ವೈವಾ ಅಥವಾ ಇಂಟರ್‌ವ್ಯೂಗಳಲ್ಲಿ ಕೇಳುವಂಥಾದ್ದು ಎಂದು ಏನೆಲ್ಲಾ ಶಿಷ್ಯವೃಂದಕ್ಕೆ ಕೊರೆದಿರುತ್ತೇವೆ. ಆದರೆ ನಮ್ಮ ಶಿ.ವೃಂ. ನಮ್ಮ ಕಣ್ಣ ಮುಂದೇನೇ ನಮ್ಮ ಮರ್ಯಾದೆಯನ್ನ ಆಹ್ವಾನಿತ ಪರೀಕ್ಷಕರ ಮುಂದೆ ಹರಾಜ್ಹಾಕಿದಾಗ ನಮ್ಮ ಸ್ಥಿತಿ ನೀವು ಊಹಿಸಬಲ್ಲಿರಿ. ಇದರಲ್ಲಿ ಕಣ್ಣೊರೆಸುವ, ಸಂತೈಸುವ ವಿಷಯ ಏನಪ್ಪಾ ಅಂದರೆ ನಾವು ಬೇರೆಲ್ಲಾದರೂ ಆಹ್ವಾನಿತರಾಗಿ ಹೋದಾಗಲೂ ಪರಿಸ್ಥಿತಿ ಅಷ್ಟೇನೂ ಬೇರೆಯಾಗಿರದಿರುವುದು! ಸಾಮಾನ್ಯವಾಗಿ ನಮ್ಮ ಹುಡುಗರ ವೈವಾ ಅನ್ನು ನಾವೇ ತೆಗೆದುಕೊಳ್ಳುವುದಿಲ್ಲ. ಹೊರಗಿನಿಂದ ಬಂದ ಪರೀಕ್ಷಕರಿಗೆ ಆ ಕೆಲಸ ಬಿಡುವುದು ಗೌರವ ಸೂಚ್ಯ ಎಂದು ನಾವು ನಂಬಿದ್ದೇವೆ. ಆದ್ದರಿಂದ ನಾವು ಮೂಕ ಪ್ರೇಕ್ಷಕರಷ್ಟೇ. ಎಷ್ಟೋ ಬಾರಿ ತಲೆ ತಗ್ಗಿಸಿದರೂ, ಬಹಳಷ್ಟು ಸಾರಿ ಮನೋರಂಜನೆ ಕೂಡ ಸಿಗುತ್ತದೆ.

ನಾವು ಶಿಷ್ಯರಾಗಿದ್ದಾಗ ನಮಗೆಲ್ಲರಿಗೂ ಎಲ್ಲೋ ಒಂದಿಷ್ಟು ಅಂಜಿಕೆ, ವೈವಾ ಅಂದರೆ! ನಮಗೆ ಉತ್ತರ ತಿಳಿಯದೆ ಇರುವಂತಹ ಪ್ರಶ್ನೆ ನಮ್ಮ ಮುಖಕ್ಕೆ ಎಸೆದರೆ ಅನ್ನುವ ಭಯ ನಮ್ಮನ್ನು ಕಾಡುತ್ತಿತ್ತು. ಈ ಅವಾಂತರದಲ್ಲಿ ಉತ್ತರ ಗೊತ್ತಿದ್ದೂ, ಹೇಳಿದ್ದರೂ, ಅದು ನಮ್ರತೆಯಿಂದ ಧ್ವನಿಯನ್ನು ಕುಗ್ಗಿಸುತ್ತಿತ್ತು. ಈಗಿನ ನಮ್ಮ ಶಿ.ವೃಂ. ಹಾಗೆಲ್ಲಾ ಆಗೋಕೆ ಅವಕಾಶಾನೇ ಕೊಡುವುದಿಲ್ಲ. ಗೊತ್ತಿರಲಿ, ಇಲ್ಲದಿರಲಿ, ತೋಚಿದ್ದನ್ನು ಗಟ್ಟಿಯಾಗಿ, ಧೈರ್ಯವಾಗಿ, Anthentic ಅನ್ನೋ ಹಾಗೆ ವದರಿ ಬಿಡುತ್ತಾರೆ. ನಾವೇನಾದರೂ ಅವರು ಹೇಳಿದ್ದು ತಪ್ಪಿರಬಹುದು ಅನ್ನೋ ಸೂಚನೆ ಕೊಟ್ಟರೆ ಆ ತಪ್ಪಿಗೆ ಕಾರಣಗಳನ್ನೂ ಹೇಳಿಬಿಡ್ತಾರೆ. ಉದಾ: ತಾನು ಆ ಕ್ಲಾಸಿಗೆ ಹೋಗಿರಲಿಲ್ಲ; (ಎಂದೋ ಸತ್ತ ತನ್ನ ಅಜ್ಜ) ನೆನ್ನೇನೇ ಸಾಯ್ತಾರೆ; ತನ್ನ ಅಕ್ಕನ ಮದುವೆ ಚಪ್ಪರದಿಂದ ನೇರವಾಗಿ ಪರೀಕ್ಷೆ ಲ್ಯಾಬ್‌ಗೆ ಬಂದಿರ್ತಾರೆ; ಜ್ವರ ಬಂದಿರತ್ತೆ; ಡೀಹೈಡ್ರೇಶನ್ ಆಗಿ ಆಗಷ್ಟೇ ಡ್ರಿಪ್ಸ್‌ನ ಕಿತ್ತೊಗೆದು ಆಸ್ಪತ್ರೆಯಿಂದ ಬಂದಿರ್ತಾರೆ; ವಗೈರೆ, ವಗೈರೆ! ಎಲ್ಲಾದಕ್ಕೂ ಮಿಗಿಲಾಗಿ, ತಾನು ತೆಲುಗು

ಮೀಡಿಯಂನಲ್ಲಿ ಬಿ.ಎಸ್ಸಿ. ವರೆಗೂ ಓದಿರೋದ್ರಿಂದ ತನಗಿರುಷ್ಟು ಸಬ್ಜೆಕ್ಟ್ ಜ್ಞಾನ ಇಂಗ್ಲೀಷ್ ಮೀಡಿಯಂನವರಿಗಿಲ್ಲದಿದ್ದರೂ, ತಾನು ತನ್ನ ಜ್ಞಾನವನ್ನು ವ್ಯಕ್ತಪಡಿಸಲಾಗುವುದಿಲ್ಲ ಎಂಬುದು!

ಇವೆಲ್ಲದರಿಂದ ನನಗೆ ಜೀವನಾದ್ಯಂತ (ಅಲ್ಜೈಮಿಯರ್ ರೋಗ ಬರದಿದ್ದಲ್ಲಿ) ಜ್ಞಾಪಕವಿರುವಂತಹ ಉತ್ತರಗಳು ದಕ್ಕಿವೆ. ಕೆಲವನ್ನು ಈ ಕೆಳಗೆ ನಮೂದಿಸಿದ್ದೇನೆ, ತಮ್ಮ ಜ್ಞಾನಾರ್ಜನೆಗಾಗಿ (!).

ಪರೀಕ್ಷಕರು: ರೋಲ್ ನಂಬರ್ ಒನ್, ವೈವಾಗೆ ಬಾಪ್ಪ. ಕೂತ್ಕೋ.... ''ಲುನ್ಯುಲೇರಿಯಾ'' ಎಂಬ ಹೆಸರನ್ನು ಕೇಳಿದ್ದೀಯಾ? ಅದನ್ನು ಕುರಿತು ಎರಡು ಮಾತು ಹೇಳು, ಹಾಗೂ ಅದನ್ನು ವರ್ಗೀಕರಿಸು.

ವಿದ್ಯಾರ್ಥಿ: ಓ... ಅದಾ, ಅದೂ, ಅದೇ, ಅದೊಂದು ಥರಾ... ಒಂದೊಂದು ಏರಿಯಾದಲ್ಲಿ ಚಂದ್ರ ಹೇಗೆ ಹೇಗೆ ಕಾಣಿಸುತ್ತಾನೆ ಎನ್ನುವ ಖಗೋಳ ಶಾಸ್ತ್ರದ ಒಂದು ಶಾಖೆ. ಇದು ಮಲೇರಿಯಗೆ ಏನೇನೂ ಸಂಬಂಧವಿಲ್ಲದ್ದು. ಹಾಗಾಗಿ ಪಾಥೋಲೊಜಿ ಪುಸ್ತಕದಲ್ಲಿ ಹುಡುಕಬಾರದು ಹುಡುಕಿದರೂ ಏನೂ ವಿಷಯ ಸಿಗುವುದಿಲ್ಲ. (That is his classification!)

ಪ: ನೀನಿನ್ನು ಹೋಗಬಹುದು.

ವಿ: 20ಕ್ಕೆ 20 ಆ ಅಥವಾ ಹದಿನೈದಾ? ಎಷ್ಟು ಕೊಟ್ಟಿದ್ದೀರಿ ಎಂದು ಕೇಳಬಹುದಾ?

ಪ: ಕೇಳಬಾರದು, ನೀನಿನ್ನು ಹೊರಡು. ನೆಕ್ಸ್ಟ್... ಬಾ, ಕೂತ್ಕೋ ನಿನಗೆ ಇಂಗ್ಲೀಷ್ ಕಷ್ಟವಾದರೆ, ತೆಲುಗಿನಲ್ಲಿ ಅಥವಾ ಉರ್ದು ಅಥವಾ ಹಿಂದಿ ಸ್ವಲ್ಪ ಸ್ವಲ್ಪ ಕನ್ನಡಾನೂ ಬರತ್ತೆ ನನಗೆ, ಹೇಗಾದ್ರೂ ಉತ್ತರ ಮಾತ್ರ ಸರಿಯಾಗಿ ಹೇಳು. ಕಾಲೆಂಡ್ಯುಲಾ ಯಾವ ಕುಟುಂಬಕ್ಕೆ ಸೇರಿದ್ದು, ಅದರ ವೈವಿಧ್ಯತೆ, ಉಪಯೋಗಗಳನ್ನು ತಿಳಿಸು.

ವಿ: ಯಾವ ಗಿಡ ಯಾವ ಕಾಲದಲ್ಲಿ ಹೂ ಬಿಡುತ್ತದೆ, ಕಾಯಿ ಆಗುತ್ತದೆ ಎಂಬುದನ್ನು ಒಂದು ಸೂತ್ರದ ಮೂಲಕ ವ್ಯಕ್ತಪಡಿಸುವುದು. ಅದನ್ನು ''ಡ್ಯೂಲಾ'' ಎಂಬ ವಿಜ್ಞಾನಿ ಕಂಡು ಹಿಡಿದ.

ಪ: ಹೋಗಲಿ, 'ಕಂಪೋಸಿಟೆ' ಅಥವಾ 'ಆಸ್ಟೇರೇಸೀ' ಎಂದು ಕೇಳಿದ್ದೀಯಾ?

ವಿ: ಕಂಪೋಸ್ಟ್ ಬಹಳ ಉಪಯೋಗ ಮಾಡ್ತೀವಿ ನಮ್ಮ ಹೊಲದಲ್ಲಿ ಇದರಿಂದ ಗಿಡ ಮರಗಳಿಗೆ ಪೋಷಕಾಂಶ ಸಿಗುತ್ತದೆ. ಇದನ್ನು ನಮ್ಮ ಹೊಲದಲ್ಲೇ ತಯಾರಿಸುತ್ತೇವೆ. ನಮ್ಮಪ್ಪ ದೊಡ್ಡದೊಂದು ಗುಂಡಿ ತೋಡಿ.....

ಪ: ನೀನಿನ್ನು ಹೋಗಬಹುದು.

ವಿ: 'ಆಸ್ಟೇರೇಸೀ' ವಿಷಯಾನ್ನೂ ಹೇಳ್ಬಿಡ್ತೀನಿ ಸಾ....

ಪ: ಬೇಡ. ನೀನು ಹೋಗು.

ವಿ: ಅಂದರೆ, ನಾನು ಪಾಸ್ ಅಂತ, ಅಲ್ವಾ ಸಾ....! ಓ. ಸ್ಸಾ... ತುಂಬಾ ಥ್ಯಾಂಕ್ಯೂ ಸ್ಸಾ. ಥಾಂಕ್ಯೂ ಸ್ಸಾ.
(ಕಂಪೋಸಿಟೆ ಎನ್ನುವ ಕುಟುಂಬಕ್ಕೆ 'ಆಸೇರೇಸಿ' ನವನಾಮ ಈ ಕುಟುಂಬಕ್ಕೆ ಸೇರಿದ ಹೂವಿನ ಗಿಡ 'ಕಾಲೆಂಡ್ಯುಲಾ')

ಪ: (ಬೆವರೊರೆಸಿಕೊಳ್ಳುತ್ತಾ) ಮುಂದಿನ ನಂಬರ್ - ನೆಕ್ಸ್ಟ್, ವೈವಾಗೆ ಬಾರಪ್ಪ, ತಂದೆ. ಒಂದೆರಡು ಅವೆನ್ಯೂ ಮರಗಳ ಹೆಸರು ಹೇಳು. ಬೇಗ ಹೇಳಿದ್ರೆ ಬೇಗ ಕಳಿಸ್ಬಿಡ್ತೀನಿ. ನಿನ್ನನ್ನು.

ವಿ: ಟ್ರೈಡೆಕ್ಸ್ ಪ್ರೊಕಂಬೆನ್ಸ್
("ಕಾಸು ಕೊಡ್ತೀಯೋ ತಲೆ ಒಡೀಲೋ" ಎಂದು ಥಟ್ ಎಂದು ಹೊಡೀತಿದ್ದೆ ನಾವೆಲ್ಲಾ ಮಕ್ಕಳಾಗಿದ್ದಾಗ ಆ ಗಿಡದ ಹೂವನ್ನು!)

ಪ: ನಿನ್ನ ಹೆಸರೇನಯ್ಯಾ, ಏನಂದೆ, ವಾಮನ್ ರಾವ್ ಅಂದ್ಯಾ? ನಿನ್ನ ಎತ್ತರ 6 ಅಡಿನಾ? ವ್ಹಾ. ಇಷ್ಟು ಎತ್ತರದ ಹುಡುಗ ಟ್ರೈಡೆಕ್ಸ್ ಗಿಡದ ಕೆಳಗೆ ಹೇಗೆ ನಡೆದುಕೊಂಡು ಹೋಗ್ತೀಯಾ ಅಂತ ನನಗೆ ಅನುಮಾನ.

ಓ: ನನ್ನ ಎತ್ತರಾ ನಾ, ಸಾ. ನೀವು ಮೆಚ್ತಿರೋದು? ತುಂಬಾ ಥ್ಯಾ ಕ್ಸ್ ಸ್ಸಾ... ನಾನೆಲ್ಲಿ ಅದರ ಕೆಳಗೆ ನಡೆದೆ? ಅದೇ ನನ್ನ ಕಾಲಿಗೆ ಸಿಕ್ಕಿ ಹಾಕ್ಕೊಳ್ತು ಅಂದೆ, ಸಾ....

ಪ: ನಿನ್ನ ಹೆಸರಿಗೆ ತಕ್ಕಂತೆ ಇದ್ದಿದ್ದರೆ ನೀನು ಟ್ರೈಡೆಕ್ಸ್ ಗಿಡದ ನೆರಳಿನಲ್ಲಿ ನಡೆಯಬಹುದಿತ್ತೇನೋ. ಇರಲಿ ಪಾಸಾಗಬೇಕಾದರೆ ಬೇರೊಂದು ಗಿಡದ ಹೆಸರು ಹೇಳು.

ವಿ: ನನಗೆ ಇಂಗ್ಲೀಷ್ ಅಂದ್ರೆ ಭಯ, ಅದು ನನಗೆ ಬರೋದೂ ಇಲ್ಲ.

ಪ: ಹೆಸರಿಗೆ (ವೈಜ್ಞಾನಿಕ ಹೆಸರಿಗೆ, ಅದೂನೂ) ಭಾಷೆಯ ಅಡ್ಡಿ ಇಲ್ಲ. ಅವೆಲ್ಲಾ ಗ್ರೀಕ್ ಅಥವಾ ಲ್ಯಾಟಿನ್‌ನಿಂದ ಬಂದಿರೋದು. ಆದ್ದರಿಂದ ಯಾವುದಾದರೂ ಇನ್ನೊಂದು ಹೆಸರು ಹೇಳು.

ವಿ: ಇಂಗ್ಲೀಷೇ ಬರದಿದ್ದಾಗ, ಗ್ರೀಕ್... ಇನ್ನೇನೋ ಹೇಗೆ ಬರತ್ತೆ ನನಗೆ? ಹೋಗಲೀ ಅಂತ ಹೇಳ್ತಿದ್ದೀನಿ - ಮಿಮೋಸ ಪುಡಿಕಾ.

ಪ: (ನನ್ನನ್ನುದ್ದೇಶಿಸಿ) ಟ್ರೈಡೆಕ್ಸ್ ಕೆಳಗೆ ನಡೆದರೆ ಮೇಲಲ್ವಾ, ಮೇಡಂ? ಮಿಮೋಸ ಪುಡಿಕಾದಲ್ಲಿ ನೆರಳಿಲ್ಲದಿದ್ರೂ ಮುಳ್ಳು ಅಂತೂ ಇರತ್ತಲ್ಲಾ. ಹೇಗೆ ನಡೆಯೋದು, ಅದರ ಕೆಳಗೆ? (ನಾನು ಶುಷ್ಕ ನಗೆ ಬೀರಿದೆ)

ಪ: ನೆಕ್ಸ್ಟ್.....

ಪ: 'ಲಾಸೋನಿಯಾ ಇಸರ್ಮಿಸ್' ಎಂಬುವ ಗಿಡದ ತೆಲುಗಿನ ಹೆಸರೇನು?

ವಿ: ಗೊತ್ತಿಲ್ಲಾ ಸಾ. ರೂ.

ಪ: ನಿನಗೆ ಏನು ಗೊತ್ತಿದ್ಯೋ ಅದನ್ನೇ ಹೇಳಿ ಹೋಗು. ಆದರೆ, ಅದು ಸಸ್ಯಶಾಸ್ತ್ರದ ಬಗ್ಗೆ ಇರಬೇಕು.

ವಿ: ನನಗೆ ಏನೇನೂ ಗೊತ್ತಿಲ್ಲಾ, ಸಾರೂ...

ನಾನು:ಮತ್ತೆ ಎಂ.ಎಸ್ಸಿ. ಡಿಗ್ರಿ ಬೇಕಲ್ಲಾ. ಯಾವುದಾದ್ರು ಒಂದು ಬಟಾನಿಕಲ್ ಹೆಸರು ಹೇಳು.

(ಉತ್ತರ ಹೊರಡಲಿಲ್ಲ)

ನಾನು:(ಪರೀಕ್ಷಕರನ್ನುದ್ದೇಶಿಸಿ) ಹೋಗಲಿ ಬಿಡಿ, ಅವನನ್ನು ಕಳಿಸಿ. ಇನ್ನೊಬ್ಬನನ್ನು ಕರೆಸಿ.

ಪ: ಇಲ್ಲ ಮೇಡಂ, ಇವನ ಬಾಯ ಬಿಡಿಸೇ ಬಿಡಿಸ್ತೀನಿ ಲಾಸೋನಿಯ ಇನರ್ಮಿಸ್‌ಗೆ ಉತ್ತರಾನ ಬೆಟ್ ಕಟ್ತೀರಾ?

ನಾನು:ನಮ್ಮ ದೇವರ ಸತ್ಯ ನಮಗೆ ಗೊತ್ತಿಲ್ವಾ? ಬೇಡ ಸಾರ್, ನೀವು ಸೋಲುವುದು ನನಗೆ ಇಷ್ಟವಿಲ್ಲ. After all, ನೀವು ನಮ್ಮ ಅತಿಥಿಗಳು.

ಪ: ಇಲ್ಲಾ, ನೀವು ಸೋಲುವುದು ನನಗೆ ಇಷ್ಟವಿಲ್ಲ. after all ನೀವು ಒಬ್ಬ ಹೆಣ್ಣುಮಗಳು. ನೋಡ್ತಿರಿ ಈಗ, ನಿಮ್ಮ ವಿದ್ಯಾರ್ಥಿ ಹೇಳೇ ಹೇಳ್ತಾನೆ.

(ವಿದ್ಯಾರ್ಥಿಯನ್ನು ಕುರಿತು, ತೆಲುಗಿನಲ್ಲಿ)

ಸುಜಾತ ಚೇಸಿನ ಮೊದಟಿ ಪಿಕ್ಚರ್ ಏದಿ?

ವಿ: ಗೋರಿಂಟಾಕು (ತಟ್ಟನೆ ಬಂತು ಉತ್ತರ!)

ಪ: ನೋಡಿದಿರಾ, ಮೇಡಂ. ಹೇಗೆ ಹೇಳಿಸಿದೆ, ಉತ್ತರಾನ?

ನಾನು:ನಿಮ್ಮ tacticsಗೆ ಅಭಿನಂದನೆಗಳು. ನನಗೆ ಈ ತರಹದ ಚಾಕಚಕ್ಯತೆ ಇಲ್ಲ, ಪ್ರೊಫೆಸರ್ ನಿಜವಾಗಿ ಸೋಲೊಪ್ಪಿಕೊಂಡೆ.

ವಿ: ನಾನಿನ್ನು ಹೋಗಬಹುದೇ ಸ್ಸಾರೂ?

ಪ: ಇರು, ಇನ್ನೊಂದು ಪ್ರಶ್ನೆ - ಶ್ರೀದೇವಿ ಮತ್ತು ಮಾಧುರಿ ದೀಕ್ಷಿತ್ ಇಬ್ಬರ ಕಣ್ಣುಗಳನ್ನು ಮಾತ್ರ ಫೋಟೊ ತೆಗೆದಿಟ್ಟರೆ ಯಾರಿಗಾದರೂ ಅದನ್ನು ಗುರ್ತಿಸಲಾಗುತ್ತದೆಯೆ?


ವಿ: ಯಾಕಾಗೊಲ್ಲಾ ಸಾರೂ, ನಾನೇ ಮಾಡ್ತೀನಿ - ಶ್ರೀದೇವಿ ಕಣ್ಣು ಮಾಧುರಿ ಕಣ್ಣಿಗಿಂತ ಅಗಲವಾಗಿರುತ್ತೆ.


ಪ: ಇಷ್ಟೇ ಕ್ರಿಟಿಕಲ್ಲಾಗಿ ಸಸ್ಯಶಾಸ್ತ್ರವನ್ನೂ ಕಲಿಯಲು ಪ್ರಯತ್ನಿಸು. ಇನ್ನು ನೀನು ಹೋಗಬಹುದು. ನೆಕ್ಸ್ಟ್... ಎಸ್ಸ್ ಕೂತ್ಕೊಪ್ಪಾ. ನಿನಗೆ ಜೆನಿಟಿಕ್ಸ್‌ನಲ್ಲಿ ಇಂಟರಸ್ಟ್ ಅಲ್ವಾ. ಅದರಲ್ಲೇ ಕೇಳ್ತೀನಿ, Incomplete dominance ಬಗ್ಗೆ ಒಂದೆರಡು ಮಾತು ಹೇಳು, ಉದಾಹರಣೆಯೊಂದಿಗೆ.

ವಿ: ನಾನೇ ಅದಕ್ಕೆ ಉದಾಹರಣೆ ಸಾರ್ ನಮ್ಮಪ್ಪ ತುಂಬಾ ಸಲೀಸು ಅಮ್ಮ ತುಂಬಾ ಸ್ಟ್ರಿಕ್ಟು - ನಾನು ಸರಾಸರಿ - ಹೇಗೆ ಅಂತೀ ? ಪಾಕೆಟ್‌ಮನಿ ಅಪ್ಪನಿಂದ ಎಳೆಯೋವಾಗ ಬಹಳ ಸ್ಟ್ರಿಕ್ಟಾಗಿ ವಸೂಲ್ ಮಾಡ್ತೀನಿ. ಅದೇ ಟೈಮಿಂಗ್ಸ್ ಮೈನ್‌ಟೈನ್ ಮಾಡೋವಾಗ ಬಹಳ ಸಲೀಸಾಗಿ ಈಸಿಯಾಗಿರ್ತೀನಿ. ಇನ್ನೊಂದು.....

ಪ: ಭಲೆ, ಸುಪುತ್ರುಡು! ಸಾಕು, ಇನ್ನೇನೂ ಹೇಳದೆ ಹೊರಟುಹೋಗು (ನನ್ನನ್ನು ಬದುಕಿಸು ಅಂತ ಪಿಸುಗುಟ್ಟಿದರು)

ಇನ್ನೂ ಈ ರೀತಿಯ ಪ್ರಸಂಗಗಳು ನನ್ನಲ್ಲಿ ಬಹಳವಾಗಿ ಶೇಖರವಾಗಿವೆ. ಆಗುತ್ತಲೂ ಇರುತ್ತವೆ ಇನ್ನು ಮುಂದೆ ಎಂಬ ಭರವಸೆ ನನಗಿದೆ. ಸ್ವಲ್ಪ ದಿನ ಬಿಟ್ಟು, ಇನ್ನೊಂದು ಕಂತು ಕಳಿಸ್ತೀನಿ! ಅಲ್ಲಿಯವರೆಗೆ ತುಂಬಾ ಆಗ್ಬಿಟ್ರೆ. ಪುಸ್ತಕಾನೆ ಬರಿಬೇಕಾಗುತ್ತೋ ಏನೋ ದೈವೇಚ್ಛೆ!





With Best

Compliments from



Mr. & Mrs. Devi Prasad

With Best Compliments

from

M/s. PRAVEEN METAL CORPORATION

14, Jain Temple Street,

Visveswarapuram,

Bangalore - 560 004.

ಉಕ್ತಿ - ಚಾಟೂಕ್ತಿ

✧ ಎನ್. ರಾಮನಾಥ್

'ಪಾಕ್ ಆಕ್ರಮಿತ ಕಾಶ್ಮೀರ ಪ್ರದೇಶ ಪಾಕ್‌ದೇ ಎಂಬಂತೆ ಗೂಗಲ್ ತೋರಿಸಿದೆ'
- ಸುದ್ದಿ

ಚರಿತ್ರೆಹೀನರ ಭೂಗೋಳಹೀನರ ವಿಚಿತ್ರ, Jumble google?
ಹಾಡಹಗಲೇ ಬಿತ್ತರಿಸಿರುವ ಅಸತ್ಯದ ವಿರುದ್ಧವೆತ್ತಿರಿ ಕೊರಳ್

★★★

'ರಷ್ಯಾಃ ಜನಸಂಖ್ಯೆಗೇ ಇಲ್ಲಿ ಬಡತನ'
- ಸುದ್ದಿ

'ನಾಲ್ಕು ವಿವಾಹ, ಹತ್ತು ಮಕ್ಕಳ' ಧರ್ಮವನಲ್ಲಿಗೆ ತಲುಪಿಸಿರಿ
ಒಂದೇ ದಶಕದಿ ಸಂಖ್ಯಾಸ್ಫೋಟದಿ ತತ್ತರಿಪುವುದಂ ಕಾಣುವುರಿ

★★★

'ದಲಿತ ಕ್ರೈಸ್ತರಿಗೆ ಮೀಸಲಾತಿ ಪರಿಶೀಲನೆ'
- ಸುದ್ದಿ

ದಲಿತರೆ ಆಗಲಿ ಕ್ರೈಸ್ತರೆ ಆಗಲಿ quota ನಿಲ್ಲದು, ಕಾಂಗ್ರೆ ಬರಲಿ ಬಾಜಪವಿರಲಿ ಮುಂದುವರಿವುದು
ಸರ್ಕಾರದ ಪ್ರತಿ ಕುರ್ಚಿಗು ಕೂಡಾ quota ಬರುವುದು, ಮುನ್ನಡೆ ಖೋತಾ ಆಗುವುದು

★★★

'ತಿಂಗಳಲ್ಲಿ ಮಹಿಷಿ ವರದಿ ಅನುಷ್ಠಾನಕ್ಕೆ ಯತ್ನ'
- ಧರಂ

ಎಮ್ಮೆಯ ವೇಗದಿ ಸಾಗುವ ಜನತೆಯು ಮಹಿಷಿಯ ವರದಿಯ ಓದಿಹುದೇ?
ಓದಂತಿರಲಿ, IT ಕೆಲಸಕೆ ಭಾಷೆಯರ್ಹತೆಯಲ್ಲ ತಿಳಿದಿಹುದೇ?

★★★

'ಸುಮಾರು 100 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ'

- ಸುದ್ದಿ

ಕರುನಾಡಿನಲಿಹ ಸಕಲ ಕನ್ನಡಿಗರಿಗೆ ಒಮ್ಮೆಯೆ ಕೊಡಿರಿ ಪ್ರಶಸ್ತಿಯನು
ನೂರು ನೂರರ ಕಂತಿನ ಬದಲಿಗೆ ತನ್ನಿರಿ whole sale (ರೀ) ನೀತಿಯನು

★★★

'ನನ್ನದು ತಂತಿ ಮೇಲಿನ ನಡಿಗೆ'

- ಖರ್ಗೆ

ಕಾಂಗ್ರೆ ವೀಣೆ ಧರ್ಮು ತಂತಿ ಸೋನ್ಯಾ ವೈಣಿಕಾ
ಗದ್ದದ ಗೌಡರ ಪಕ್ಕ ವಾದ್ಯಕೆ ಗೀತೆ ಮರಣಾಂತಿಕಾ...

★★★

'ನೊಂದ ಮೂತಿಯಿಂದ ವಿಮಾನ ನಿಲ್ದಾಣ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ'

- ಸುದ್ದಿ

ಒಂಟೆಗಳ ಮದುವೆಯಲಿ ಸುಂದರಿಯರಿಗೆ ಇರದು ಸ್ವಾಗತ
ಅದಕ್ಷರ ನಡುವಿನಲಿ ಮೂರ್ ಖರ ಸಂಗವ ಮೂರ್‌ತಿ ತಾಳದುದು ಸೂಕ್ತ, ಅಹಿತ

★★★

'ಭ್ರಷ್ಟರಿಗೆ ರಕ್ಷಣೆ ಏಕೆ?'

- ಓದುಗರ ಪ್ರಶ್ನೆ

ಕಾಯ್ವ ಪ್ರಭುವು ಅವತರಿಸಲು ಧರ್ಮಭ್ರಷ್ಟತೆಯವಶ್ಯಕವು
ಭ್ರಷ್ಟರಿಲ್ಲದೆ ಧರ್ಮದಾ ಕೊಲೆ ಎಂತು ಆಗಲು ಶಕ್ಯವು?

★★★

'ಶಾಲಾಪಠ್ಯದಿಂದ 'ಕಮಲ' ಚಿಹ್ನೆ ಕೈ ಬಿಟ್ಟ ಮಧ್ಯಪ್ರದೇಶ ಸರ್ಕಾರ''

- ಸುದ್ದಿ

ಲಾಂಛನ ಲಕ್ಷಣ ರಾಜಕಾರಣದಲಿರೆ ಬಹಿಷ್ಕರಿಪುದು ತರವಲ್ಲ
ಕಾಂಗ್ರೆ ಲಾಂಛನ ಬದಿಗೊತ್ತಿದರೆ Biology Study ನಡೆಯೋಲ್ಲ

★★★

'ನಗರದಲ್ಲಿ ತೆಲಗಿ ಆಸ್ತಿ ಖರೀದಿಸುವವರೇ ಇಲ್ಲ'

- ಸುದ್ದಿ

ಸರ್ಕಾರದ ಅತಿ ಭ್ರಷ್ಟ ಅಂಗವ ಸ್ಥಾಪಿಸಿ ತೆಲಗಿಯ ಕಟ್ಟಡದಿ
ಚೋರನ ಭವನದಿ ಚೋರರು ಸೇರ್ದುವೆ ನಿಜಕೂ ಭವನಕೆ ಸೂಕ್ತ ಗತಿ

★★★

ಹೊಸ ಹಾಸ್ಯ ಧಾರಾವಾಹಿ....

✧ ಗುರು

ಈ ಟಿವಿ ಛಾನಲ್ಲಿನಲ್ಲಿ ಈಚೆಗೆ ಶುರುವಾದ ಹೊಸ ''ಹಾಸ್ಯ ಧಾರಾವಾಹಿ'' ಯಾಕ್ ಹಿಂಗಾಡ್ತಾರೋ... ಯುವ ಜನತೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅವರಿಗೆ ಹಾಸ್ಯವನ್ನು ಉಣಬಡಿಸುವ ಕತೆಯನ್ನು ಇದು ಹೊಂದಿದೆ ಎಂದು ಧಾರಾವಾಹಿ ಆರಂಭಕ್ಕೆ ಮೊದಲು ನಿರ್ಮಾಪಕರು ಹೇಳಿಕೊಂಡಿದ್ದರು. ಕತೆ ಬೆಳೆಯುತ್ತಾ ಬಂದ ಹಾಗೆ ಯುವಜನತೆ ಇರಲಿ ಸಾಮಾನ್ಯ ವೀಕ್ಷಕ ಕೂಡ ಅಲ್ಲಿನ ಹಾಸ್ಯವನ್ನು ಮೆಲ್ಲುವುದು ಅಣಕು ಎನಿಸುವ ಹಾಗೆ ಈಗ ಬೆಳವಣಿಗೆಯಾಗುತ್ತಿದೆ.

ಒಂದು ಮದುವೆಯಾಗಿ ಡೈವೋರ್ಸ್ ಮಾಡಿಕೊಂಡಿರುವ ಯುವಕ, ಆತನ ಇಬ್ಬರೋ ಮೂವರೋ ಗಂಡು ಸ್ನೇಹಿತರು, ಅವರ ಎರಡೋ ಮೂರು ಹೆಣ್ಣು ಗೆಳತಿಯರು, ಯಾವಾಗಲೂ ಬಾಯಿ ಆಡಿಸುತ್ತಲೇ ಇರುವ ದಪ್ಪಗಿರುವ ತಿಂಡೀಪೋತ ಪಾತ್ರಧಾರಿಯೊಬ್ಬರು ಮತ್ತು ಪಕ್ಕದ ಮನೆಯಲ್ಲಿಯೇ ವಾಸವಾಗಿರುವ ಈ ಮನೆಯ ವೃದ್ಧ ಮಾಲೀಕ ಇವರ ಸುತ್ತಾ ಕತೆಯನ್ನು ಹೆಣೆಯಲಾಗಿದೆ. ವೃದ್ಧ ಮಾಲೀಕನಿಗೆ ವಯಸ್ಸಿನ ಹುಡುಗಿಯರ ಸಂಗಡ ಚೆಲ್ಲಾಟವಾಡುವ ಚಪಲ: ಡೈವೋರ್ಸ್ ಆಗಿರುವ ಯುವಕನಿಗೆ ಮತ್ತೆ ಮದುವೆ ಮಾಡಿಕೊಳ್ಳುವ ಆಸೆ, ಮನೆಯಲ್ಲಿಯೇ ಇರುವ ಹುಡುಗಿಯರಿಗೆ ಈ ಯುವಕನನ್ನು ಆತನ ದಾಂಧಲೆಗಳಿಂದ ಹೊರತರುವ ಕೆಲಸ... ಹೀಗೆ ಕಥಾ ಹಂದರ ಈಗ ವಿಸ್ತಾರಗೊಳ್ಳುತ್ತಿದೆ.

ಆಗಾಗ್ಗೆ ಹಳೆಯ ಕನ್ನಡ ಚಿತ್ರಗೀತೆಗಳನ್ನು ಇಲ್ಲಿನ ಸನ್ನಿವೇಶಗಳಿಗೆ ಅನುಗುಣವಾಗಿ ಉಪಯೋಗಿಸಿಕೊಳ್ಳುವ ''ಟ್ರೆಂಡ್'' ಅನ್ನೂ ನಿರ್ದೇಶಕರು ತೋರಿಸುತ್ತಾರೆ. ಮಾಮೂಲಿ ಹಾಸ್ಯ ಧಾರಾವಾಹಿಗಳಲ್ಲಿ ಕಾಣುವ ಅಸಂಬದ್ಧ ಸನ್ನಿವೇಶಗಳೂ ಇಲ್ಲಿ ಹೇರಳವಾಗಿವೆ - ಅದೇ ರೀತಿ ಪೋಲೀಸರೂ ರಂಗದಲ್ಲಿ ಬರುತ್ತಾರೆ ಮತ್ತು ಮತ್ತೆ ಹಳೆಯ ಚಿತ್ರಗಳ ಹಾಗೆಯೇ ತಮಾಷೆಗಳಿಗೆ ಒಳಗಾಗಿ ಹೋಗುತ್ತಾರೆ. ವೀಕ್ಷಕ ಬಾಂಧವರು ಎಲ್ಲೆಲ್ಲಿ ನಗಬೇಕು ಎನ್ನುವುದನ್ನು ಸೂಚಿಸಲು ಈ ಧಾರಾವಾಹಿಯಲ್ಲೂ ನಗು ರೆಕಾರ್ಡನ್ನು ಹಿಂದಿನ ಧಾರವಾಹಿಗಳ ರೀತಿಯಲ್ಲೇ ಹಾಕುತ್ತಾರೆ. ಕೆಲವು ಬಿಟ್‌ಗಳು ನಗೆಯನ್ನೂ

ತರಿಸುತ್ತದೆ ಅದೇ ರೀತಿ ಹಲವಾರು ಬಿಟ್‌ಗಳು ನಮ್ಮ ಹಾಸ್ಯದ ಮಟ್ಟವನ್ನು ಕಂಡು ಕಣ್ಣೀರನ್ನೂ ಮೌನವಾಗಿ ಸುರಿಯುವಂತೆ ಮನಸ್ಸನ್ನು ಪ್ರೇರೇಪಿಸುತ್ತದೆ.

ವಯಸ್ಸಾದ ಗಂಡಸರು ಎಂದರೆ ಹುಡುಗಿಯರ ಚಪಲವಿರುವವರು ಎಂಬ ಮೂಲಭೂತವಾದ ನಂಬಿಕೆಯಿಂದಲೇ ಕಥಾನಕದ ಆರಂಭವಿರುವುದರಿಂದ ಈ ನಂಬಿಕೆಯ ಸುತ್ತಾ ಕತೆ ಗಿರ್ಕಿ ಹೊಡೆಯಲೇಬೇಕು.

ಒಂದರ್ಧ ಗಂಟೆ ತಲೆಗೇನೂ ಕೆಲಸ ಕೊಡದೇ ಕೂತು ಅವರು ನಗು ರೆಕಾರ್ಡ್‌ನ್ನು ಹಾಕಿದಾಗ ನಕ್ಕು ಅಲ್ಲೇ ಕಥಾ ಭಾಗದ ಎಲ್ಲವನ್ನೂ ಸುಖವಾಗಿ ಮರೆತುಬಿಡಬೇಕೆನ್ನುವವರಿಗೆ ಹೇಳಿ ಮಾಡಿಸಿದ ಧಾರವಾಹಿ ಇದು. ಸಾಮಾಜಿಕವಾಗಿ ನಿರ್ಮಾಪಕರಿಗೆ, ವೀಕ್ಷಕರಿಗೆ ಹಾಗೆ ನೋಡಿದರೆ ನಮ್ಮೆಲ್ಲರಲ್ಲೂ ಇರಬೇಕಾದ ಕಾಳಜಿ ಬದ್ಧತೆ ಮೊದಲಾದವುಗಳು ಇಲ್ಲಿ ಯಾವ ಕಾರ್ಯವನ್ನೂ ನಿರ್ವಹಿಸದು. ಮತ್ತು ಸೀರಿಯಸ್ ಆಗಿ ಥಿಂಕಿಸುವವರಿಗೆ ಯಾಕಪ್ಪಾ ಟೀವಿ ಮುಂದೆ ಕೂತು ನನ್ನ ಟೈಮನ್ನು ವೇಸ್ಟು ಮಾಡಿಕೊಂಡೆ ಅಂತ ಅನಿಸಿದರೆ ಅದಕ್ಕೆ ನಮ್ಮ ಸಹಮತವೂ ಉಂಟು. ಹಾಸ್ಯ ಧಾರಾವಾಹಿಗಳ ಕೊರತೆ ಅನುಭವಿಸುತ್ತಿರುವಾಗ ಅದೇನೋ ಹಿತ್ತಾಳೆ ಕಡಗವೇ ಮೇಲು ಅಂತಾರೆ ನೋಡಿ ಹಾಗೆ ಈ ಧಾರಾವಾಹಿಯೂ ಭಾವನೆ ಮೂಡಿಸುತ್ತೆ. ಇಷ್ಟೆಲ್ಲಾ ಮೈನಸ್ ಪಾಯಿಂಟುಗಳಿದ್ದರೂ ಒಮ್ಮೊಮ್ಮೆ ಟೀವಿ ಎದುರು ಹಠತೊಟ್ಟು ಕೂತು ತಲೆ ತೆಗೆದು ಪಕ್ಕದಲ್ಲಿಟ್ಟು ಧಾರಾವಾಹಿಗಳನ್ನು ನೋಡಿ ಮುದ ಪಡೆಯಬಹುದು! ಅಷ್ಟೇ ಅಲ್ಲ ತ್ರಿವಿಕ್ರಮನ ಹಾಗೆ ಇಂತಹ ಧಾರಾವಾಹಿಗಳನ್ನು ನಿರ್ಮಿಸುತ್ತಿರುವವರ ಬಗ್ಗೆ ಕರುಣೆಯನ್ನೂ ತೋರಬಹುದು....



ಹಾಸ್ಯಾನ ಈ ರೀತಿ ಕೂಲಂಕಷವಾಗಿ ಪರೀಕ್ಷಿಸೋದ್ರಿಂದ
ಪ್ರಯೋಜನ ಆಗಲಾರದು ಅನ್ಸುತ್ತೆ



ನಮ್ಮೂರಿನಲ್ಲಿ ಬಂತು ಮಹಾಪೂರ!

✧ ಶೋಭಾ ಪ್ರಮೋದ್

ಬಾಲ್ಯದಲ್ಲಿ ಅಭ್ಯಾಸ ಮಾಡಲು ನನಗೆ ಆಲಸ್ಯ ಉಂಟಾಗಿ ''ದೇವರೇ, ದೊಡ್ಡಪೂರ ಬರಲಿ. ನಾನು, ನನ್ನ ಶಾಲೆ, ಗಣಿತ ಶಿಕ್ಷಕರು, ಮಹಾಪೂರದಲ್ಲಿ ಮುಳುಗಿ ಹೋಗಲಿ'' ಎಂದು ಬೇಡಿಕೊಳ್ಳುತ್ತಿದ್ದೆ. ಅದರ ಸತ್ಯಾಂಶ ಮೊನ್ನೆ, ಜುಲೈ 25, 2005 ರಂದು ನನಗಾಯಿತು ಸ್ವಾಮೀ!

ನಮ್ಮ ರಾಯಘಡ್ ಜಿಲ್ಲೆಯಲ್ಲಿ, ಜುಲೈ 21 ರಿಂದ ಸತತ ಮಳೆ ಬೀಳುತ್ತಿತ್ತು. ಜುಲೈ 24ರ ರಾತ್ರಿ ನಾನು ಪತಿಗೆ ''ನೋಡಿ ಸತತ ಮಳೆ ಬೀಳುತ್ತಿದೆ. ನಮ್ಮ ದುಕಾನ್, ಗೋಡಾನ್ ನದಿ ಹತ್ತಿರವೇ ಇದೆ. ಮಹಾಪೂರ ಬರಬಹುದು'' ಎಂದೆ. ಆಗವರು ''ನೋಡು, ದುಕಾನ್‌ದಲ್ಲಿ ಶ್ರೀ ಅಸಾರಾಮಜೀ ಭಾಪು, ಶ್ರೀ ರಾಘವೇಂದ್ರ ಗುರುಗಳ, ಮಂಗೇಶ ಮಹಾಲಕ್ಷ್ಮೀಯರ ಫೋಟೋ ಇದೆ, ದೇವರು ಇದ್ದಾನೆ, ಹೆದರಬೇಡ'' ಎಂದರು.

ಜುಲೈ 25 ರಂದು ಬೆಳಿಗ್ಗೆ ಆರಕ್ಕೆ, ಅಂಗಡಿ ಹತ್ತಿರ ವಾಸಿಸುವ ಒಬ್ಬ ಹುಡುಗಿಯಿಂದ ಫೋನ್ ಬಂದಿತು. ''ಕಾಕಾ, ನಿಮ್ಮ ಅಂಗಡಿ, ಗೋಡಾನ್ ಎಲ್ಲವೂ ನೀರಿನಿಂದ ತುಂಬಿದೆ. ಬೇಗ ಬನ್ನಿರಿ.'' ಹಾಗೆಯೇ ನಾನು ಪತಿ ಮೊಣಕಾಲಿನ ತನಕ ನೀರಿನಲ್ಲಿ ನಡೆಯುತ್ತ, ಅಂಗಡಿ ತಲುಪಿದಾಗ ನೀರು ಸೊಂಟದಷ್ಟಿತ್ತು. ಹೇಗೋ ಮಾಡಿ ಅಂಗಡಿ ಬಾಗಿಲು ತೆರೆದೆವು. ಎಲ್ಲ ಸಾಮಾನುಗಳನ್ನು ನೀಟಾಗಿ ಮೇಲ್ಗಡೆ ಇಡಬೇಕು ಎನ್ನುವಷ್ಟರ ಹೊತ್ತಿಗೆ ನೀರಿನ ಮಟ್ಟ ಇನ್ನಷ್ಟು ಹೆಚ್ಚಾಗಿ, ಚಹಾಪೌಡರ್, ಬಿಸ್ಕಿಟ್, ಬಲ್ಬ್, ಟ್ಯೂಬ್‌ಲೈಟ್ ನೋವಿನೋ ಬ್ಯಾಟರಿಗಳೆಲ್ಲ ಟಾಟಾ ಬೈ-ಬೈ ಗೈಯುತ್ತ ಮಹಾಪೂರದಲ್ಲಿ ತೇಲಿ ಹೋದವು! ಅಂತೂ - ಇಂತೂ ಅಂಗಡಿ ಕದ ಮುಚ್ಚಿದೆವು. ನೀರಿನ ವೇಗ ಒಂದೇ ನಿಮಿಷದಲ್ಲಿ ಮತ್ತಷ್ಟು ಬೆಳೆದು, ನನ್ನ ಕಾಲು ಮೆಟ್ಟಿಲಿನಿಂದ ಜಾರಿತು ''ಇನ್ನೇನು ನನ್ನ ಗತಿ ಮುಗಿಯಿತು'' ಎಂದುಕೊಂಡೆ. ಅಷ್ಟರಲ್ಲಿ ನೆರೆಮನೆಯ ಮುಸ್ಲಿಂ ಯುವಕ ನನ್ನ ಹಿಡಿದೆಳೆದು ಬದುಕಿಸಿದನು. ಅಂತೂ ಮಹಡಿಯ ಮೇಲ್ಗಡೆ ಹೋದೆವು. ನಾನಂತೂ ಪೂರ್ತಿ ಒದ್ದೆಯಾಗಿ ಹೋಗಿದ್ದೆ.

''ಬೆಕ್ಕಿಗೆ ಚೆಲ್ಲಾಟ - ಇಲಿಗೆ ಪ್ರಾಣ ಸಂಕಟ'' ಎನ್ನುವಂತೆ, ನೀರು ಬಾರದ ಜನರೆಲ್ಲರೂ, ನಮ್ಮೂರ ನದಿ ನೋಡಲಿಕ್ಕೆ ಹೋಗಿದ್ದರು. ನಮ್ಮ ಸಮೀಪದ ಅಂಗಡಿಗಳಿಂದ ಬಾಳೆಹಣ್ಣು, ಕೋಳಿ ತೇಲಲಾರಂಭಿಸಿದಾಗ ಅದನ್ನು ಹಿಡಿಯಲು ಆಸೆಬುರುಕ ಮಂದಿ ಮುಗಿಬಿದ್ದಿದ್ದರು!

ರಾಯಘಡ್, ಮುಂಬೈ ಹೀಗೆ ಮಹಾರಾಷ್ಟ್ರದ ಹಲವು ಭಾಗಗಳಲ್ಲಿ ಮಹಾಪೂರ ಉಂಟಾಯಿತು. ನಮ್ಮೂರಿನ ಸಮೀಪದ ಮಹಾಡ್, ದಾಸಗಾಂವ್ ಊರುಗಳು ನಾಶವಾಗಿದ್ದವು. ದಾಸಗಾಂವ್ ಎಂಬಲ್ಲಿ ಗುಡ್ಡವೇ ಉರುಳಿ ಬಿದ್ದು, ನೂರಾರು ಜನರು, ಮನೆ ಎಲ್ಲವೂ ''ಸ್ಯಾಂಡ್‌ವೀಚ್'' ಆಗಿತ್ತು! ಜೊಯೀ ಎಂಬ ಊರೇ ಸರ್ವನಾಶವಾಗಿ ಜನರು ಮಣ್ಣಿನಲ್ಲಿ ಮಣ್ಣಾಗಿಬಿಟ್ಟಿದ್ದರು!

ಎಂದೂ ನಿಲ್ಲದ, ವೇಗದ ಮುಂಬೈ ಕೂಡ, ಮಹಾಪೂರದಿಂದಾಗಿ ನಿಂತಲ್ಲಿಯೇ ನಿಂತುಬಿಟ್ಟಿತು!

ನನ್ನ ಮಗಳು ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದಳು. ''ಅಮ್ಮ ನಮ್ಮ ಮನೆಗೂ ನೀರು ಬರಬೇಕಾಗಿತ್ತು. ಒಬ್ಬರಿಗೆ ಒಂದು ಸಾವಿರದಂತೆ ನಾಲ್ಕು ಸಾವಿರ ಆದರೂ ಸಿಗುತ್ತಿತ್ತು. ನಾನು ಹೊಸ ಸೈಕಲ್ ಕೊಳ್ಳುತ್ತಿದ್ದೆ'' ಎಂದೆನ್ನಬೇಕೇ?!

ನಾನು ಹಲವಾರು ಹಾಸ್ಯ ಬರೆಹಗಳನ್ನು ಬರೆದಿದ್ದೇನೆ ನಿಜ, ಆದರೆ ಬ್ಯಾಂಕ್ ಬ್ಯಾಲೆನ್ಸ್ ಸೊನ್ನೆ ಇರುವ, ನಮ್ಮಂತಹ ಕಿರು ವ್ಯಾಪಾರಿಗಳ ಮೂರು ಲಕ್ಷ ರೂಪಾಯಿ ಮಾಲೇ ಸರ್ವನಾಶವಾಗಿರುವಾಗ, ಮತ್ತೇ ತಲೆ ಎತ್ತಲು ಸಾಧ್ಯವಿದೆಯೇ?! ಮಹಾರಾಷ್ಟ್ರ ಸರ್ಕಾರವು ವ್ಯಾಪಾರಿಗಳಿಗೆ ಇನ್ನೂ ಧನಸಹಾಯ ನೀಡಲಿಲ್ಲ. ಮನೆಗೆ ನೀರು ಬಂದಾಗ ಪ್ರತಿಯೊಬ್ಬರಿಗೆ ಒಂದು ಸಾವಿರ ನೀಡಿದೆ. ಅಕ್ಕಿ, ಗೋಧಿ, ಸೀಮೆ ಎಣ್ಣೆ ನೀಡಿದೆ. ಮನೆ-ಮಠ ಕಳೆದುಕೊಂಡವರಿಗೆ ವಿವಿಧ ಸಾಮಾಜಿಕ ಸಂಸ್ಥೆಗಳಿಂದ ಬ್ಲಾಂಕೆಟ್ಟು, ಚಹಾಪೌಡರ್, ಬಾಲ್ದಿ, ಸಕ್ಕರೆ, ಬಟ್ಟೆಗಳು, ಬಿಸ್ಕಿಟ್ ಇತ್ಯಾದಿ ಸಕಲ ನೆರವು ನೀಡಿದೆ.

ವ್ಯಾಪಾರದಲ್ಲಿ ಸಂಪೂರ್ಣ ನಷ್ಟ ಅನುಭವಿಸಿಯೂ, ಹಾಸ್ಯ ಪ್ರಜ್ಞೆಯನ್ನು ಕಳೆದುಕೊಳ್ಳಬಾರದೆಂದು ನಿಶ್ಚಯಿಸಿದ್ದೇನೆ. ದುಃಖ, ದುಗುಡ, ನಿರಾಶೆ, ಚಿಂತೆಗಳನ್ನು ಮಹಾಪೂರದಲ್ಲಿ ತೇಲಿ ಹಾಕಿ, ಹೊಸ ಭರವಸೆಯಿಂದ ಬದುಕಬೇಕು, ಬರೆಯಬೇಕು ಎಂದುಕೊಂಡಿದ್ದೇನೆ. ನದಿಯ ಹತ್ತಿರವಿರುವ ಜೊಂಡು ಹುಲ್ಲುಗಳು ತೇಲಿ ಹೋಗಲಿಲ್ಲ! ಹಾಗಿರುವಾಗ ನಾವು ಐದು ಅಡಿ ಎತ್ತರವಿರುವ ಮನುಷ್ಯರು ಮಹಾಪೂರಕ್ಕೆ ಹೆದರಿ, ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು. ಮತ್ತೇ ತಲೆ ಎತ್ತಿ ನಿಲ್ಲಬೇಕು, ನೀವು ಏನಂತೀರಾ?

ಹಾಸ್ಯೋತ್ಸವವೂ.... ರೈತನ ಸಲಹೆಯೂ

✧ ವೈ.ಎನ್. ಗುಂಡೂರಾವ್

ಇದೇನಿದು ಹಾಸ್ಯೋತ್ಸವಕ್ಕೆ ರೈತನ ಸಲಹೆ ಎಂದು ಹುಬ್ಬೇರಿಸಬೇಡಿ. ಎಷ್ಟೋ ಕಡೆ ನಡೆಸುವ ಸಮಾರಂಭಕ್ಕೂ, ನಡೆಯುವ ಕಲಾಪಗಳಿಗೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಆದರೆ ಈ ಹಾಸ್ಯೋತ್ಸವದಲ್ಲಿ ಆ ರೀತಿ ಏನೂ ಆಗದೆ ಹಾಸ್ಯೋತ್ಸವಕ್ಕೆ ರೈತಾಪಿ ವರ್ಗದವನೊಬ್ಬ ಅಚಾನಕವಾಗಿ ಬಂದಾಗ ಆತ ಈ ಹಾಸ್ಯೋತ್ಸವವನ್ನು ಯಾವ ರೀತಿ ನೋಡಬಹುದು. ಅವನಿಗೆ ಏನೇನು ವಿಷಯಗಳು ಹೊಳೆಯಬಹುದು, ಅವನ ಸಲಹೆಗಳು ಏನು ಅನ್ನೋದನ್ನ ನೋಡಿ -

ಪ್ರತಿ ವರ್ಷದಂತೆ ನಾವು ಆಚರಿಸುವ ಹಾಸ್ಯೋತ್ಸವಕ್ಕೆ ಈಸಾರಿ ಲೇಕೇಶಿಯನ್ನು ಆಹ್ವಾನಿಸಿದ್ದೆ. ಆತ ಇದ್ದುದು ತಾಲ್ಲೂಕು ಕೇಂದ್ರವಾಗಿದ್ದರಿಂದ ಏನಾದರೊಂದು ಕಾರ್ಯಕ್ರಮ ಹಮ್ಮಿಕೊಂಡು ಅಲ್ಲಿನ ಜ್ಯೂನಿಯರ್ ಕಾಲೇಜಿನ ಪ್ರಾಧ್ಯಾಪಕರು, ಸಾಹಿತಿಗಳನ್ನು, ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಕಾರ್ಯಕ್ರಮ ಮಾಡುತ್ತಿದ್ದುದರಿಂದ ಅವನೂ ನೋಡಲಿ, ಅವನಿಗೂ ಐಡಿಯಾ ಬರಲಿ ಎಂದೇ ಅವನನ್ನು ಆಮಂತ್ರಿಸಿದ್ದೆ. ಬಂದವನು ಇಡೀ ದಿವಸ ಕುಳಿತು ಹಾಸ್ಯ ಕಾರ್ಯಕ್ರಮವನ್ನು ಬಹಳ ಸೀರಿಯಸ್ಸಾಗಿ ವೀಕ್ಷಿಸಿ ಸಂತೋಷಪಟ್ಟ. ಊರಿಗೆ ಹೊರಟ ಅವನನ್ನು ಕಳುಹಿಸಲೆಂದು ಹೊರಟು ಕ್ರಾಸ್‌ಗೆ ಬಸ್ ಬರಲು ಇನ್ನೂ ವೇಳೆಯಿತ್ತು. ನನ್ಗೆ ಕೆಲವು ಐಡಿಯಾ ಬರ್‍ತಾಯಿದೆ ಎಂದು ಲೋಕೇಶಿ ಪ್ರಾರಂಭಿಸಿದ.

ನಾವು ಮಾಡುವುದು ಸಾರ್ವಜನಿಕ ಕಾರ್ಯಕ್ರಮವಾದುದರಿಂದ ಯಾರಿಂದ ಏನು ಸಲಹೆ ಸೂಚನೆಗಳು ಬಂದರೂ ನಮ್ಮದು ಒಂದು ರೀತಿಯ 'ತೆರೆದ ಬಂದರು'. (ಕೆ.ಎಸ್.ನ ರವರ ಕವನದಂತೆ) ಹೇಳು ಹೇಳು ಅದಕ್ಕೇನಂತೆ ಎಂದೆ.

ಅಲ್ಲಪ್ಪ ಇಷ್ಟೊಂದು ಮಜಭೂತಾದ ಕಾರ್ಯಕ್ರಮ ಮಾಡಿ, ದಿನ ಪೂರ್ತಾ ಬಂದವರನ್ನೆಲ್ಲ ನಗಿಸಿ, ಊಟ ತಿಂಡಿ ವ್ಯವಸ್ಥೆ ಮಾಡಿ, ಎಲ್ಲವನ್ನು ಅಚ್ಚುಕಟ್ಟಾಗಿ ನಡೆಸಿ ಸೈ ಅನ್ನಿಸ್ಕೊಬೇಕಾದ್ರೆ ಕಷ್ಟಾನೆ ಅನ್ನು. ಆದ್ರೂ ಅದು ಹ್ಯಾಗೆ ಮಾಡ್ತಿರೋ ದೇವ್ರಿಗೇ ಗೊತ್ತು. ನಾನೂ ತಾಲ್ಲೂಕು ಕೇಂದ್ರದ ನಮ್ಮ ಜ್ಯೂನಿಯರ್ ಕಾಲೇಜಿಗೆ ಮೂರು ತಿಂಗಳಿಗೊಂದು, ಸಂಜೆ ಎರಡು ಘಂಟೆ ಕಾರ್ಯಕ್ರಮ ಮಾಡ್ಬೇಕು ಅಂದ್ರೆ ಎಗರಿ ಬಿದ್ದೋಗ್ತೀವಿ. ಅಂಥಾದ್ದರಲ್ಲಿ ಅಂದ್ದಂಗೆ ದಿನಾಪೂರ್ತಾ ಮಾಡ್ತೀರೋ. ಅದು ಹ್ಯಾಗೆ

ನಿಭಾಯಿಸ್ತೀರೋ ಎಂದು ಅಚ್ಚರಿ ಸೂಚಿಸುವುದರ ಜೊತೆಗೆ... ಹೀಗೆ ಮಾಡಿದರೆ ಹ್ಯಾಗೆ...? ಎಂದು ಕೆಲವು ಸಲಹೆಗಳನ್ನು ಮುಂದಿಟ್ಟ.

ನಿಮ್ಮ ಕಾರ್ಯಕ್ರಮಕ್ಕೆ ಮುಂಚೆ ಅಂದರೆ ಒಂದೆರಡು ತಿಂಗಳ ಮುಂಚೆ ಹಾಸ್ಯ ಕಾರ್ಯಕ್ರಮಗಳ ಸ್ಪರ್ಧೆ ಏರ್ಪಡಿಸಿಬಿಡಿ ಎಂದ.

ಸ್ಪರ್ಧೆ ಎಂದರೆ ಎಂಥಾದ್ದು? ಹಾಡೆ, ಕುಣಿತವೇ, ನಾಟಕವೇ, ಯಾರಿಗಾಗಿ, ಮಕ್ಕಳಿಗಾ, ದೊಡ್ಡವರಿಗಾ? ಎಂದೆ.

ಅಯ್ ಅದಕ್ಯಾಕೆ ಯೋಚಿಸ್ತೀಯಾ ಮಕ್ಕಳಿಗೇ ಅಂತ ಏರ್ಪಾಡು ಮಾಡಿ, ಆಗ ಮಕ್ಕಳ ತಾಯಂದಿರೂ ಬಂದೇಬರ್ತಾರೆ. ಆಗ ನೋಡು ಹಬ್ಬ... ಅದೇನು ಸಂಕ್ರಾಂತಿ, ಉಗಾದಿ, ದೀಪಾವಳಿ ತರ ಹೊಸ ಹೊಸ ರೇಷ್ಮೆ ಸೀರೆ ಉಟ್ಕೊಂಡು ಬರೋ ಆ ತಾಯಂದಿರನ್ನು ನೋಡೋದೇ ಒಂದು ಚಂದ... ಎರಡು ಕಣ್ಣೂ ಸಾಲದು!

ನನಗೆ ನಗು ತಡೆಯಲಾಗಲಿಲ್ಲ.

ನಗಬೇಡ, ಹೇಗೂ ವರ್ಷಕ್ಕೊಂದಾವರ್ತಿ ಕಾರ್ಯಕ್ರಮ ಮಾಡ್ತೀರಾ. ಅದರ ಜೊತೆಗೆ ಇದೂ ಒಂದು... ಒಂದೇ ಆಸ್ತಿಯ ಎರಡು ಸರ್ವೆ ನಂಬರ್ ಇದ್ದ ಹಾಗಿರುತ್ತೆ ಎಂದ. ಈಗ ನನಗೆ ನಗು ತಡೆಯಲಾಗಲಿಲ್ಲ. ಮತ್ತು ಮುಂದುವರೆಸಿದ.

ಬೇಕಾದ್ರೆ ಕಬ್ಬಿನ ಗದ್ದೆಗೆ ನೀರು ಬಿಟ್ಟಂಗೆ ಜನಪದ ಗೀತೆನೂ ಸೇರಿಸ್ಕೋಬೋದು, ಎಂದು ಹೇಳಿ "ಮೂಡಲ್ ಕುಣಿಗಲ್ ಕೆರೆ ನೋಡೋರ್ಗೊಂದ್ಯೆಭೋಗ! ಮೂಡಿ ಬರ್ತಾನೆ ಚಂದಿರಾ ಮೂ - ತಾನಂದಾನೋ..." ಎಂದು ಕುಣಿಗಲ್ ಕೆರೆ ಜಾನಪದ ಗೀತೆಯನ್ನೇ ಶುರು ಹಚ್ಚಿಕೊಂಡ. ಪಲ್ಲವಿ, ಅನುಪಲ್ಲವಿ ಹಾಡಿ ಮುಗಿಸಿದ ನಂತರ ನೋಡು, ಜೋಳದ ಹೊಲದಲ್ಲಿ ದಪ್ಪದಪ್ಪ ತೆನೆ ಆರಿಸ್ದಂಗೆ ಕೆಲವರಿಗೆ ಬಹುಮಾನ ಕೊಡಲು ಒಂದಿಬ್ರು ಜಡ್ಜ್‌ಗಳನ್ನಿಟ್ಟುಕೊಂಡು, ಅವರು ಕೊಟ್ಟ ತೀರ್ಪಿನ ಮೇಲೆ ಬಹುಮಾನ ಕೊಡ್ಬೋದು.

ಅದರ ಜೊತೆಗೆ ಹೆಸರು ಗಿಡದ ಮಧ್ಯೆ ಉದ್ದಿನ ಸಾಲು ಹಾಕ್ದಂಗೆ ಸಿನಿಮಾ ಹಾಡುಗಳ ಸ್ಪರ್ಧೇನು ಏರ್ಪಡಿಸಬಹುದು. ಇದರಲ್ಲಿ ಏನಪ್ಪ ತೊಂದ್ರೆ ಅಂದ್ರೆ, ದೊಡ್ಡವರಿಗಾದ್ರೆ ಪರವಾಗಿಲ್ಲ, ಸಣ್ಣ ಹುಡುಗರಿಗೆ ಹೇಳಿದ್ರೂ ಕೇಳೋಲ್ಲ. ಹಾಡೋಕೆ ಶುರು ಮಾಡ್ಬಿಟ್ರೆ ಜಿಗಣೆ ತರಹ ಕಚ್ಕೊಂಡು ಬಿಡ್ತಾರೆ. ಅದಕ್ಕೆ ಜೋಳದ ತೆನೆ ಮೇಲಿನ ದುಂಬಿ ಓಡಿಸ್ದಂಗೆ, ಒಂದೊಂದು ಹಾಡಾದ್ಮೇಲೆ ಓಡಿಸ್ತಾಯಿರ್ಬೇಕಷ್ಟೆ.

ಆಮೇಲೆ ಪಾರಿವಾಳದ ಗಿಡಕ್ಕೆ ವೀಳ್ಯೇದೆಲೆ ಹಬ್ಬಿಸ್ದಂಗೆ ಮಕ್ಕಳಿಗೆ ಡಾನ್ಸ್ ಕಾಂಪಿಟೇಷನ್ ಕೂಡಾ ಮಾಡ್ಬೋದು ಎಂದ. ನಾನು ಲೋಕೇಶಿಯ ಸಲಹೆಗಳಿಗೆ ತಲೆದೂಗತೊಡಗಿದೆ. ಹೇಗೆ ಕೆಲವು ಸಾರೆ ಇವನಿಗೆ ಎಲ್ಲೆಲ್ಲಿಂದಲೋ ಐಡಿಯಾಸ್ ಒದ್ಗೊಂಡು ಬಂದ್ ಬಿಡುತ್ತೆ. ಇನ್ನು ಏನೇನು ಬರುತ್ತೋ ಬರ್ಲಿ ಎಂದು ಕಾದೆ.

ಚಿಕ್ಕ ಮಕ್ಕಳು ಒಂದು ಸಾರೆ ಸ್ಟೇಜ್ ಹತ್ತಿಬಿಟ್ರೆ ಬಾಳ ಕಷ್ಟ, ಅವರು ಕೆಲವು ಸಾರೆ ಮಾಡೋದಕ್ಕೆ ಹಿಂಜರಿತಾವೆ. ಆದರೆ ಅವರ ತಾಯಂದಿರಿಗೆ ತಮ್ಮ ಮಕ್ಕಳು ಮಾಡಬೇಕು ಅನ್ನೋ ಆಸೆ, ಎಷ್ಟೋ ಸಾರೆ ತಾಯಂದಿರೇ ಸ್ಟೇಜ್ ಮೇಲೆ ಅಭಿನಯಿಸ್ತಾ, ಅಭಿನಯಿಸ್ತಾ

ಮಕ್ಕಳನ್ನ ಪುಸಲಾಯಿಸೋದನ್ನ ನೋಡೋದೇ ಒಂದು ಚಂದ. ಬೆಟ್ಟದ ತಾವರೆ ಅರಳ್ದಂಗೆ ಮಕ್ಕಳ ಜೊತೆ ತಾಯಂದಿರೂ ಅರಳಿ ಕುಣಿಯೋದನ್ನ ನೋಡ್ಬೇಕು ನೀನು! ಎಂದು ತಾವರೆ ಎಲೆಯಷ್ಟು ಮುಖ ಅಗಲ ಮಾಡಿದ. ಆದರೆ ಬರೇ ಮಕ್ಳೇ ಇದ್ರೆ ಅಷ್ಟು ಕಷ್ಟ ಆಗೋಲ್ಲ. ಒಂದೊಂದು ಹಾಡು ಮುಗಿದ ನಂತರ ಸ್ಪ್ರೆ ಮಾಡಿ ಊಜಿ ನೊಣ ಓಡಿಸ್ದಂಗೆ ಓಡಿಸ್ಬೇಕಾಗುತ್ತೆ. ಈರುಳ್ಳಿ ಹೂವು ಮೊಟದ್ದಂಗೆ ಮೊಟಗಿ ಮೊಟಗಿ ಅವರಿಗೊಂದು ಪ್ರೈಜ್ ಕೊಟ್ಟು ಕಳುಹಿಸಿಬಿಟ್ರೆ, ಸೂರ್ಯಕಾಂತಿ ಹೂವು ಅರಳಿದ್ದಂಗೆ ತಾಯಂದಿರ ಮುಖವೂ ಅರಳಿ ಖುಷಿಯಾಗಿ ಬಿಡ್ತಾರೆ.

ಇನ್ನೂ ಒಂದು ಕೆಲ್ಸ ಮಾಡ್ಬೋದು. ಹನಿ ನೀರಾವರಿ ತರಹ ಸಣ್ಣ ಸಣ್ಣ ಮಕ್ಕಳಿಗೆ ಪ್ರಾರ್ಥನಾ ಶ್ಲೋಕದ ಸ್ಪರ್ಧೆನೂ ಏರ್ಪಡಿಸಬಹುದು. ಪ್ರಾರ್ಥನೆ ಹೇಳೋಕೆ ಶುರು ಮಾಡಿಬಿಟ್ರೆ ಒಂಥರ ದೇವಸ್ಥಾನದ ಕಳೆ ಬಂದುಬಿಡುತ್ತೆ ಸಮಾರಂಭಕ್ಕೆ.

ಅದರ ಜೊತೆಗೆ ಸುಮಾರು ಹದಿನೈದು ಹದಿನಾರು ವರ್ಷದ ಮೊಗ್ಗಿನಂತಹ ಹುಡುಗಿಯರಿಗೆ ಸುಗ್ಗಿ ಡಾನ್ಸ್ ಇಡಿಸಿಬಿಟ್ರೆ, ಭತ್ತದ ಕೊಯ್ಲಿನ ಕಾಲದಲ್ಲಿ ಪರ್ವತಕ್ಕಗಳು ಬಂದಂತೆ ಸಾಲಾಗಿ ಬಿಳಿ ಡ್ರೆಸ್ ಹಾಕ್ಕೊಂಡು, ಮೊಗ್ಗಿನ ರೀತಿ ಕಾಣೋ ಬಾಲೆಯರ ಡ್ಯಾನ್ಸ್ ನೋಡಬೇಕು ನೀನು. ಅವರೇ ಕಾಳು ಹರಗಿದ್ದಂಗೆ ಸಾಲು ಸಾಲಾಗಿ ನಿಲ್ಲಿಸಿಬಿಟ್ರೆ ಎಂಥ ಸೀನು ಕ್ರಿಯೇಟ್ ಆಗಿಬಿಡುತ್ತೆ ಗೊತ್ತಾ? ಬಳೇಸದ್ದು, ಗೆಜ್ಜೆ ಸದ್ದು ಸಾಕು, ಸ್ಟೇಜ್‌ಮೇಲೆ ಬರೇ ಮೋಹಿನಿಯರೇ ತುಂಬ್ಕೊಂಡ್ದಂಗೆ ಕಾಣದಿದ್ರೆ ನನ್ಕೇಳು!


ಬೇಕಾದ್ರೆ ಇದೇ ಹುಡ್ಗೀರ್ನ ಉಪಯೋಗಿಸಿಕೊಂಡು ಸುಣ್ಣ ಹಚ್ಚಿ, ಕೆಂಮಣ್ಣಿನ ಪಟ್ಟಿ ಬಳಿದ ಮಡಕೆಗಳನ್ನು ಸೊಂಟಕ್ಕಿಟ್ಟುಕೊಂಡು ಬರ್ತಾಯಿದ್ರೆ, ಕೊಳದ ಬಳಿ ಕೃಷ್ಣನ ಹತ್ರ ಬರುವ ಥೇಟ್ ಗೋಪಿಕಾ ಸ್ತ್ರೀಯರೇ ಅಂತ ತಿಳ್ಕೊ. ಬೆಳಗ್ಗೆ ಬೆಳಗ್ಗೇನೆ ನೀರಾ ಇಳಿಸಿದ ಮಡಕೆ ಹೊತ್ತವರಂತೆ ತೊನೆದಾಡ್ತಾ, ಹೆಜ್ಜೆ ಹಾಕುತ್ತಾ ಬರ್ತಾಯಿದ್ರೆ ರೈತರು ನೀರಾ ಇಳಿಸಲು ಮಾಡಿದ ಗಲಾಟೇನೂ ಮರ್ತು ಬಿಡ್ತಾರೆ.

ಇನ್ನೂ ಒಂದು ಮಾಡ್ಬೋದು. ಹಿಪ್ಪಲಿ ನೇರಳೆ ತೋಟಕ್ಕೆ ಕಡ್ಡಿ ನೆಡಲು ಸಾಲು ಹೊಡ್ದಂಗೆ ಹುಡ್ಗೀರ ನಿಲ್ಸಿ ಮಂಟೇಸ್ವಾಮಿ ಯಾಚನೆ ಪದ್ಯಾನೋ, ಇಲ್ಲ ಮಲೆಮಾದೇಶ್ವರನ ಬಿಲ್ವಾರ್ಚನೆ ಪದ್ಯಾನೋ ಹಾಕ್‌ಬಿಟ್ರೆ ಏನ್ ನೀಟಾಗಿ ಹಾಡ್ಕೊಂಡು ಡ್ಯಾನ್ಸ್ ಮಾಡ್ಬೋದು ಗೊತ್ತಾ! ಹಿಪ್ಪಲಿನೇರಳೆ ಗೊಂಚಲು ಗೊಂಚಲು ಕೆಂಪು ಹಣ್ಣಿನ ಮಧ್ಯೆ, ಹಣ್ಣಾದ ಕಪ್ಪು ಹಣ್ಣಿನ ರೀತಿ ಸಣ್ಣ ಸಣ್ಣ ಹುಡ್ಗೀರ ಮಧ್ಯೆ ದೊಡ್ಡ ದೊಡ್ಡ ಹುಡ್ಗೀರ್ನ ಹಾಕ್ಕೊಂಡು ಸುಗ್ಗಿ ಡಾನ್ಸ್ ಮಾಡ್ತಿದ್ರೆ ಹೇಗಿರುತ್ತೆ ಗೊತ್ತಾ? ಒಳ್ಳೆ ಸೋನೆ ಮಳೇಲಿ ಬೆಚ್ಚಗೆ ಕಂಬಳಿ ಹೊದ್ಕೊಂಡು ಕೂತಂಗೆ ಜನ ಬಂದು ಕೂತು ಈ ಕಾರ್ಯಕ್ರಮಗಳನ್ನ ನೋಡ್ದಿದ್ರೆ ಕೇಳು! ಎಂದು ಹೇಳಿ ಲೋಕೇಶಿ ಮುಗಿಸಿದಾಗ ಅತ್ತ ಕಡೆಯಿಂದ ಬಸ್ಸು ಬಂತು.

ಹ್ಯಾಗಾದ್ರಾಗ್ಲಿ ಇನ್ನೊಂದ್ಸಾರಿ ಬಂದು ಡೀಟೇಲಾಗಿ ಮಾತಾಡ್ತೀನಿ ಎಂದು ಹೇಳಿದ ಲೋಕೇಶಿ ಬಸ್ಸು ಹತ್ತಿದ. ಸದ್ಯ ಇನ್ನೊಂದು ವರ್ಷ ಪರವಾಗಿಲ್ಲ. ಅವನು ಬರೋದು ಇನ್ನು ಮುಂದಿನ ವರ್ಷಾನೆ! ಎಂದು ಮನೆ ಕಡೆ ನಡೆದ.

★★★

ಅಪರಂಜಿಗೆ ಶುಭಾಶಯಗಳು



ಸುಮಾರು ಐವತ್ತು ವರುಷಗಳಿಂದ
ತಿಳಿನಗೆಯ ಗುಳಿಗೆಗಳನ್ನು ನೀಡುತ್ತಿರುವ
ಕೊರವಂಜಿ ಪರಂಪರೆಗೆ
ನನ್ನ ಹಾರ್ದಿಕ ಶುಭಾಶಯಗಳು

ಪಿ. ಎಮ್. ಪ್ರಕಾಶ್

S.V. SWAMI INDUSTRIES

Total Marketing Solutions People

www.svswami.com



ನಮ್ಮೂರು ಬಸ್ಸು

✧ ನೀರಗುಂದ ಕೇಶವಮೂರ್ತಿರಾವ್

ಲೇಖನದ ತಲೆ ಬರಹ ಓದುವವರೆಲ್ಲರಿಗೂ ತಮ್ಮ ಊರಿನ ಬಸ್ಸಿನ ಪ್ರಯಾಣದ ನೆನಪುಗಳು ಬಾರದಿರದು. ಸಂಬಂಧಿಕರ ಮದುವೆಗೋ ಮುಂಜಿಗೋ ಸಾವಿಗೋ ಬಸ್ಸಿನಲ್ಲಿ ಪಯಣಿಸುವಾಗಿನ ಕಷ್ಟ ಸುಖಗಳು ಕಡಮೆಯದಲ್ಲ. ಇತ್ತೀಚಿನ ಕಾಲದಲ್ಲಿ ಎಲ್ಲೆಂದರಲ್ಲಿಗೆ ರೈಲು, ಬಸ್ಸು, ಸ್ಕೂಟರು, ಕಾರುಗಳಲ್ಲದೆ ವಿಮಾನಯಾನದ ಸೌಕರ್ಯಗಳೂ ಇರುತ್ತದೆ.

ಎಲ್ಲರಿಗೂ ತಾವು ಮೊದಲು ವಾಸಿಸುತ್ತಿದ್ದ ಊರುಗಳ ಬಸ್ಸಿನ ಪ್ರಯಾಣದ ಮರೆಯಲಾಗದ ಘಟನೆಗಳು ಅಚ್ಚಳಿಯದಂತಿರುತ್ತದೆ. ನನಗೂ ಸಹ ನಮ್ಮೂರು ಬಸ್ಸು ಐವತ್ತು ವರ್ಷಗಳ ಹಿಂದೆ ಇದ್ದಿತೆಂಬುದು ನೆನಪಿದೆ. ಅರವತ್ತು ಜನ ಕೂಡ್ರುವ ಬಸ್ಸು ಸೂಜಿ ಬಿದ್ದರೂ ಕೆಳಗೆ ಬೀಳಲಾರದಷ್ಟು ಪ್ರಯಾಣಿಕರನ್ನು ಹೊತ್ತೊಯ್ಯುತ್ತಿತ್ತು. ಈಗಲೂ ಕೆಲವು ಕಡೆ ಇಂತಹ ಪ್ರಯಾಣಿಕರ ಬಸ್ಸನ್ನು ಕಾಣಬಹುದು. ಇರಲಿ ನಮ್ಮೂರು ಬಸ್ಸಿನ ವರ್ಣನೆ ಕೊಂಚದರಲ್ಲಿ ಹೇಳುತ್ತೇನೆ. ಆ ಬಸ್ಸು ಇದ್ದದ್ದು ಕೂಡಲಿಕ್ಕಲ್ಲ - ದೂಡಲಿಕ್ಕೆ! ಒಮ್ಮೊಮ್ಮೆ ದೂಡಿ ಕೂಡಲಿಕ್ಕೆ. ಆ ಬಸ್ಸಿನಲ್ಲಿ ಪ್ರಯಾಣ ಮಾಡಿದ ಅದೃಷ್ಟವಂತ ಮಂದಿಗಳು ನಮ್ಮೂರಿನಲ್ಲಿ ಇನ್ನು ಬದುಕಿ ಉಳಿದಿದ್ದಾರೆ ಎಂದು ಊರಿಗೆ ಹೋದಾಗ ಮಿತ್ರರು ಹೇಳುವುದುಂಟು. ಬಾಗೂರು ಬಸ್ಸಿನ ಬಗ್ಗೆ ಹೇಳ ಹೊರಟರೆ ''ಇವನೇನೋ ರೈಲು ಬಿಡುತ್ತಿದ್ದಾನೆ'' ಎಂದು ನಿಮಗನಿಸಬಹುದು. ನಮ್ಮೂರು ಬಸ್ಸಿನ ಸೀಟುಗಳ ವರ್ಣನೆ ಕೇಳಿದರೆ ಏನಂತೀರೋ. ಒಬ್ಬಟ್ಟಿನ ಹೂರಣದಂತೆ ಒಳಭಾಗವೆಲ್ಲ ಹೊರಗೆ ಬಂದು, ಹೊರ ಭಾಗವೆಲ್ಲಾ ಬಡ ಎತ್ತಿನ ಹೊಟ್ಟೆಯಂತೆ ಒಳಕ್ಕೆ ಸರಿದಿತ್ತು. ಇಷ್ಟೆಲ್ಲಾ ಇದ್ದರೂ ಮೇನ್ ರೋಡಿನ ಒಂದೆರಡು ಮನೆಯವರು (ನಮ್ಮ ಮನೆಯೂ ಮೇನ್ ರೋಡಿನಲ್ಲೇ ಇದ್ದದ್ದು) ''ಈ ದಿನ ಇನ್ನೂ ಮೋಟಾರೆ ಬಂದಿಲ್ಲ. ಅದಕ್ಕೆ ಊಟವೇ ಸರಿಯಾಗಿ ಸೇರಲಿಲ್ಲ'' ಎನ್ನುತ್ತಿದ್ದರು. ಬರುತ್ತಿದ್ದುದ್ದು ಒಂದೇ ಬಸ್ಸಾದರೂ ದಿನಕ್ಕೆ ನಾಲ್ಕು ಸಲ ಓಡಾಡುತ್ತಿತ್ತು. ಬೆಳಗ್ಗೆ ಮೇಲ್ ಬಸ್, ಹತ್ತು ಗಂಟೆಗೆ ಪ್ಯಾಸಂಜರ್ ಬಸ್, ಮಧ್ಯಾಹ್ನ ಮೂರು ಗಂಟೆಗೆ ಲೋಕಲ್ ಬಸ್ಸು, ರಾತ್ರಿ ಒಂಬತ್ತು ಗಂಟೆಗೆ ಮೇಲ್ ಬಸ್ಸು. ಸಮೀಪದ ರೈಲು ನಿಲ್ದಾಣದ ರೈಲುಗಳು ಬರುವ ವೇಳೆಗೆ ಈ ಬಸ್ಸಿನ ಓಡಾಟ. ಈಗೇನೋ ನೂರಾರು

ಬಸ್ಸುಗಳಿವೆ. ಆದರೂ ಅಪರೂಪಕ್ಕೆ ಊರಿಗೆ ಹೋದರೆ ಕುರಿಗಳನ್ನು ತುಂಬುವ ವ್ಯಾನ್ ನೆನಪಿಗೆ ಬರುತ್ತವೆ!

ಆ ಕಾಲಕ್ಕೆ ಬೆಂಗಳೂರಿನಿಂದ ಬಾಗೂರಿಗೆ (ನಮ್ಮೂರಿಗೆ) ಹೊಸದುರ್ಗದವರೆಗೂ ಕುಡಿದ ನೀರು ಅಲುಗಾಡದ ಹಾಗೆ ಹೋಗುತ್ತಿದ್ದವು. ಅಲ್ಲಿಂದ ಆರು ಮೈಲಿ ದೂರದ ನಮ್ಮೂರು ಬಾಗೂರಿಗೆ ಹೋಗಬೇಕಾದರೆ ಪಯಣಿಸಿಯೇ ಅನುಭವಿಸಬೇಕಾಗಿತ್ತು.

ರಾಜ್ಯದ ನಾನಾ ಭಾಗಗಳಿಗೆ ಜಿಲ್ಲೆ, ತಾಲ್ಲೂಕು ಗ್ರಾಮಾಂತರ ಪ್ರದೇಶಗಳಿಗೆ ಇಂದು ಬಸ್ಸು ಸೌಕರ್ಯ ಚೆನ್ನಾಗಿಯೇ ಇದೆ. ಬೆಂಗಳೂರಿನ ಬಿ.ಟಿ.ಎಸ್. ಪ್ರಯಾಣ ಇಲ್ಲಿನವರಿಗೆ ಪ್ರತಿದಿನದ ಕಾಯಕ! ಇನ್ನೇನು ಮೆಟ್ರೋ ರೈಲು ನಿರ್ಮಾಣವಾದರೆ ಬೆ.ನ.ಸಾ. ಕಡಿಮೆಯಾಗಬಹುದೇನೋ?

ರೈಲಿನಲ್ಲಿರುವಂತೆ ಬಸ್ಸುಗಳಲ್ಲಿ ಪ್ರಥಮ, ದ್ವಿತೀಯ, ಮೂರನೆ ದರ್ಜೆಯ ಸೌಲಭ್ಯಗಳಿರುವುದಿಲ್ಲ. ಗ್ರಾಮಾಂತರ ಪ್ರದೇಶದ ಬಸ್ಸುಗಳನ್ನು ನೋಡಬೇಕು. ಒಳಗೆ ಕುರಿಗಳಂತೆ ಉಸಿರಾಡಲೂ ಜಾಗವಿಲ್ಲದಂತೆ ಪ್ರಯಾಣಿಕರಿದ್ದರೂ ಅಷ್ಟೆ ಜನ ಟಾಪಿನ ಮೇಲೆ ಮಳೆ ಗಾಳಿ ಬಿಸಿಲಿನಲ್ಲಿ ಕುಳಿತು ಪ್ರಯಾಣ ಮಾಡುತ್ತಿರುತ್ತಾರೆ.

'ಬೆಂಗಳೂರು ಬಸ್ಸು' ಕಾದಂಬರಿ ಬರೆದಿರುವ 'ಉತ್ತರ ಭೂಪ' ಬೀchi ಯವರು ಬಸ್ಸಿನ ಬಗ್ಗೆ ಓದುಗರೊಬ್ಬರು ''ರೈಲಿನ ಗಾಡಿಗಳಲ್ಲಿ ಮೂರು ತರಗತಿಗಳಿರುವಂತೆ ಬಸ್ಸುಗಳಲ್ಲೂ ಏಕಿಲ್ಲ?'' ಎಂಬ ಪ್ರಶ್ನೆಗೆ ''ಇವೆಯಲ್ಲಾ ಗೌಡರೆ? ಕೇವಲ ರಸ್ತೆಗಳ ಮೇಲೆ ಮಾತ್ರ ಓಡುವುದು, ಪುಟ್‌ಪಾತ್ ಮೇಲೇರಿ ಅಲ್ಲಿ ಕುಳಿತಿದ್ದವರನ್ನು ಕೊಲ್ಲುವುದು ಮತ್ತು ಗುಡಿಸಲು ಹೊಕ್ಕು ಅಲ್ಲಿ ಮಲಗಿರುವವರನ್ನು ಹುಡುಕಿ ತುಳಿಯುವುವು. ಹೀಗೆ ಮೂರು ತರಗತಿಗಳಿವೆ'' ಎಂದು ಉತ್ತರಿಸಿದ್ದಾರೆ. ಕೆರೆಗೆ ಬಿದ್ದ, ಮರಕ್ಕೆ ಢಿಕ್ಕಿ ಹೊಡೆದ, ಕುಡಿದ ಮತ್ತಿನಲ್ಲಿ ಓಡಿಸುವಾಗಿನ ಅಪಘಾತಗಳು ಪ್ರತಿದಿನ ಪತ್ರಿಕೆಯಲ್ಲಿ ಓದುತ್ತಿದ್ದರೂ ಬಸ್ಸಿನಲ್ಲಿ ಪ್ರಯಾಣ ಅನಿವಾರ್ಯ.

ಸರ್ಕಾರ ವಿವಿಧ ರೀತಿಯ ಸೌಲಭ್ಯವುಳ್ಳ ಬಸ್ಸುಗಳನ್ನು ರಾಜ್ಯಾದ್ಯಂತ ಓಡಿಸುತ್ತಿದೆ. ಕಾಲಕಾಲಕ್ಕೆ ನಗರಗಳಲ್ಲೂ ಬಸ್ಸಿನ ಸೌಕರ್ಯ ಸುಧಾರಿಸಿದೆ ಅಂದರೆ ವೇಳೆಗೆ ಸರಿಯಾಗಿ ಬಸ್ಸುಗಳು ಬರುತ್ತವೆ! ಒಂದು ಕಾಲಕ್ಕೆ ಗಂಟೆಗಳು ಉರುಳಿದರೂ ಬಸ್ಸು ಬರುವ ಸುಳಿವೇ ಇರುತ್ತಿರಲಿಲ್ಲ. ಈ ಕುರಿತು ಆಕಾಶವಾಣಿ ಈರಣ್ಣ (ಎ.ಎಸ್. ಮೂರ್ತಿ) ಒಮ್ಮೆ ಕಾರ್ಯಕ್ರಮದಲ್ಲಿ ಬಿತ್ತರಿಸಿದ ಚುಟುಕು ನೆನಪಿಗೆ ಬರುತ್ತದೆ - (ಬಸ್ ಸ್ಟ್ಯಾಂಡಿನಲ್ಲಿ ಸಂಜೆ ಬಸ್ಸಿಗಾಗಿ ಕಾಯುತ್ತಿದ್ದಾಗ)

ಕತ್ತಲಾಯಿತಲ್ಲ
ಬಸ್ಸು ಬರಲಿಲ್ಲ
ಮಳೆಯು ಬಂತಲ್ಲ
ಮನೆಗೆ ಹೋಗಲಾಗಲಿಲ್ಲ
ಮಳೆಗೆ ಅಂಜಿ ಮನೆಗೆ
ಓಡಿ ಹೋಗುವಾಗ
ಜೋಡು ಎಡವಿ ಬಿದ್ದೆನಲ್ಲ!

ಬಸ್ಸಿನ ಕುರಿತಾದ ಅನುಭವಗಳನ್ನು ವಿಶ್ವೇಶ್ವರ ಭಟ್‌ರವರ ''ವಕ್ರತುಂಡೋಕ್ತಿ'' ಗಳನ್ನು ಓದುತ್ತ ಅನುಭವಿಸಬೇಕು. ಬಸ್ಸಿನ ಅನುಭವವಿಲ್ಲದೆ, ಓದದೇ ಇರುವವರಿಗಾಗಿ ಕೆಲವು ಆಯ್ದ 'ತುಂಡೋಕ್ತಿ'ಗಳು ಇಲ್ಲಿವೆ.

ಬಸ್ಸಿನಲ್ಲಿ ಓದಬಹುದೆಂದು ಪೇಪರ್ ಕೊಂಡರೆ ಅದನ್ನು ಬೇರೆಯವರೆ ಹೆಚ್ಚಾಗಿ ಓದುತ್ತಾರೆ.

★★★

ಬಸ್ ಕಂಡಕ್ಟರ್ ಸದಾ ಬಲ ಪಂಥೀಯ. ಆತ ಯಾವತ್ತೂ 'ರೈಟ್' ಅಂತಾನೇ ಇರ್ತಾನೆ.

★★★

ಬಸ್ಸಿಗೆ ಕಾಯುವವನೇ ಆಶಾವಾದಿ

★★★

ಇಡೀ ಸಿಟಿ ಬಸ್ ಖಾಲಿ ಇದ್ದರೂ ಕೆಲವು ಪ್ರಯಾಣಿಕರಾದರೂ ಬಾಗಿಲ ಬಳಿಯೇ ನಿಂತಿರುತ್ತಾರೆ.

ಸಿಟಿ ಬಸ್ ಕಂಡಕ್ಟರ್‌ನಿಗೆ ಎಂಜಲು ಹಚ್ಚದೇ ಟಿಕೇಟ್ ಹರಿಯಲು ಬರುವುದಿಲ್ಲ.

★★★

ಬಸ್ಸು ರೈಲಿನಲ್ಲಿ ಒಂದೇ ಪತ್ರಿಕೆಯನ್ನು ಎಷ್ಟು ಜನ ಓದುತ್ತಾರೆಂಬುದನ್ನು ಆಧರಿಸಿ ಪತ್ರಿಕೆಯ ಜನಪ್ರಿಯತೆ ಅಳೆಯುತ್ತಾರೆ.

★★★

ಬಸ್ಸಿನ ಮುಂದಿನ ಸೀಟಿನಲ್ಲಿ ಕುಳಿತ ಇಬ್ಬರು ಹಿಂದೆ ನೋಡಿದರೆ ಎಲ್ಲರೂ ಹಿಂದೆ ನೋಡುತ್ತಾರೆ.

★★★

ತಡವಾಗಿ ಬಸ್ಸು ಹೊರಟರೂ ಒಂದಿಬ್ಬರಾದರೂ ಅದನ್ನು ತಪ್ಪಿಸಿಕೊಳ್ಳುತ್ತಾರೆ.

★★★

ಸಿಟಿ ಬಸ್ಸಲ್ಲಿ ಸುಂದರ ಹುಡುಗಿ ನಿಂತಿದ್ದರೆ ಅವಳು ನಿಮ್ಮ ಕಣ್ಣಿಗೆ ಕಾಣಿಸದಂತೆ ಅಡ್ಡ ನಿಂತಿರುವವರಲ್ಲಿ ಮುದುಕಿಯರೇ ಹೆಚ್ಚು.

★★★

ಬರಲಿಕ್ಕಿಲ್ಲವೆಂದು ಸಿಗರೇಟು ಹಚ್ಚಿದ ಕೆಲವೇ ಕ್ಷಣಗಳಲ್ಲಿ ಬಸ್ಸು ಬರುತ್ತದೆ.

ಈ ಎಲ್ಲಾ ವಕ್ರ ತುಂಡೋಕ್ತಿಗಳ ಅನುಭವ ಒಂದಲ್ಲ ಒಂದು ಸಂದರ್ಭದಲ್ಲಿ ಬಸ್ಸಿನಲ್ಲಿ ಪ್ರಯಾಣ ಮಾಡುವವರಿಗೆಲ್ಲಾ ಹಾಗೇ ಇರುತ್ತದೆ! ನಮ್ಮೂರಿನ ನನ್ನ ಬಸ್ಸಿನ ಅನುಭವಗಳು ಇದೇ ತರಹ!



''ನಾನು ಗಂಡಸಾಗಿದ್ದರೆ....''

✧ ಶ್ರೀದೇವಿ ರಾಜನ್

''ನಾನು ಗಂಡಸಾಗಿದ್ರೆ ಏನು ಮಾಡ್ತಿದ್ದೆ ಗೊತ್ತಾ?'' - ಕಾಫಿ ಲೋಟ ತಂದು ಮೇಜಿನ ಮೇಲೆ ಕುಕ್ಕಿ ಜೋರಾಗಿ ಹೇಳಿದೆ.

''ಏನು ಮಾಡ್ತಿದ್ದೆ, ಬೆಳಿಗ್ಗೆ ಏಳುತ್ತಿದ್ದ ಹಾಗೆ ನಿನಗೆ ಈ ಆಸೆ, ಅದರಲ್ಲೂ ಗಂಡಸಾಗಬೇಕಿತ್ತು ಅನ್ನುವ ಆಸೆ ಯಾಕೆ?'' - ಕಾಫಿ ಲೋಟ ಕೈಗೆತ್ತಿಕೊಂಡು ವಿನೋದವಾಗಿ ಕೇಳಿದರು ನನ್ನವರು.

''ನಿಮಗೆ ಚಿತ್ರಹಿಂಸೆ ಕೊಟ್ಟು ಒದ್ದಾಡುವ ಹಾಗೆ ಮಾಡ್ತಿದ್ದೆ''

''ನೀನು ಈಗ ನನಗೆ ಕೊಡ್ತಾ ಇರೋದು ಏನು? ನಾನಾಗಿದ್ದಕ್ಕೆ ಹೇಗೋ ಹೊಂದಿಕೊಂಡು ಹೋಗ್ತಿದೀನಿ''

''ಕೊಟ್ಟಿರುವ ಕಾಫಿಯನ್ನು ಈಗ ಕುಡಿಯಿರಿ. ಸುಮ್ಮನೆ ಮಾತನಾಡಬೇಡಿ. ಭಾನುವಾರವಾದ್ರೂ ಸ್ವಲ್ಪ ನಿಧಾನವಾಗಿ ಏಳೋಣ ಅಂದ್ರೆ ಅದಕ್ಕೂ ಅವಕಾಶವಿಲ್ಲ. ನೀವು ಮಾತ್ರ ದಿನವೂ 8 ಗಂಟೆಯವರೆಗೂ ಬೆಚ್ಚಗೆ ಹೊದ್ದುಕೊಂಡು ಮಲಗ್ತೀರಲ್ಲ! ಒಂದು ದಿನವಾದರೂ ಬೆಳಿಗ್ಗೆ ಬೇಗ ಎದ್ದು ಹಾಲು ತಂದು ಕಾಫಿ ಮಾಡಕ್ಕಾಗಲ್ಲವಾ?'' - ಒಂದೇ ಸಮನೆ ಬಡಬಡಿಸಿದೆ.

''ನೀನೂ ಮಲಗು 8 ಗಂಟೆ ಅಲ್ಲ; 10 ಗಂಟೆಯವರೆಗೂ ಮಲಗು. ಹಿಂದಿನ ದಿನವೇ ಫಿಲ್ಟರ್‌ನಲ್ಲಿ ಕಾಫಿ ಡಿಕಾಕ್ಷನ್ ಹಾಕಿಡು. ತಿಂಡಿಗೆ ದೋಸೆಹಿಟ್ಟು ರುಬ್ಬಿಟ್ಟು ಬಿಡು ಸಾಕು. ಬೇಕಾದಾಗ ನಾನೇ ದೋಸೆ ಹಾಕಿಕೊಳ್ತೀನಿ. ನಿನಗೆ ಶ್ರಮ ಬೇಡ; ಹಾಗೇ ಅಡುಗೇನೂ ಜಾಸ್ತಿ ಮಾಡಿ ತಂಗಳಪೆಟ್ಟಿಗೆಯಲ್ಲಿ ತುಂಬಿಟ್ಟು ಬಿಡು, ಆಮೇಲೆ ಎಷ್ಟು ಹೊತ್ತಿಗಾದ್ರೂ ಏಳು''.

''ಆಹಾ! ತುಂಬಾ ಚೆನ್ನಾಗಿದೆ. ನಾಳೆ ಊಟ ಮಾಡಲಿಕ್ಕೆ ಇವತ್ತೆ ಮಾಡಿಡಬೇಕು. ನಿಮ್ಮ ಮೈಗಳ್ಳತನಕ್ಕೆ ಎಷ್ಟು ಪ್ರಶಸ್ತಿ ಕೊಟ್ಟರೂ ಸಾಲದು'' - ವ್ಯಂಗ್ಯವಾಗಿ ಹೇಳಿದೆ.

''ಒಂದು ವೇಳೆ ನಾನೇ ಗಂಡಸಾಗಿ ನೀವು ಹೆಂಡತಿ ಆಗಿದ್ದರೆ ನಾನು ಹೀಗೆ ಸೋಮಾರಿತನ ಮಾಡಿದ್ದರೆ, ನೀವು ಸುಮ್ಮನೆ ಇರ್‍ತಿದ್ದರಾ? ಯೋಚನೆ ಮಾಡಿ'' - ಮತ್ತೊಮ್ಮೆ ಹರಿಹಾಯ್ದು ಅಡುಗೆ ಮನೆಗೆ ಹೋದೆ.

''ಇವತ್ತು ಡಾಕ್ಟರ್ ಹತ್ತಿರ ಹೋಗಿಬರೋಣ ನಡಿ'' - ನನ್ನ ಹಿಂದೆ ಅಡುಗೆ ಮನೆಗೆ ಬಂದು ಹೇಳಿದರು.

ನಾನು ಪ್ರಶ್ನಾರ್ಥಕವಾಗಿ ನೋಡಿದೆ.

''ಸ್ವಲ್ಪ ದುಡ್ಡು ಖರ್ಚಾದರೂ ಪರವಾಗಿಲ್ಲ. ಲಿಂಗ ಪರಿವರ್ತನೆಗೆ ಶಸ್ತ್ರಚಿಕಿತ್ಸೆ ಮಾಡಿಸೋದಕ್ಕೆ ವಿಚಾರಿಸೋಣ. ನಿನ್ನ ಈ ಒಂದು ಆಸೆಯನ್ನಾದ್ರೂ ತೀರಿಸ್ತೀನಿ, ಹೇಗೂ ವಯಸ್ಸಾಯಿತು. ನೀನೂ ಗಂಡಸಾದ್ರೆ ಒಳ್ಳೆ ಗೆಳೆಯರ ತರಹ ಇರೋಣ'' - ವಿರಕ್ತ ದೇವದಾಸನಂತೆ ಹೇಳಿದರು.

''ನಿಮ್ಮ ಜೊತೆ ಗೆಳೆಯನಾಗಿರೋಕೆ ನಾನು ಗಂಡಸಾಗಬೇಕಿತ್ತು ಅಂತ ಬಯಸಲಿಲ್ಲ. ನೀವು ನನಗೆ ಸ್ವಲ್ಪನೂ ಸಹಾಯ ಮಾಡದೆ ಇಷ್ಟೊಂದು ಗೋಳಾಡಿಸ್ತೀರಲ್ಲ ಅದಕ್ಕೆ ನಾನು ಗಂಡನಾಗಿ ನಿಮ್ಮ ಮೇಲೆ ದರ್ಬಾರು ತೋರಿಸಬೇಕು ಅಂತ ನನ್ನಾಸೆ'' - ಸೇರಿಗೆ ಸವಾಸೇರಾಗಿ ಹೇಳಿದೆ.

''ನಿನ್ನನ್ನು ಗೋಳಾಡಿಸುವಷ್ಟು ಧೈರ್ಯ ನನಗೆಲ್ಲಿದೆ? ತಾನಾಯಿತು ತಾನು ಮೇಯುವ ಸೊಪ್ಪಾಯಿತು ಅನ್ನುವಂತೆ ನೀನು ಹಾಕಿದ್ದು ತಿಂದುಕೊಂಡು ಬದುಕುತ್ತಿರುವ ಸಾಧುಸಜ್ಜನ ನಾನು. ನನ್ನ ಮೇಲೆ ಇಂಥಹ ಆರೋಪ ಮಾಡ್ತೀಯಲ್ಲ ದೇವರು ಮೆಚ್ತಾನಾ?''

''ಸೃಷ್ಟಿ ಮಾಡಿರೋ ಬ್ರಹ್ಮನೂ ಗಂಡಸಲ್ವೆ? ಆ ದೇವರೂ ಪಕ್ಷಪಾತ ಮಾಡಿ ಗಂಡಸರಿಗೆಲ್ಲ ಅನುಕೂಲವಾಗುವುದನ್ನೇ ಮಾಡಿದ್ದಾನೆ. ವಿಷ್ಣು ಯಾವಾಗಲೂ ಮಲಗಿಕೊಂಡು ಲಕ್ಷ್ಮಿ ಹತ್ತಿರ ಕಾಲು ಒತ್ತಿಸಿಕೊಳ್ತಾ ಇರ್‍ತಾನೆ. ಮಲಗಿ ಮಲಗೀನೇ ಕೈಕಾಲು ನೋವು ಬಂದುಬಿಡತ್ತೆ ಈ ಗಂಡಸರಿಗೆ, ಇನ್ನು ಕೆಲಸ ಮಾಡಿದರೆ ಗತಿಯೇನು?''

''ನೀನೇನಾದ್ರೂ ಹೇಳು, ದೇವರು ನನ್ನನ್ನಂತೂ ಮೆಚ್ಚಿದ್ದಾನೆ ಕಣೆ, ಅದಕ್ಕೆ ಅವನು ನನಗೆ ಒಳ್ಳೆ ಹೆಂಡತಿಯನ್ನು ಕೊಟ್ಟಿದ್ದು''

''ಆಹಾ... ಇಂತಹ ಬೆಣ್ಣೆ ಮಾತಿಗೆಲ್ಲ ನಾನು ಕರಗಲ್ಲ, ಹೀಗೆ ಗಂಡಸರು ನಮ್ಮನ್ನು ಹೊಗಳಿ ನಯವಾಗಿ, ಎಲ್ಲ ಕೆಲಸ ಮಾಡಿಸಿಕೊಂಡು ರಾಜನ ತರ ಮೆರೆಯೋದು''

''ನಾನೆಲ್ಲಿ ಹಾಗೆ ಮೆರೆಯೋಕಾಗುತ್ತೆ. ಈಗ ರಾಜರ ಆಡಳಿತವೇ ಇಲ್ಲ. ನನ್ನನ್ನು ನೀನು ಬೇಕಾದರೆ ''ರಾಜ'' ಅಂತ ಕರೆಯಬಹುದು, ದುಡ್ಡಿಲ್ಲ, ಕಾಸಿಲ್ಲ ಸಂಪತ್ತಯ್ಯಂಗಾರರು ಅಂತಾರಲ್ಲ ಹಾಗೆ. ನನ್ನ ಶರೀರ, ಶಾರೀರ, ಐಶ್ವರ್ಯ ಯಾವುದಾದರೂ ರಾಜನಿಗೆ ಇರೋ ಹಾಗೆ ಇದೆಯಾ? ಏನೋ ನಿನಗೆ ಸಂತೋಷವಾಗುತ್ತೆ ಅಂತಾದರೆ, ನಾನೂ ನಿನ್ನನ್ನು ''ರಾಣಿ'' ಅಂತ ಕರೀಬಹುದು.''

''ಅಬ್ಬಾ, ಮತ್ತೆ ಹೊಗಳಿಕೆ, ನಿಮ್ಮ ಹೊನ್ನಿನ ಶೂಲಕ್ಕೆ ನಾನೇನು ಏರೋದಿಲ್ಲ. ಎಷ್ಟು ಹೊಗಳಿದರೂ ಅಷ್ಟೆ, ನಿಮ್ಮ Lip sympathy ಯಿಂದ ನನಗೇನ್ರೀ ಅನುಕೂಲ. ಚಳಿ ಮಳೆ ಮಂಜು, ಬಿಸಿಲು ಏನೇ ಇರಲಿ ಬೆಳಿಗ್ಗೆಯಿಂದ ರಾತ್ರಿಯವರೆಗೆ ಮೂಗಿಗೆ ಕವಡೆ ಕಟ್ಟಿಕೊಂಡು ಕೆಲಸ ಮಾಡಬೇಕು. ನೀವು ಮಾತ್ರ ದೊರೆ ಮಗನಂತೆ ಆರಾಮಾಗಿ ಎದ್ದು,

ಆರಾಮ ಕುರ್ಚಿಯಲ್ಲಿ ಕುಳಿತುಕೊಂಡು, ನಿಧಾನವಾಗಿ ಪತ್ರಿಕೆ ಓದುತ್ತ ರೇಡಿಯೋ ಕೇಳ್ತಾ enjoy ಮಾಡ್ತೀರಿ.''

''ನನ್ನ ಹತ್ತಿರ ನೀನು ಜಗಳವಾಡ್ತೀಯೋ ಅಥವಾ ಡಾಕ್ಟರ್ ಹತ್ತಿರ ಬರ್ತೀಯೋ''


''ನಿಮ್ಮ ಜೊತೆ ನಾನು ಎಲ್ಲಿಗೂ ಬರೋಲ್ಲ. ನಿಮ್ಮ ಹತ್ತಿರ ನಾನು ಜಗಳ ಆಡದೇನೂ ಬಿಡೋಲ್ಲ.''

ಲೈಫ್ ಪಾರ್ಟ್‌ನರ್ ಆಗಿ ಮನೆಗೆಲಸದಲ್ಲಿ ಪಾರ್ಟ್‌ನರ್ ಆಗಲ್ಲ ಅಂತ ಹೇಳಿ ಫಾರಿನ್‌ನಲ್ಲಿ ಒಬ್ಬಾಕೆ ತನ್ನ ಗಂಡನ ಮೇಲೆ ಕೇಸು ಹಾಕಿದ್ದಾಳಂತೆ. ಅಷ್ಟೆ ಅಲ್ಲ; ಗಂಡ ಮನೆಗೆಲಸ ಮಾಡದೆ ಇದ್ದರೆ, ಹೆಂಡತಿ ವಿಚ್ಛೇದನ ಕೊಡಬಹುದು ಅಂತ ಅಲ್ಲಿ ಈಗ ಕಾನೂನು ಜಾರಿಗೆ ಬಂದಿದೆಯಂತೆ. ನಮ್ಮ ದೇಶದಲ್ಲಿ ಈ ಕಾನೂನು ಬರದಿದ್ದರೂ ನಮ್ಮ ಮನೆಯಲ್ಲಿ ಈ ಕಾನೂನು ಜಾರಿಗೆ ತರ್ತೀನಿ'' - ಖಡಾಖಂಡಿತವಾಗಿ ಹೇಳಿದೆ.

''ಏನೇ ಇದು, ನಿನಗೆ ತಲೆ ಗಿಲೆ ಕೆಟ್ಟಿದೆಯೋ ಹೇಗೆ? ಏನೇನೋ ಮಾತಾಡ್ತಾ ಇದ್ದೀಯಲ್ಲ''

''ನ್ಯಾಯವಾದದ್ದನ್ನು ಕಡಕ್ಕಾಗಿ ಹೇಳಿದಾಕ್ಷಣ ನೀವು ಗಂಡಸರು ಹೆಂಗಸರಿಗೆ ತಲೆ ಕೆಟ್ಟವಳು ಅಂತ ಬಿರುದು ಕೊಟ್ಟು ಬಿಡ್ತೀರಿ. ಕಚೇರಿಯಲ್ಲಿ ನನ್ನನ್ನು ಕಲ್ಕತ್ತಾಕ್ಕೆ 30 ದಿನ ಟ್ರೈನಿಂಗ್ ಹಾಕಿದ್ದಾರೆ. ನಾಳೆ ರಾತ್ರಿ ರೈಲಿಗೆ ಹೊರಡ್ತೀನಿ ನಾನು. ಊರಿಂದ ನಾನು ಬರೋದರೊಳಗೆ ನೀವು ಮನೆಗೆಲಸ, ಅಡುಗೆ ಎಲ್ಲಾ ಕಲಿತಿದ್ದರೆ ಸರಿಹೋಯ್ತು. ಇಲ್ಲದಿದ್ದರೆ ನಾನು ಅಲ್ಲಿಗೇ ಟ್ರಾನ್ಸ್‌ಫರ್ ಮಾಡಿಸಿಕೊಂಡು ಅಲ್ಲೇ ಇರ್ತೀನಿ. ಮುಂದಿನ ಜನ್ಮದಲ್ಲಾದರೂ ನಾನು ನಿಮ್ಮ ಗಂಡನಾಗಿ ನಿಮ್ಮ ಮೇಲೆ ಸೇಡು ತೀರಿಸಿಕೊಳ್ತೇನೆ.'' - ಘೋಷಣೆ ಮಾಡಿದೆ.

''30 ದಿನ ಇರೋಲ್ವೆ?.... ಹಾಗಾದರೆ ಅಷ್ಟು ದಿನ ನನ್ಗತಿ?'' - ತಲೆಯ ಮೇಲೆ ಕೈ ಹೊತ್ತು ಕೂತರು.



ಹಾಸ್ಯಪ್ರಜ್ಞೆ - ಸಮಯ ಪ್ರಜ್ಞೆ

✧ ಪ್ರಾನರ್ವಸು

ಎರಡೂ ಒಂದೇ ಕಡೆ ಇರಲ್ಲ ಅಂತೀರಾ? ಎರಡೂ ಒಬ್ಬರಲ್ಲೇ ಇರಲ್ಲ ಅಂತೀರಾ? ಹಾಗೆ generalise ಮಾಡಕ್ಕಾಗದೆ ಇದ್ದರೂನೂ generally ಒಪ್ಪಿಕೊಳ್ಳಬಹುದೇನೋ!

ಒಂದು ಘಟನೆ ಹೇಳ್ತೀನೆ ನಿಮಗೆ. ಇತ್ತೀಚೆಗೆ ಒಂದು ಊರಿನಲ್ಲಿ ಒಂದು ಹಾಸ್ಯ ಕಾರ್ಯಕ್ರಮ ನಡೆಯಿತು. ಅದ್ಭುತ ಕಾರ್ಯಕ್ರಮ. ಕರ್ನಾಟಕದ ಹೆಸರಾಂತ ಹಾಸ್ಯ ಭಾಷಣಕಾರರಲ್ಲಿ ಮುಕ್ಕಾಲು ಮೂರು ಪಾಲು ಜನರು ಇದ್ದರು, ಭಾಷಣಕಾರರಾಗಿ. ಬೆಳಿಗ್ಗೆಯಿಂದ ಸಂಜೆಯವರೆಗೂ ಕಾರ್ಯಕ್ರಮ. ರಾತ್ರಿ ಒಂಬತ್ತೂವರೆಗೆ ಮುಗಿಯಿತು. ಮುಗಿದ ಮೇಲೆ ಕೆಲವು ಭಾಷಣಕಾರರು ಹೋಟೆಲಿನಲ್ಲಿ ಕುಳಿತಿದ್ದರು - ಕೆಲವರು ಊಟ ಮಾಡುತ್ತಿದ್ದರು ಕೆಲವು ತಿಂಡಿ ತಿನ್ನುತ್ತಿದ್ದರು. ಒಬ್ಬ ಸಹೃದಯರು ಬಂದರು. ಅವರು ಸಭ್ಯರೂ ಹೌದು, ಕಲಾಭಿಮಾನಿಗಳೂ ಅಂತೆ, ಸಾಹಿತ್ಯದಲ್ಲಿ ಆಸಕ್ತಿ, ಹಾಸ್ಯದ ಬಗ್ಗೆ ವಿಶೇಷ ಒಲವು. ಎಲ್ಲಕ್ಕೂ ಮಿಗಿಲಾಗಿ ಒಳ್ಳೆ ವಿಮರ್ಶಕರು, ನಿಷ್ಪಕ್ಷಪಾತಿ. ಇದ್ದದ್ದನ್ನು ಇದ್ದ ಹಾಗೇ ಹೇಳಿದರೆ ಎದ್ದು ಬಂದು ಎದೆಗೆ ಒದ್ದ ಹಾಗಲ್ಲ, ಮನಸ್ಸಿಗೆ ನಾಟಬೇಕು ಆದರೆ ನೋವಾಗಬಾರದು. ಆ ರೀತಿಯಲ್ಲಿ ಹೇಳುವ ಕಲೆ ಕರಗತ (ಅಲ್ಲ, ಬಾಯಿಗತ) ಮಾಡಿಕೊಂಡು ಬಂದವರು. ಆ ದಿನದ ಕಾರ್ಯಕ್ರಮದಲ್ಲಿ ಭಾಷಣ ಮಾಡಿದ ಹಲವರು ಅಲ್ಲೇ ಇದ್ದರು ಅಂತ ಹೇಳಿದ್ದೆನಲ್ಲ. ''ಹೇಗಿತ್ತು ಸಾರ್ ಕಾರ್ಯಕ್ರಮ?'' ಎಂದರು ಒಬ್ಬರು. (ಯಾಕಾದರೂ ಕೇಳಿದೆನೋ ಅನ್ನಿಸಿರಬೇಕು ನಂತರ!) ಅವರು ಸ್ಪಷ್ಟವಾಗಿ ಹೇಳಿದರು, without mincing words ಅಂತಾರಲ್ಲಾ English ನಲ್ಲಿ, ಹಾಗೆ. ''ನೋಡಿ! ನಿಮಗೆಲ್ಲರಿಗೂ ಹಾಸ್ಯ ಪ್ರಜ್ಞೆ ಇದೆ. ಆದರೆ ನಿಮಗ್ಯಾರಿಗೂ ಸಮಯ ಪ್ರಜ್ಞೆ ಇಲ್ಲ.''

ಹೌದಾ ಅನ್ನಿಸಿತು ಕೇಳುತ್ತಾ ಕೂತಿದ್ದ ನನಗೆ. ನಾನೂ ಸಾಕಷ್ಟು ಕಾರ್ಯಕ್ರಮಗಳು - ಹಾಸ್ಯ ಕಾರ್ಯಕ್ರಮಗಳನ್ನು ನೋಡಿದ್ದೇನೆ. ಮೂರಾರು ಜನರಿದ್ದಾಗ ಒಬ್ಬೊಬ್ಬರಿಗೆ 20ಓ, 30ಓ ನಿಮಿಷ ಕೊಟ್ಟಿರುತ್ತಾರೆ ಮಾತನಾಡಲಿಕ್ಕೆ. ಆದರೆ, ಆ ಯಜಮಾನರು ಹೇಳಿದ್ದು ನಿಜ ಅನ್ನಿಸಿತು. Usually, generally, normally and commonly,

ಎಲ್ಲರೂ ಹೆಚ್ಚು ಸಮಯ ತೆಗೆದುಕೊಳ್ಳುವವರೇ. ಯಾಕೆ ಹೀಗೆ? (ಅಥವಾ ಹಾಗೆ?) ಬಹುಶಃ ಜನರ ಚಪ್ಪಾಳೆ, ಕೇಕೆ, ಪ್ರೋತ್ಸಾಹ, ಹುಮ್ಮಸ್ಸು, ಇದೆಲ್ಲದರ ಕಿಕ್ಕು ಅವರನ್ನು ಸಮಯಾತೀತ. ಕಾಲಾತೀತರನ್ನಾಗಿ ಮಾಡುತ್ತದೆಯೋ! ನಮ್ಮ ಸ್ನೇಹಿತರೊಬ್ಬರು ಅಂದರು. ಇವೆಲ್ಲ ನಿಜ. ಆದೆಲ್ಲದರ ಜೊತೆ ಇನ್ನೊಂದೂ ಇದೆ. ಸಂಭಾವನೆ ಹೆಚ್ಚು ತೆಗೆದುಕೊಂಡಿದ್ದಾಗ ಅದಕ್ಕೆ ಸರಿಯಾಗಿ ಮಾತಾಡದಿದ್ದರೆ ಸಂಯೋಜಕರು ಸುಮ್ಮನೆ ಬಿಡುತ್ತಾರಾ, ಇನ್ನೊಂದು ಸಾರಿ ಕರೆಯದೆ sorry ಅಂದರೆ ಈ ಮೇಲಿನ ಮಹನೀಯರು ಬಂದು ಕಾಪಾಡುತ್ತಾರಾ ಎಂದು ಕೇಳಿದರೆ ಏನು ಉತ್ತರ ಹೇಳಬೇಕು? ಅಂದರು. ಸರಿಯೇನೋ ಅನ್ನಿಸಿತು.

ಇನ್ನೊಂದು ಅಪಾಯವೂ ಇದೆ. ಕಾರ್ಯಕ್ರಮದಲ್ಲಿ ಹಲವಾರು ಭಾಷಣಕಾರರಿದ್ದರೆ, ಒಬ್ಬರಿಗೆ ಒಂದು ಘಂಟೆ, ಮತ್ತೆ ಕೆಲವರಿಗೆ 10ಓ 15ಓ ನಿಮಿಷಗಳು. ಇದನ್ನು ಕುಂತಿ ಪದ್ಧತಿ ಎನ್ನಬಹುದು. ಕುಂತಿ ಏನು ಮಾಡುತ್ತಿದ್ದಳಂತೆ ಗೊತ್ತಾ! ವನವಾಸದ ಸಂದರ್ಭದಲ್ಲಿ, ಭಿಕ್ಷೆಯಿಂದ ಬಂದ ಆಹಾರವನ್ನು ಎರಡು ಭಾಗ ಮಾಡುತ್ತಿದ್ದಳಂತೆ. ಒಂದರ್ಧ ಭಾಗವನ್ನು ವೃಕೋದರನಿಗೆ ಕೊಟ್ಟು, ಮಿಕ್ಕರ್ಧವನ್ನು ಮಿಕ್ಕ ನಾಲ್ಕು ಜನರಿಗೆ ಹಂಚುತ್ತಿದ್ದಳಂತೆ. ಇದೂ ಹಾಗೇ ಅಲ್ಲವೇ? ಕೆಲವರಿಗೆ ಒಂದು ಘಂಟೆ ಇನ್ನು ಕೆಲವರಿಗೆ ಕಾಲು ಘಂಟೆ ಅಂದರೆ, ಹಾಗೇ ಅಲ್ಲವೇ? ಇದರಿಂದ ಇನ್ನೊಬ್ಬರ ಸಮಯವನ್ನೂ ಕದ್ದ ಹಾಗಲ್ಲವೇ? (ಜೋಕುಗಳನ್ನು ಕದಿಯೋದು ಬಿಡಿ, ಅದು ಬೇರೆ ವಿಷಯ). ಹಾಗೆ ಇನ್ನೊಬ್ಬರಿಗೆ allot ಆದ ಸಮಯವನ್ನು ಕದಿಯಲು ಏನು ಹಕ್ಕಿದೆ? ಅಥವಾ ನಾನು ಚೆನ್ನಾಗಿ ಮಾತಾಡುತ್ತೇನೆ, ನನ್ನ ಭಾಷಣಾನ ಕೇಳಲು ಜನರು ಕಾತರ, ಆತುರ, ಕಾಳಜಿ, ಆಸ್ಥೆ - ಇವೆಲ್ಲವನ್ನೂ ತೋರಿಸುತ್ತಿರುವಾಗ ನಮಗೆ ಕೊಟ್ಟ ಸಮಯದಲ್ಲಿ ಮುಗಿಸಿ ಕೂತರೆ ಪ್ರೇಕ್ಷಕರಿಗೆ ಅನ್ಯಾಯ ಮಾಡಿದ ಹಾಗಲ್ಲವೇ? ನಾವು ಕಾರ್ಯಕ್ರಮ ಮಾಡುವುದು ಯಾರಿಗೆ? ಪ್ರೇಕ್ಷಕರಿಗೆ ತಾನೇ? ಹೇಳಿ ಹೌದೋ ಅಲ್ಲವೋ ಅಂತ ದಬಾಯಿಸಿದರೆ ಏನು ಉತ್ತರ ಹೇಳಬಹುದು? ಆ ಸಮಯದಲ್ಲಿ ಸಂಯೋಜಕರನ್ನು ದೂರಬೇಕಾಗುತ್ತದೆ ಎನ್ನುತ್ತಾರೆ ಒಬ್ಬರು. ತುಂಬಾ ಚೆನ್ನಾಗಿ ಮಾತನಾಡುವವರ ಪಕ್ಕದಲ್ಲಿ ಸುಮಾರಾಗಿ ಮಾತನಾಡುವವರನ್ನು ಏಕೆ ಕೂಡಿಸಬೇಕು? ಭೀಮನ capacity ಇರುವವರ ಪಕ್ಕದಲ್ಲಿ ನಕುಲನ ಕುಲದವರನ್ನು ಏಕೆ ಸೇರಿಸಬೇಕು? ಒಂದೇ levelನ ಭಾಷಣ ಪಟುಗಳನ್ನು ಕೂಡಿ ಹಾಕಿದರೆ ಸಮಯಾನೂ manage ಮಾಡಬಹುದು, ಸಮಾನತೆಯನ್ನೂ ತರಬಹುದು. ಆದರೆ ಭೀಮನ capacity ಇರುವವರೂ ತಮ್ಮ ಸಮಯದಲ್ಲಿ ಮುಗಿಸುತ್ತಾರೆ ಎನ್ನುವುದಕ್ಕೆ ಏನು ಗ್ಯಾರಂಟಿ ಯಾರು ಗ್ಯಾರಂಟಿ? ಅವರೇ.


ಆದರೆ ಪ್ರಶ್ನೆ ಅದಲ್ಲ, capacity ಎಷ್ಟೇ ಇರಲಿ, ಸಮಯ ಪಾಲನೆ ಮುಖ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದು ಶಿಸ್ತು. ಅದು ಪ್ರತಿಯೊಬ್ಬನಿಗೂ ಇರಲೇಬೇಕು. ಇದಕ್ಕೆ ಹಾಸ್ಯ ಕಾರ್ಯಕ್ರಮ ನೀಡುವವರು ಹೊರತೇನಲ್ಲ ಎಂದು ಅಪ್ಪಣೆ ಕೊಡಿಸಿದರು ಇಷ್ಟು ಹೊತ್ತೂ ನನ್ನೊಡನೆ ಈ ವಿಷಯವನ್ನು ಚರ್ಚೆ ಮಾಡಿದವರು. ಅವರು ಇನ್ನೊಂದು

ಮಾತನ್ನೂ ಹೇಳಿ ತಮ್ಮ ಮಾತನ್ನು ಮುಗಿಸುತ್ತೇನೆ ಅಂದರು. ಪ್ರಖ್ಯಾತ ಹಾಸ್ಯ ಸಾಹಿತಿ ಬೀಚಿ ಒಂದು ಸಾರಿ ಭಾಷಣ ಮಾಡುತ್ತಿದ್ದರಂತೆ. ಭಾಷಣದ ಕೊನೆಯಲ್ಲಿ ಅವರು ಹೇಳಿದ್ದಿಷ್ಟು. "ನೋಡಿ! ಬಹಳಷ್ಟು ಜನಕ್ಕೆ ಭಾಷಣ ಹೇಗೆ ಪ್ರಾರಂಭ ಮಾಡಬೇಕು ಎಂದು ಗೊತ್ತಿರುತ್ತದೆ, ಆದರೆ ಹೇಗೆ ಮುಗಿಸಬೇಕು ಎನ್ನುವುದು ಗೊತ್ತಿರುವುದಿಲ್ಲ, ಅದು ನನಗೆ ಗೊತ್ತು, ಹೀಗೆ" ಎಂದು ಕೈ ಮುಗಿದು ಕುಳಿತರಂತೆ. ಜಿ.ಪಿ. ರಾಜರತ್ನಂ ಅವರ ರತ್ನನೂ ಇದನ್ನೇ ಹೇಳುತ್ತಾನೆ -

"ಕ್ಯೋಳಾವ್ರಿನ್ನಾ ಕ್ಯೋಳ್ಬೇಕೂಂತ ಕುಂತ್ಕೊಂಡಿದ್ದಂಗೇಸೇ,

ಯೋಳೋದೆಷ್ಟೋ ಅಷ್ಟರಲ್ಲೇಳಿ, ಮನೆಗೋಗೋನ್ಗೆ ಮೇನೆ."

ಇದು ಎಲ್ಲಾ ಭಾಷಣಕಾರರಿಗೂ ಅನ್ವಯಿಸುವಂತೆ, ಹಾಸ್ಯ ಭಾಷಣಕಾರರಿಗೂ ಅನ್ವಯಿಸುತ್ತೆ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ ಎಂದು ಹೊರಟರು.





ಗೌರಿಯ ಬೇಡಿಕೆ

✧ ಜಯಾರಾಜಿ

ಆದಿನ ಮಂಕಾಳಿ ರಾಗ ಎಳೆದಳು "ರೀ, ಈ ವರ್ಷ ಸುಮಾ, ಗೌರಿಗೆ ಸೀರೆ ಕೊಡಿಸೊಲ್ಲವಂತೆ." ಗೌರಿ ಹಬ್ಬ ಹತ್ತಿರ ಬರುತ್ತಿದ್ದಂತೆ ಎಲ್ಲರ ಮನೇಲೂ ಹೆಂಗಸರ ಮಾತು ಗೌರಿಗೆ ಉಡಿಸುವ ಸೀರೆಯಿಂದಲೇ ಪ್ರಾರಂಭವಾಗುತ್ತದೆ. ಸೀರೆ ಅಲ್ಲವಾದರೆ ಗೌರಿಗೆ ಮತ್ತೇನ ಕೊಡಿಸಬಹುದು ಆಕೆ... "ಹೌದೇನೆ... ಸೀರೆ ಅಲ್ಲದಿದ್ರೆ ಈಸಲ ಗೌರಿ ಪ್ಯಾಂಟು-ಶರ್ಟ್‌ನ್ನೇ ಕೇಳಿರಬೇಕು... ಒಳ್ಳೆಯದಾಯ್ತು ಬಿಡು... ಪಾಪ, ಗೌರಿ ದೇವಲೋಕದಿಂದ ವರ್ಷಕ್ಕೊಮ್ಮೆ ಬರ್ತಾಳೆ ಅಂತ ಪ್ರತಿ ವರ್ಷ ಗೌರಿಗೆ ಅಂತ ಐದಾರು ಸಾವಿರ ರೂಪಾಯಿಯ ಸೀರೆ ಕೊಂಡ್ಕೊಂಡು ನಂತ್ರ ಮನೆ ಗೌರಿಯರು ಅದನ್ನ ಒಂದೆರಡು ಸಲ ಉಟ್ಟಹಾಗೆ ಮಾಡಿ ಬೀರುವಿನಲ್ಲಿ ಗುಡ್ಡೆ ಹಾಕ್ಬಿಡ್ತೀರಾ... ಸದ್ಯ ಈಸಲ ಸುಮಾನ ಮನೆಯ ಗೌರಿಗಾದರೂ ಪ್ಯಾಂಟು - ಶರ್ಟುನ ಕೊಡಿಸ್ತಾರಲ್ಲಾ... ಸುಮಾನ ಗಂಡನ ಲಕ್ ಬಿಡು. ಹಬ್ಬದ ಮರು ದಿನವಾದ್ರೂ ಪ್ಯಾಂಟು-ಶರ್ಟು ಹೊಸತು ಸಿಗುತ್ತದಲ್ಲಾ.... ಪುಣ್ಯಾತ್ಮನಪ್ಪಾ ಅವನು..." "ಇದೇನ್ರೀ ನೀವೊಳ್ಳೆ ಲಾಲು ರೈಲಿನಂತೆ ಬಿಡ್ಲಿಕ್ಕೇ ಶುರುಮಾಡ್ಬಿಟ್ರಲ್ಲಾ ಸುಮಾ ಗೌರಿಗೆ ಪ್ಯಾಂಟು-ಶರ್ಟು ಕೊಡಿಸೊಲ್ಲ, ಸ್ಕೂಟೀ ಕೊಡಿಸ್ತಾಳಂತೆ" ಮಂಕಾಳಿ ಮುಖ ಬಿಗಿದುಕೊಂಡೇ ಹೇಳಿದಳು. "ಅಂದ್ರೆ, ಸುಮಾನ ಮನೆ ಗೌರಿ ಹಬ್ಬಕ್ಕೆಂತ ಬಂದವಳು, ಹಿಂತಿರುಗುವುದು ಸ್ಕೂಟಿ ಮೇಲೆ ಅಂತಾಯ್ತು" "ಅದೇನಿಲ್ಲಾ, ಸುಮಾ ಕೆಲ್ಸ ಮಾಡೋ ಕಂಪನಿಯ ಆಫೀಸು ಬೇರೆ ಕಡೆ ಶಿಫ್ಟ್ ಮಾಡಿದ್ದಾರಂತೆ. ಆಕೆ ಮನೆಯಿಂದ ದೂರವಾಗುತ್ತದೆಯಂತೆ. ಅದಕ್ಕೇ ಗೌರಿಗೇಂತ ಸ್ಕೂಟಿ ಕೊಂಡ್ಕೊಂಡ್ರೆ, ನಂತ್ರ ಸುಮಾಳಿಗೆ ಆಫೀಸಿಗೆ ಹೋಗ್ಲಿಕ್ಕೆ ಅನುಕೂಲ ಆಗುತ್ತೆ...." "ಪರ್ವಾಗಿಲ್ಲ ಈ ಹೆಂಗಸ್ರೂ ಒಮ್ಮೊಮ್ಮೆ ತಲೆ ಬಳಸ್ಕೊಳ್ತಾರೆ... ತಲೆತೂಗಿದ ಮಾಬ್ಲ.

"ಅಲ್ರೀ, ಈಸಲ ನಮ್ಮನೆ ಗೌರಿಗೂ ಸೀರೆ ಬೇಡಕಣ್ರೆ"

"ಮತ್ತೆ... ಸ್ಕೂಟಿನಾ..." ಬೆದರಿ ಕೇಳಿದ ಮಾಬ್ಲ.


"ಸ್ಕೂಟಿ ತಗೊಂಡು ನಾನೆಂತ ಮಾಡ್ಲಿಕ್ಕೆ... ನಾನೇನು ಆಫೀಸಿಗೆ ಹೋಗ್ತೀನಾ... ಇಲ್ವಲ್ಲ. ಗೌರಿಗೆ ಒಂದು ಒಳ್ಳೆ ಮೊಬೈಲ್ ಕೊಡಿಸೋಣ... ಭಾರತ ಜಗತ್ತಿನಲ್ಲಿಯೇ

ನಂ. 1 ಮೊಬೈಲ್ ದೇಶ ಆಗ್ತಾ ಇದೆಯಂತೆ, ತರಕಾರಿ ಮಾರೋ ಹೆಂಗಸ್ರ ಹತ್ರಾನೂ ಈಗ ಮೊಬೈಲ್ ಇದೆ. ''ಗೃಹಲಕ್ಷ್ಮಿಯ ಮಾತೆಂದರೆ ಮುಗಿಯಿತು... ತೆಗೆದು ಹಾಕುಹಂತಿಲ್ಲ.''

ಒಟ್ಟಾರೆ ಈ ವರ್ಷ ಮಾಬ್ಲನ ಮನೆಯ ಗೌರಿಗೆ ಮೊಬೈಲ್ ಬಂತು. ಎಲ್ಲರಿಗೂ ಅನುಕೂಲವಾಗುತ್ತೆ ಅಂತ ಮಾಬ್ಲ ಎಣಿಸಿದ್ದು ತಪ್ಪಾಯ್ತು. ಗೌರಿಯ ಮೊಬೈಲ್ ಹಬ್ಬ ಮುಗಿದ ನಂತರ ಮಂಕಾಳಿ ಕೈಯಿಂದ ಇತ್ತ ಬರಲೇ ಇಲ್ಲ. ವಾರದಲ್ಲಿ ಕಾಲೇಜಿಗೆ ಹೋಗುವ ಪುಟ್ಟಿ ರಾಗ ಎಳೆದಳು. ''ಕಾಲೇಜಿನಲ್ಲಿ ಎಲ್ರ ಹತ್ರಾನೂ ಮೊಬೈಲ್ ಇದೆ. ಎಮರ್ಜೆನ್ಸಿಯಲ್ಲಿ ಬೇಕಾಗುತ್ತೆ'' ಎಂದಳು. ಮಗಳಿಗೆಂತ ಎಮರ್ಜೆನ್ಸಿ ಕಾಲ್ ಬರುತ್ತೆ... ಮಾಬ್ಲನಿಗೆ ಅರ್ಥವಾಗಲಿಲ್ಲ. ''ಎಮರ್ಜೆನ್ಸಿ ಅಂದ್ರೆ...?'' ಪ್ರಶ್ನಿಸಿದ. ''ಅಷ್ಟೂ ಗೊತ್ತಾಗಿಲ್ಲವಾ ನಿಮಗೆ - ಕಳೆದ ವರ್ಷ ರತಿಯಾದಲ್ಲಿ ಬಯೋತ್ಪಾದಕರು ಶಾಲೆಗೆ ಮುತ್ತಿಗೆ ಹಾಕಿದಾಗ ಅಲ್ಲಿ ಮಕ್ಕಳ ಕೈಯಲ್ಲಿ ಮೊಬೈಲ್ ಇದ್ದಿದ್ದರಿಂದ ತಕ್ಷಣ ಮನೆಲಿದ್ದ ಅಪ್ಪ ಅಮ್ಮಂಗೆ ಗೊತ್ತಾಯ್ತಂತೆ. ಹಾಗೇನಾದ್ರೂ ನಮ್ಮ ಪುಟ್ಟಿ ಕಾಲೇಜಿಗೂ....'' ಮಂಕಾಳಿ ಹೇಳಿದಳು - ''ಸ್ವರಿ ಸ್ವರಿ ಬಿಡು ಗೊತ್ತಾಯ್ತು. ಒಟ್ಟಿನಲ್ಲಿ ಪುಟ್ಟಿಗೊಂದು ಮೊಬೈಲ್ ಬೇಕು ಅಂತಾಯ್ತು.''

ಮರುದಿನ ಮಾಬ್ಲ ಪೇಟೆಯೆಲ್ಲಾ ಸುತ್ತಾಡಿದ. ಒಂದು ಕೊಂಡರೆ ಮತ್ತೊಂದು ಉಚಿತ ಎನ್ನುವ ಸ್ಕೀಂ ಮೊಬೈಲ್‌ಗೂ ಉಂಟಾ ಅಂತ. ಹಾಗೇನಾದರೂ ಇದ್ದರೆ ಪುಟ್ಟನಿಗೂ ಒಂದು ಇರಲಿ ಅಂತ ಸುಮ್ಮನೆ ಇರುತ್ತಾನಾ... ಇಲ್ಲಪ್ಪ. ಮೊಬೈಲ್‌ಗೆ ಉಚಿತ ಸ್ಕೀಂ ಇಲ್ಲ ಅಂತ ತಿಳಿದಾಗ ಪುಟ್ಟಿಗೊಬ್ಬಳಿಗೆ ತಂದುಕೊಟ್ಟ ಮಾಬ್ಲ. ಪುಟ್ಟಿಯ ಮತ್ತು ಮಂಕಾಳಿಯ ಮೊಬೈಲ್ ರಿಂಗ್‌ಟೋನ್ ಮೊಳಗುತ್ತಿದ್ದಂತೆ ಮಗನ ಮುಖ ಧುಮುಧುಮುಗುಟ್ಟಿತು. ಮೂಲ ಸ್ಥಿತಿಗೆ ಬರಲು ಆತನಿಗೊಂದು ಮೊಬೈಲ್ ತರಬೇಕಾಯಿತು. ಅಲ್ಲಿಗೆ ಲ್ಯಾಂಡ್ ಫೋನ್ ಮಾಬ್ಲನಿಗಾಯ್ತು.

ಮೆಣಸಿನಕಾಯಿ ರೇಟಿನಿಂದ ಹಿಡಿದು ಸಾರಿನ ಒಗ್ಗರಣೆಯವರೆಗೂ ಮಂಕಾಳಿ ಮೊಬೈಲ್ ಕೆಲಸ ಮಾಡತೊಡಗಿದರೆ ಮಕ್ಕಳ ಕಿವಿಯಿಂದ ಅವರ ಮೊಬೈಲ್ ಕೆಳಗಿಳಿಯಲೇ ಇಲ್ಲ. ಒಂದೊಂದು ಮೊಬೈಲ್ ಒಂದೊಂದು ರಿಂಗ್‌ಟೋನ್‌ದಿಂದ ಅವರವರ ರೂಮಿನಿಂದ ಮೊಳಗುತ್ತಿದ್ದರೆ... ಎಲ್ಲಾ ಕನ್‌ಫ್ಯೂಸ್. ಮೂರು ಮೊಬೈಲ್‌ಗೆ ತಿಂಗಳ ತಿಂಗಳ ಕೂಳಿನ (ಕಾರ್ಡ್) ಖರ್ಚು ಮಾಬ್ಲನ ಜೇಬಿಗೆ ಕತ್ತರಿ ಹಾಕತೊಡಗಿದಾಗ ಮಾಬ್ಲ ಯೋಚಿಸುತ್ತಿದ್ದಾನೆ. ಮುಂದಿನ ವರ್ಷ ಗೌರಿ ಏನು ಬೇಡುತ್ತಾಳೊ ಅಂತ.



ನನ್ನ ಭವಿಷ್ಯದ ನೇರ ಪ್ರಸಾರ

✧ ಸೂರಿ ಹಾರ್ದಳ್ಳಿ

ಕಾಶೀಪತಿಗೆ ನಾನೇ ಸಲಹೆ ಕೊಟ್ಟಿದ್ದು: ನೀನು ಐವತ್ತು ವರ್ಷಗಳ ಹಿಂದಿನ ಜ್ಯೋತಿಷಿಯ ಹಾಗೆ ಮನೆಯ ಎದುರೊಂದು ಬೋರ್ಡ್ ಹಾಕಿಕೊಂಡರೆ ರಾತ್ರಿಯ ಊಟಕ್ಕೂ ತತ್ವಾರ, ನೋಡೋ, ಕಾಶಿ, ಕಾಸು ಮಾಡಬೇಕಾದರೆ ಈಗ ಮಾಧ್ಯಮಗಳಲ್ಲಿ ಮಿಂಚಬೇಕು. ಎಂದು. ಅವನಿಗೆ ನಾನೇ ಖಾಸಗಿ ಟಿವಿಯೊಂದರಲ್ಲಿ ಯುಗಾದಿಯ ದಿನ ಕೇಳುಗರ ಪ್ರಶ್ನೆಗಳಿಗೆ ಉತ್ತರ ಹೇಳುವ ನೇರ ಪ್ರಸಾರಕ್ಕೆ ಅವಕಾಶ ದೊರಕಿಸಿದ್ದು: ಟಿವಿ ಚಾನೆಲ್‌ರವರಿಗೆ ಫೀಸು ಕಟ್ಟಿ. ನಾನೇ ಅವನ ಮೊದಲ ಬಲಿಪಶು. ಪಾಪ, ಅವನೂ ಬದುಕಲಿ! ನಾಸ್ತಿಕನೂ ಕುತೂಹಲದಿಂದ, ಒಳಗೊಳಗೇ ಆಸಕ್ತಿಯಿಂದ ನೋಡುವ ಕಾರ್ಯಕ್ರಮ ಭವಿಷ್ಯವಾಣಿ. ಜನಪ್ರಿಯತೆಯ ವಿಷಯದಲ್ಲಿ ಕ್ರೈಮ್ ಡೈರಿಯ ನಂತರ ಅದೇ ಎರಡನೆಯದು. ಮೆಟ್ಟಿಲುಕಲ್ಲು ನಾಳೆ ಚಿನ್ನದ ಗಟ್ಟಿಯಾಗಬಹುದೇ ಎಂಬ ಭಯಂಕರ ಆಸೆಯೊಂದಿಗೆ ಅಕ್ಷೋಹಿಣಿ ಪ್ರಜೆಗಳು ಟಿವಿ ಪರದೆಯ ಮೇಲೆ ಕಣ್ಣು ನೆಟ್ಟಿರುತ್ತವೆ.

ನಾನು ಮತ್ತು ಕಾಶಿ ಬಾಲ್ಯ ಗೆಳೆಯರು. ನನ್ನ ಬಗ್ಗೆ ಅವನಿಗೆ ಗೊತ್ತಿರದಿರುತ್ತದೆಯೇ? ಮೂರು ದಿನಗಳ ಮೊದಲೇ ಹೇಳಿದ್ದ, ನೋಡೋ ಸುರೇಶ, ನೀನು ನನಗೆ ಫೋನ್ ಮಾಡಿ ಫೋನ್ ಬಿಲ್ ಹೆಚ್ಚಿಸಿಕೊಳ್ಳಬೇಡ. ನಮ ಕೇಂದ್ರದಿಂದಲೇ ಮಾಡುತ್ತೇವೆ. ಆದರೆ ನೀನೇ ಕರೆ ಮಾಡಿದವನ ಹಾಗೆ ಮಾತಾಡಬೇಕು, ತಿಳೀತಾ? ಎಂದು. ಸ್ವಲ್ಪ ತಯಾರಿಯೂ ಕೊಟ್ಟಿದ್ದ.

ಯಾರಪ್ಪನ ಗಂಟೇನು ಖರ್ಚಾಗುತ್ತದೆ? ನಾನು ಸರಿ ಎಂದಿದ್ದೆ.

ನ್ನ ಮನೆಯ ಫೋನ್ ಗುಣುಗುಟ್ಟಿತು. ಯಾರು? ಎಂದೆ.

ನಾನೇ ಕಣೋ, ಕಾಶೀಪತಿ. ಟಿವಿ ಸ್ಟೇಷನ್ನಿನಲ್ಲಿ ಇದ್ದೀನಿ. ಈಗ ನೀನು ನನಗೆ ಪ್ರಶ್ನೆ ಕೇಳಬೇಕು, ಎಂದ. ನಾನು ಅವನ ಸೂಚನೆಗಳನ್ನು ತಪ್ಪದೇ ಪಾಲಿಸಿದೆ.

''ನಮಸ್ಕಾರ ವಿದ್ವಾನ್‌ರೂ, ಹಸ್ತಸಾಮುದ್ರಿಕೆ, ಜಾತಕ, ಲಗ್ನ, ನಕ್ಷತ್ರ, ಮೊದಲಾದವುಗಳು ಪ್ರಕಾಂಡ ಪರಿಣಿತರೂ ಆದ ಕಾಶೀಪತಿಯವರಿಗೆ. ನಿಮಗೆ ಯುಗಾದಿಯ ಶುಭಾಶಯಗಳು, ನಾನೆಂದೆ. ಈ ಪದಗಳನ್ನು ಬಳಸಬೇಕೆಂದು ಅವನೇ ಹೇಳಿದ್ದು!

ನಿಮಗೂ ಯುಗಾದಿಯ ಶುಭಾಶಯಗಳು. ಏನು ನಿಮ್ಮ ಹೆಸರು? ಕೇಳಿದರು ಕಾಶೀಪತಿಯವರು.

ಈ ಅಯೋಗ್ಯನಿಗೆ ನನ್ನ ಹೆಸರು ಗೊತ್ತಿಲ್ಲವೇ? ಆದೂ ಶಿಷ್ಟಾಚಾರದಂತೆ ಸುರೇಶ ಎಂದೆ.

ಒಂದು ನಿಮಿಷ, ಕಾಶೀಪತಿ ಎಂದ ಕಾಶೀಪತಿ ಲ್ಯಾಪ್‌ಟಾಪ್ ಆನ್ ಮಾಡಿದರು. ಈಗ ಸಮಯ ಎಂಟೂವರೆ ಗಂಟೆ, ಶನಿವಾರ. ಹೆಸರು ಸುರೇಶ. ಸಮಯಾಧಿಪತಿ ಕುಜ. ನಾನು ಪೂರ್ವಕ್ಕೆ ಮುಖ ಮಾಡಿ ಕುಳಿತಿದ್ದೇನೆ. ನನ್ನ ಲೆಕ್ಕಾಚಾರದ ಪ್ರಕಾರ ನೀವು ಬೆಂಗಳೂರಿನ ದಕ್ಷಿಣ ಭಾಗದಿಂದ ಫೋನ್ ಮಾಡುತ್ತಿದ್ದೀರಿ. ಜಾಗದ ಹೆಸರು ಜ ಅಕ್ಷರದಿಂದ ಶುರುವಾಗುತ್ತದೆ. ಸರಿತಾನೇ? ಎಂದರು.

ಹೌದು ಸರ್.. ಎಂದೆ. ನಾನಿರೋದು ಜೆ.ಪಿ.ನಗರದಲ್ಲಿ. ವಿದ್ವಾನ್ ಕಾಶೀಪತಿಯವರೇ, ನೀವು ಪ್ರಕಾಂಡ ಪಂಡಿತರೆಂಬುವುದರಲ್ಲಿ ಸಂಶಯವೇ ಇಲ್ಲ. ನಿಮ ಹೆಸರು ದೇಶವಿದೇಶಗಳಲ್ಲಿ ಆಚಂದ್ರಾರ್ಕವಾಗಿ ಬೆಳಗಲಿ, ಎಂದೆ.

ಅವರು ಗಪಗಹಿಸಿ ನಕ್ಕರು. ಆಹಾ.. ಆ ನಗುವಿನಲ್ಲಿಯೂ ಎಂತಹ ಪ್ರೌಢತೆ ಇದೆ, ವಿದ್ವೆಯ ಝುಳಕೇ ಇದೆ.

ಸರಿ, ನಿಮ್ಮ ಹುಟ್ಟಿದ ನಕ್ಷತ್ರ, ರಾಶಿ ಹೇಳಿ. ತಿಳಿಯದಿದ್ದರೆ ತಾರೀಕು, ಸಮಯ ಹೇಳಿ ಸುರೇಶ್‌ರವರೇ, ಎಂದ ಕಾಶೀಪತಿ.

ನಾನು ದಿನಾಂಕ ಹೇಳಿದೆ. ಹುಟ್ಟಿದ ಸಮಯ ಗೊತ್ತಿಲ್ಲ, ಯಾಕೆಂದರೆ ಆಗ ನನ್ನ ಕೈಲಿ ವಾಚಿರಲಿಲ್ಲ.

ಮತ್ತೆ ಕಾಶೀಪತಿ ಲ್ಯಾಪ್‌ಟಾಪ್‌ನತ್ತ ಕಣ್ಣು ಹಾಯಿಸಿದರು. ಅಂದರೆ ನೀವು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೀರಿ.. ಒಬ್ಬ ತರಲೆ ಬಾಸ್ ಇದ್ದಾನೆ. ನಿಮ ಮೇಲೆ ಸದಾ ಹಾರಾಡುತ್ತಾನೆ, ಚೀರಾಡುತ್ತಾನೆ. ಸರಿ ತಾನೇ? ಎಂದ.

ಬೋ.. ಮಗ.. ಕಂಪನಿಯ ವಿಷಯವನ್ನೆಲ್ಲ ಜಗಜ್ಜಾಹೀರು ಮಾಡುತ್ತಾನೆ, ಎನಿಸಿತು.

ನಾನು ಪ್ರತಿಕ್ರಿಯಿಸುವ ಮೊದಲೇ ಎಂದ, ಮೂರನೆಯ ಸ್ಥಾನದಲ್ಲಿ ಶನಿ ಇರುವುದರಿಂದ ಹೀಗಾಗುತ್ತದೆ. ಇನ್ನು ಎರಡು ತಿಂಗಳು, ಮೂರು ದಿನ ಹನ್ನೆರಡು ಗಂಟೆಗಳಲ್ಲಿ ಎಲ್ಲಾ ಸರಿಹೋಗುತ್ತದೆ. ಈಗ ನಿಮ್ಮ ಪ್ರಶ್ನೆ ಕೇಳಿ..

ನನ್ನ ಮಗ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಾನೆ. ಅಲ್ಲಿ ತಮಿಳರ ಪ್ರಾಬಲ್ಯ. ಹಾಗಾಗಿ..

ಬೆಂಗಳೂರಿನಲ್ಲಿ ತಮಿಳರೇ ಜಾಸ್ತಿ. ಒಬ್ಬ ತಮಿಳಿಗ ಒಂದು ಸಂಸ್ಥೆಗೆ ಸೇರಿದರೆ ಅವನ ಹಿಂದೆ ಹತ್ತು ಜನ ಸೇರುತ್ತಾರೆ. ನನ್ನ ಸಲಹೆ ಏನೆಂದರೆ ನಿಮ್ಮ ಮಗನೂ ತಮಿಳು ಕಲಿಯೋದು ಜಾಣತನ, ಅವನು ಮತ್ತೆ ಲ್ಯಾಪ್ ಟಾಪ್ ನೋಡಿದ. ನಿಮ್ಮ ಮಗನಿಗೆ ಇಪ್ಪತ್ತು ವರ್ಷ. ನೋಡಲು ಸುಮಾರಾಗಿದ್ದಾನೆ. ಪಿಜ್ಜ ಮತ್ತು ಚಿಪ್ಸ್ ಅವನಿಗೆ ಇಷ್ಟ. ಕೋಲಾ ಬಾಟಲಿಯಲ್ಲಿ ಚರಂಡಿ ನೀರು ತುಂಬಿ ಕೊಟ್ಟರೂ ಸಂತೋಷದಿಂದ ಕುಡಿಯುತ್ತಾನೆ. ಸರಿ ತಾನೇ?

ಈಗಿನ ತರುಣ ಜನಾಂಗವೇ ಹಾಗೆ. ಮೊಬೈಲ್, ಎಸ್.ಎಂ.ಎಸ್., ಪಿಜ್ಜ ಮತ್ತು ಕೋಲಾಗಳೇ ಅವರ ಪ್ರಪಂಚ. ಈ ಕಾಶಿ ಹಾಗೆಲ್ಲ ಹೇಳಿ ನನ್ನ ಮರ್ಯಾದೆ ಕಳೆಯಬಾರದಿತ್ತು.

ಇನ್ನೇನಾದರೂ ಪ್ರಶ್ನೆ? ಕೇಳಿದ ಕಾಶಿ.

ನನ್ನ ಆರ್ಥಿಕ ಪರಿಸ್ಥಿತಿ ಎಂದು ಸುಧಾರಿಸುತ್ತದೆ? ಎಲ್ಲರೂ ಕೇಳುವ ಪ್ರಶ್ನೆ ಇದು. ಬಿರ್ಲ, ಅಂಬಾನಿ, ಬಿಲ್ ಗೇಟ್ಸ್, ಡಿ.ಕೆ.ಶಿ., ಮಾಜಿ ಪ್ರಧಾನಿ ಕೂಡಾ ಇದೇ ಪ್ರಶ್ನೆಗಳನ್ನು ಕೇಳುತ್ತಾರೆ. ಯಾರಿಗೆ ಸಾಲುತ್ತೆ ಹಣ?


ಅಂದರೆ ನಿಮ ಆದಾಯಕ್ಕಿಂತ ವೆಚ್ಚವೇ ಜಾಸ್ತಿ. ರಾಹು ಕೇತುಗಳು ನಿಮ್ಮ ಲಗ್ನದ ಮೇಲೆ ದೃಷ್ಟಿ ಬೀರಿವೆ, ಎಂದ ಕಾಶೀಪತಿ.

ನನ್ನ ಲಗ್ನವಾದ ದಿನವೇ ಆ ವಿಷಯ ನನಗೆ ತಿಳಿದುಬಿಟ್ಟಿತ್ತು. ಅಂದಿನಿಂದಲೇ ನನ್ನ ಖರ್ಚು ಮಿತಿ ಮೀರಿದ್ದು. ಆ ರಾಹು ಕೇತುಗಳ ತಲೆ ಇನ್ನೊಂದೆಡೆಗೆ ತಿರುಗಿಸಿ, ಆ ದೃಷ್ಟಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೇ? ನಾನು ಕೇಳಿದೆ.

ಕಾಶಿ ಗಹಗಹಿಸಿ ನಕ್ಕರು. ಈ ಕಾರ್ಯಕ್ರಮದಲ್ಲಿ ಒಬ್ಬರು ಮೂರು ಪ್ರಶ್ನೆಗಳನ್ನು ಮಾತ್ರ ಕೇಳಬಹುದು. ಹೆಚ್ಚಿನ ವಿವರಗಳು ಬೇಕಾದರೆ ನಮ್ಮ ಕಚೇರಿಗೆ ಬರಬೇಕು. ಮೊದಲೇ ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬನ್ನಿ, ಎಂದು ಕಾಶಿ ಫೋನ್ ಕತ್ತರಿಸಿದ.

ಯುಗಾದಿಗೆ ಮೂರು ದಿನಗಳ ಹಿಂದೆ ರೆಕಾರ್ಡ್ ಆದದ್ದು ಇದು, ಯುಗಾದಿ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಪ್ರಸಾರವಾಯಿತು.

ಈಗ ನಗರದ ಕೇಂದ್ರಭಾಗದಲ್ಲಿ ತನ್ನ ಜ್ಯೋತಿಷ್ಯ ಕೇಂದ್ರವನ್ನು ತೆರೆದಿದ್ದಾನೆ ಕಾಶಿ. ನಾಲ್ಕು ಜನ ಸಹಾಯಕರು, ಒಬ್ಬ ಸೆಕ್ರೆಟರಿ. ಭವಿಷ್ಯ ಕೇಳಬೇಕೆಂದರೆ ಮೂರು ತಿಂಗಳ ಮೊದಲೇ ಬುಕ್ ಮಾಡಿಸಬೇಕು. ಪಾಪ, ಚೆನ್ನಾಗಿರಲಿ. ಬಲಿಯಾಗಲೆಂದೇ ಸಿದ್ಧವಾಗಿರುವ ಕುರಿಗಳಿರುವಲ್ಲಿ ತೋಳವನ್ನೇಕೆ ದೂಷಿಸಬೇಕು?









Mailing Date 5th of every month
Reg. No.: CPMG/KA/BGW-544/2003-05
Rni : KAR KAN / 2005/ 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999. Editor: M. SHIVAKUMAR